ಸಂಪುಟ: 06 ಸಂಚಿಕೆ: 227 ಪುಟಗಳು: 08 ಸೋಮವಾರ 02 ನವೆಂಬರ್ 2026 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035621249 ₹5

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಮುಂಜಾನೆ ಮಾತು

ಸೋಲು ಎಂಬುದು ಅಂತಿಮವಲ್ಲ, ಅದು ಗೆಲುವಿನ ಹಾದಿಯಲ್ಲಿ ಸಿಗುವ ಒಂದು ಪಾಠವಷ್ಟೇ. ನಿಮ್ಮ ಗುರಿಯತ್ತ ಸಾಗುವ ಹಾದಿಯಲ್ಲಿ ಅಡೆತಡೆಗಳು ಎದುರಾದಾಗ ಧೃತಿಗೆಡಬೇಡಿ. ಕತ್ತಲೆ ಹೆಚ್ಚಾದಷ್ಟೂ ಸೂರ್ಯೋದಯ

ನ್ಯಾ. ಅರವಿಂದ ಕುಮಾರ್ ಕರೆ, ಬೆಂಗಳೂರಲ್ಲಿ 37 ದಿನಗಳ ಕನ್ನಡ ಪುಸ್ತಕ ಹಬ್ಬಕ್ಕೆ ಚಾಲನೆ

• ಉದಯವಾಹಿನಿ, ಬೆಂಗಳೂರು

ಪುಸ್ತಕ ಓದುವ ಅಭ್ಯಾಸವನ್ನು ಜೀವನದ ಭಾಗವಾಗಿಸಿಕೊಳ್ಳಬೇಕು. ಪ್ರತಿದಿನ ಓದಿಗೆ ಸ್ವಲ್ಪ ಸಮಯ ಮೀಸಲಿಡುವ ಮೂಲಕ ಸಮಾಜದಲ್ಲಿ ಉತ್ತಮ ಓದುವ ಸಂಸ್ಕೃತಿಯನ್ನು ಬೆಳೆಸಬೇಕು ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರವಿಂದ ಕುಮಾರ್ ಕರೆ ನೀಡಿದ್ದಾರೆ.

ರಾಷ್ಟ್ರೋತ್ಥಾನ ಸಾಹಿತ್ಯದ ವತಿಯಿಂದ ಬೆಂಗಳೂರಿನ ಕೆಂಪೇಗೌಡನಗರದಲ್ಲಿರುವ ರಾಷ್ಟ್ರೋತ್ಥಾನ ಪರಿಷತ್‌ನ 'ಕೇಶವಶಿಲ್ಪ' ಸಭಾಂಗಣದಲ್ಲಿ ಆಯೋಜಿಸಿರುವ 6ನೇ 'ಕನ್ನಡ ಪುಸ್ತಕ ಹಬ್ಬ 2026' ಉದ್ಘಾಟಿಸಿ ಅವರು ಮಾತನಾಡಿದರು. ಅಕ್ಟೋಬರ್ 31ರಿಂದ ಡಿಸೆಂಬರ್ 6ರವರೆಗೆ ಒಟ್ಟು 37 ದಿನಗಳ ಕಾಲ ಈ ಸಾಹಿತ್ಯ ಮತ್ತು ಸಂಸ್ಕೃತಿ ಉತ್ಸವ ನಡೆಯಲಿದೆ. ಪುಸ್ತಕ ಹಬ್ಬವೆಂದರೆ ಲೇಖಕ ಮತ್ತು ಓದುಗ ಭೇಟಿಯಾಗುವ ಸುಂದರ ಸಂದರ್ಭ. ಒಂದು ತಲೆಮಾರಿನ ಅನುಭವ ಮತ್ತೊಂದು ತಲೆಮಾರಿನ ಕುತೂಹಲದೊಂದಿಗೆ ಸಂವಾದ ನಡೆಸುವ ಅವಕಾಶ ಎಂದು ನ್ಯಾಯಮೂರ್ತಿ ಅರವಿಂದ ಕುಮಾರ್ ಹೇಳಿದರು. ಒಂದು ಪುಸ್ತಕದ ತೂಕ ಕೆಲವು ಗ್ರಾಂಗಳಷ್ಟಿರಬಹುದು. ಆದರೆ ಅದು ಹೊತ್ತಿರುವ ಅನುಭವ ಶತಮಾನಗಳದ್ದಾಗಿರಬಹುದು. ಪುಸ್ತಕದ ಪುಟಗಳು ಸೀಮಿತವಾಗಿದ್ದರೂ, ಅದು ತೆರೆದಿಡುವ ಸಾಧ್ಯತೆಗಳು ಅಪಾರವಾಗಿರುತ್ತವೆ.

ಕನ್ನಡ ರಾಜ್ಯೋತ್ಸವದಂದೇ ಬೆಂಗಳೂರು-ಮುಂಬೈ ವಂದೇ ಭಾರತ್ ಸ್ಲೀಪರ್ ರೈಲಿಗೆ ಚಾಲನೆ

• ಉದಯವಾಹಿನಿ, ಬೆಂಗಳೂರು

ಕನ್ನಡ ರಾಜ್ಯೋತ್ಸವ (ಕರ್ನಾಟಕ ರಾಜ್ಯ ಸಂಸ್ಥಾಪನಾ ದಿನ)ದ ಸುಸಂದರ್ಭದಲ್ಲಿ ಸಿಲಿಕಾನ್ ಸಿಟಿ ಬೆಂಗಳೂರು ಮತ್ತು ಆರ್ಥಿಕ ನಗರಿ ಮುಂಬೈ ನಡುವೆ ಸಂಪರ್ಕ ಕಲ್ಪಿಸುವ ಬಹುನಿರೀಕ್ಷಿತ ವಂದೇ ಭಾರತ್ ಸ್ಲೀಪರ್ ಎಕ್ಸ್‌ಪ್ರೆಸ್ ರೈಲು ಸೇವೆಗೆ ಭಾನುವಾರ ಚಾಲನೆ ದೊರೆತಿದೆ. ಇಲ್ಲಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ರೈಲು ನಿಲ್ದಾಣದಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ದಕ್ಷಿಣ ಭಾರತದ ಪ್ರಥಮ ವಂದೇ ಭಾರತ್ ಸ್ಲೀಪರ್ ಎಕ್ಸ್‌ಪ್ರೆಸ್ ಹಸಿರು ನಿಶಾನೆ ತೋರಿಸುವ ಮೂಲಕ ಈ ಅತ್ಯಾಧುನಿಕ ರೈಲಿಗೆ ಅಧಿಕೃತವಾಗಿ ಚಾಲನೆ ನೀಡಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ ಮತ್ತು ಹೆಚ್.ಡಿ. ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ಸಂಸದರಾದ ತೇಜಸ್ವಿ ಸೂರ್ಯ, ಪಿ.ಸಿ. ಮೋಹನ್ ಮತ್ತು ಸಿ.ಎನ್. ಮಂಜುನಾಥ್, ಬಿಜೆಪಿ ರಾಜ್ಯಸಭಾ ಸದಸ್ಯರಾದ ಲೆಹರ್ ಸಿಂಗ್ ಸಿರೋಯಾ ಮತ್ತು ಜಗ್ಗೇಶ್ ಉಪಸ್ಥಿತರಿದ್ದರು. ಗಣ್ಯರು ಹೊಸ ರೈಲಿನ ಒಳಗೆ ಸಂಚರಿಸಿ ಸೌಲಭ್ಯಗಳನ್ನು ವೀಕ್ಷಿಸಿದರು.

ಗಾಂಧಿ ಹತ್ಯೆಯ ಸತ್ಯ' ನಾಟಕ ಪ್ರದರ್ಶನ ವೇಳೆ ಅಡ್ಡಂಡ ಕಾರ್ಯಪ್ಪ ಮುಖಕ್ಕೆ ಮಸಿ ಬಳಿದು ಆಕ್ರೋಶ

• ಉದಯವಾಹಿನಿ, ಬೆಂಗಳೂರು

ಬನಶಂಕರಿಯ ಸುಚಿತ್ರ ಸಾಂಸ್ಕೃತಿಕ ಅಕಾಡೆಮಿಯಲ್ಲಿ 'ಗಾಂಧಿ ಹತ್ಯೆಯ ಸತ್ಯ' ನಾಟಕ ಪ್ರದರ್ಶನದ ವೇಳೆ ಗದ್ದಲ ಉಂಟಾಗಿ ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಅವರ ಮುಖಕ್ಕೆ ಮಸಿ ಬಳಿಯಲಾಗಿದೆ. ನಾಟಕದಲ್ಲಿ ಮಹಾತ್ಮ ಗಾಂಧೀಜಿ ವಿರುದ್ಧ ಆಕ್ಷೇಪಾರ್ಹ ಸಂಭಾಷಣೆ ಬಳಸಲಾಗಿದೆ ಎಂದು ಆಕ್ರೋಶಗೊಂಡ ಸಂಘಟನೆಗಳ ಮುಖಂಡರು, ಅಕಾಡೆಮಿಗೆ ನುಗ್ಗಿದ್ದರು. ಬಳಿಕ ಮಾತಿನ ಚಕಮಕಿ ನಡೆದು ಅಡ್ಡಂಡ ಕಾರ್ಯಪ್ಪ ಅವರಿಗೆ ಮಸಿ ಬಳಿಯಲಾಗಿದೆ.ಬನಶಂಕರಿ ಎರಡನೇ ಹಂತದಲ್ಲಿರುವ ಅಕಾಡೆಮಿಯಲ್ಲಿ 'ಕೊಡಗು ರಂಗಭೂಮಿ ಟ್ರಸ್ಟ್'ನಿಂದ ಗಾಂಧಿ ಹತ್ಯೆಯ ಸತ್ಯ' ಎಂಬ ನಾಟಕ ಪ್ರದರ್ಶನ ಆಯೋಜಿಸಲಾಗಿತ್ತು. ಈ ನಾಟಕವನ್ನು ಅಡ್ಡಂಡ ಕಾರ್ಯಪ್ಪ ಅವರೇ ನಿರ್ದೇಶನ ಮಾಡಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರ ಮಹಾತ್ಮ ಗಾಂಧಿಯವರನ್ನು ದೇಶ ವಿರೋಧಿ ಹಾಗೂ ಮುಸ್ಲಿಮರ ಪರ ಎಂದು ಬಿಂಬಿಸಿ ಸುಳ್ಳು ಪ್ರಚಾರ ಮಾಡಿದ್ದಾರೆ. ನಾಟಕದ ಮೂಲಕ ಅಡ್ಡಂಡ ಕಾರ್ಯಪ್ಪ ತಪ್ಪು ಸಂದೇಶ ರವಾನೆ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ.

ಸಂಕಷ್ಟದಲ್ಲಿ ಸಿಲುಕಿದ 6 ಭಾರತೀಯ ಪ್ರವಾಸಿಗರು

• ಉದಯವಾಹಿನಿ, ಕಠ್ಮಂಡು

ನೇಪಾಳದಲ್ಲಿ ಭಾರೀ ಹಿಮಪಾತದಿಂದಾಗಿ ಆರು ಮಂದಿ ಭಾರತೀಯ ಪ್ರವಾಸಿಗರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಬ್ಬರು ಮಹಿಳೆಯರು ಸೇರಿದಂತೆ ಆರು ಪ್ರವಾಸಿಗರು ಶೇ-ಫೋಕ್ಸುಂಡೋ ರಾಷ್ಟ್ರೀಯ ಉದ್ಯಾನವನದ ಪ್ರದೇಶದಲ್ಲಿ ಸಿಲುಕಿಕೊಂಡಿದ್ದು, ಅವರನ್ನು ಸುರಕ್ಷಿತವಾಗಿ ರಕ್ಷಿಸಲು ಭದ್ರತಾ ಸಿಬ್ಬಂದಿ ಕಾರ್ಯಾಚರಣೆ ಆರಂಭಿಸಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಶೇ-ಫೋಕ್ಸುಂಡೋ ಗ್ರಾಮೀಣ ಪುರಸಭೆಯ 8ನೇ ವಾರ್ಡ್‌ನಲ್ಲಿರುವ ಧೋ ಪ್ರದೇಶಕ್ಕೆ ಭಾರತೀಯ ಪ್ರವಾಸಿಗರು ತೆರಳಿದ್ದರು.

ಈ ಪ್ರದೇಶದಲ್ಲಿ ಭಾರೀ ಪ್ರಮಾಣದ ಹಿಮಪಾತವಾಗಿದ್ದು, ಪ್ರವಾಸಿಗರು ಅಲ್ಲಿಂದ ಹೊರಬರಲು ಸಾಧ್ಯವಾಗದೆ ಸಿಲುಕಿಕೊಂಡಿದ್ದಾರೆ ಎಂದು ಡೋಲ್ಪಾ ಜಿಲ್ಲೆಯ ಮುಖ್ಯ ಜಿಲ್ಲಾ ಅಧಿಕಾರಿ ಜುನೂ ಧಕಾಲ್ ತಿಳಿಸಿದ್ದಾರೆ. ಪ್ರವಾಸಿಗರು ಸಿಲುಕಿರುವ ಪ್ರದೇಶವನ್ನು ಈಗಾಗಲೇ ಪತ್ತೆಹಚ್ಚಲಾಗಿದೆ.





ಕಂಠೀರವ ಕ್ರೀಡಾಂಗಣದಲ್ಲಿ 71ನೇ ಕನ್ನಡ ರಾಜ್ಯೋತ್ಸವ ಸಂಭ್ರಮ, ಸಡಗರದಿಂದ ನೆರವೇರಿದೆ. ರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭಾಗವಹಿಸಿ, ನಾಡಿನ ಸಮಸ್ತ ಕನ್ನಡಿಗರಿಗೆ ಕನ್ನಡ ರಾಜ್ಯೋತ್ಸವದ ಶುಭಾಶಯಗಳನ್ನು ಕೋರಿದರು. ಸಚಿವ ಮಧು ಬಂಗಾರಪ್ಪ ಸೇರಿದಂತೆ ಗಣ್ಯರು ಈ ಸಂಭ್ರಮದ ಕ್ಷಣಕ್ಕೆ ಸಾಕ್ಷಿಯಾದರು. ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಕನ್ನಡಿಗರ ಬದುಕಿನ ಪ್ರತಿಯೊಂದು ಹೆಜ್ಜೆಯಲ್ಲೂ ಕನ್ನಡವೇ ಉಸಿರಾಗಬೇಕು ಎಂಬ ಸಂದೇಶ ಸಾರಿದರು. ಎರಡು ಸಾವಿರಕ್ಕೂ ಹೆಚ್ಚು ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ಕನ್ನಡ ಭಾಷೆ, ಶಾಸ್ತ್ರೀಯ ಭಾಷೆಯ ಸ್ಥಾನಮಾನ ಜೊತೆಗೆ ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನ ಪಡೆದಿರುವುದು ಪ್ರತಿಯೊಬ್ಬ ಕನ್ನಡಿಗನಿಗೂ ಹೆಮ್ಮೆಯ ಸಂಗತಿ. ಪಂಪ, ರನ್ನ, ಬಸವಣ್ಣನವರಿಂದ ಹಿಡಿದು ಕುವೆಂಪು, ದ.ರಾ.ಬೇಂದ್ರೆ ಹಾಗೂ ಶಿವರಾಮ ಕಾರಂತರಂತಹ ಮಹಾನ್ ಸಾಹಿತಿಗಳನ್ನ ಜಗತ್ತಿಗೆ ಪರಿಚಯಿಸಿದ ಶ್ರೀಮಂತ ಪರಂಪರೆ ಕನ್ನಡ ಭಾಷೆಗಿದೆ ಎಂದು ಸಿಎಂ ಸ್ಮರಿಸಿದರು.

ಕನ್ನಡಾಂಬೆಗೆ ನಮನ



ಕನ್ನಡ ಬಾವುಟಕ್ಕೆ ರಾಷ್ಟ್ರಧ್ವಜದ ಸ್ಥಾನಮಾನ

•ಉದಯವಾಹಿನಿ, ಬೆಂಗಳೂರು

ಕನ್ನಡ ಭಾಷೆ ಪ್ರೀತಿಸುವುದು ತಾಯಿಯನ್ನ ಪ್ರೀತಿಸಿದಂತೆ. ಇಂದಿನ ಡಿಜಿಟಲ್ ಯುಗದಲ್ಲಿ ಮೊಬೈಲ್ ಸೇರಿದಂತೆ ಎಲ್ಲಾ ತಂತ್ರಜ್ಞಾನಗಳಲ್ಲೂ ಕನ್ನಡ ಬಳಕೆಗೆ ಅವಕಾಶವಿದೆ. ಹೀಗಾಗಿ ಮಕ್ಕಳು ಮೊದಲು ಕನ್ನಡವನ್ನು ಕಲಿಯಬೇಕು, ತಮ್ಮ ದೈನಂದಿನ ಬದುಕಿನಲ್ಲಿ ಕನ್ನಡವನ್ನು ಹೆಚ್ಚು ಹೆಚ್ಚು ಬಳಸಬೇಕು ಎಂದು ಸಲಹೆ ನೀಡಿದರು. ನಾಡಗೀತೆ ಇರುವಂತೆ, ಕನ್ನಡಿಗರ ಸ್ವಾಭಿಮಾನ ಮತ್ತು ಅಸ್ಮಿತೆಯನ್ನ ಪ್ರತಿಬಿಂಬಿಸುವ ಅಧಿಕೃತ ನಾಡಧ್ವಜವೂ ಇರಬೇಕು ಎಂಬುದು ರಾಜ್ಯ ಸರ್ಕಾರದ ಆಶಯವಾಗಿದೆ. ಈಗಾಗಲೇ ಇರುವ ನಾಡಧ್ವಜಕ್ಕೆ ಅಧಿಕೃತ ಮಾನ್ಯತೆ ನೀಡುವ ವಿಚಾರವಾಗಿ ಬೆಳಗಾವಿ ಅಧಿವೇಶನದಲ್ಲಿ ಚರ್ಚೆ ನಡೆಸಿ, ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮಹತ್ವದ ಘೋಷಣೆ ಮಾಡಿದ್ದಾರೆ. ಇದೇ ವೇಳೆ ರಾಜ್ಯದ ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಹಾಗೂ ಸರ್ಕಾರಿ ಶಾಲೆಗಳ ಬಲವರ್ಧನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆಯೂ ಅವರು ವಿವರಿಸಿದರು. ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ 15 ಸಾವಿರ ಶಿಕ್ಷಕರ ನೇಮಕಕ್ಕೆ ಆದೇಶ ಹೊರಡಿಸಲಾಗಿದೆ. ಜೊತೆಗೆ ರಾಜ್ಯಾದ್ಯಂತ ಒಟ್ಟು 25,498 ದ್ವಿಭಾಷಾ ಶಾಲೆಗಳನ್ನ ಆರಂಭಿಸಲಾಗಿದೆ.

ವಿದ್ಯಾರ್ಥಿಗಳು ಆಧುನಿಕ ತಂತ್ರಜ್ಞಾನದ ಸವಾಲುಗಳನ್ನು ಎದುರಿಸಲು ಸಜ್ಜಾಗಬೇಕೆಂಬ ಉದ್ದೇಶದಿಂದ ಆರನೇ ತರಗತಿಯಿಂದ ಹನ್ನೆರಡನೇ ತರಗತಿವರೆಗೆ ಕೃತಕ ಬುದ್ಧಿಮತ್ತೆಯ ಕುರಿತು ತರಬೇತಿ ನೀಡಲು ಸರ್ಕಾರ ಮುಂದಾಗಿದೆ ಎಂದರು. ಗ್ರಾಮೀಣ ಭಾಗದ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ವೈದ್ಯಕೀಯ, ಇಂಜಿನಿಯರಿಂಗ್ ಸೇರಿದಂತೆ ವೃತ್ತಿಪರ ಉನ್ನತ ಶಿಕ್ಷಣದಲ್ಲಿ ಶೇ.7.5ರಷ್ಟು ವಿಶೇಷ ಮೀಸಲಾತಿ ಕಲ್ಪಿಸಲಾಗಿದೆ.

ವಿದ್ಯಾರ್ಥಿಗಳಿಗೆ ಗ್ರಾಮೀಣ ಬದುಕು, ಅಲ್ಲಿನ ಸಂಸ್ಕೃತಿ ಹಾಗೂ ಜೀವನಶೈಲಿಯ ಪರಿಚಯ ಮಾಡಿಕೊಡುವ ಉದ್ದೇಶದಿಂದ ಗ್ರಾಮಾನುಭವ ಮತ್ತು ಗ್ರಾಮ ವಾಸ್ತವ್ಯ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಕ್ರೀಡಾಕ್ಷೇತ್ರದಲ್ಲಿಯೂ ರಾಜ್ಯದ ಕ್ರೀಡಾಪಟುಗಳಿಗೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ಏಷ್ಯನ್ ಗೇಮ್‌ನಲ್ಲಿ ಪದಕ ಗೆದ್ದು ದೇಶ ಹಾಗೂ ರಾಜ್ಯದ ಕೀರ್ತಿ ಹೆಚ್ಚಿಸಿದ ಕನ್ನಡಿಗರನ್ನ ನಗದು ಬಹುಮಾನ ನೀಡಿ ಗೌರವಿಸಲಾಗಿದೆ. ಚಿನ್ನದ ಪದಕ ವಿಜೇತರಿಗೆ ಒಂದು ಕೋಟಿ ರೂಪಾಯಿ, ಬೆಳ್ಳಿ ಪದಕ ವಿಜೇತರಿಗೆ 75 ಲಕ್ಷ ರೂಪಾಯಿ ಹಾಗೂ ಕಂಚಿನ ಪದಕ ವಿಜೇತರಿಗೆ 50 ಲಕ್ಷ ರೂಪಾಯಿ ಬಹುಮಾನ ನೀಡಲಾಗಿದೆ. ಕ್ರೀಡಾಕ್ಷೇತ್ರದಲ್ಲಿಯೂ ರಾಜ್ಯದ ಕ್ರೀಡಾಪಟುಗಳಿಗೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ಏಷ್ಯನ್ ಗೇಮ್ಸ್‌ನಲ್ಲಿ ಪದಕ ಗೆದ್ದು ದೇಶ ಹಾಗೂ ರಾಜ್ಯದ ಕೀರ್ತಿ ಹೆಚ್ಚಿಸಿದ ಕನ್ನಡಿಗರನ್ನ ನಗದು ಬಹುಮಾನ ನೀಡಿ ಗೌರವಿಸಲಾಗಿದೆ. ಚಿನ್ನದ ಪದಕ ವಿಜೇತರಿಗೆ ಒಂದು ಕೋಟಿ ರೂಪಾಯಿ, ಬೆಳ್ಳಿ ಪದಕ ವಿಜೇತರಿಗೆ 75 ಲಕ್ಷ ರೂಪಾಯಿ ಹಾಗೂ ಕಂಚಿನ ಪದಕ ವಿಜೇತರಿಗೆ 50 ಲಕ್ಷ ರೂಪಾಯಿ ಬಹುಮಾನ ನೀಡಲಾಗಿದೆ ಎಂದು ಹೇಳಿದರು.

ಯುವಜನರಿಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ 72 ಸಾವಿರ ಸರ್ಕಾರಿ ಹುದ್ದೆಗಳ ಭರ್ತಿಗೆ ಆದೇಶ ಹೊರಡಿಸಲಾಗಿದೆ. ಜೊತೆಗೆ ಯುವಕರಿಗೆ ಉದ್ಯೋಗಾವಕಾಶಗಳನ್ನು ಸುಲಭವಾಗಿ ತಲುಪಿಸುವ ಉದ್ದೇಶದಿಂದ ಕೌಶಲ್ಯಾಭಿವೃದ್ಧಿ ಇಲಾಖೆಯ ವತಿಯಿಂದ ಯುವ ಉದ್ಯೋಗ ಸೇತು ಮೊಬೈಲ್ ಆ್ಯಪ್ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು. ರೈತರ ಹಿತಾಸಕ್ತಿಯ ವಿಚಾರ ಪ್ರಸ್ತಾಪಿಸಿದ ಮುಖ್ಯಮಂತ್ರಿಗಳು, ರಾಜ್ಯದ 38 ಲಕ್ಷ ರೈತರಿಗೆ ಒಟ್ಟು 30 ಸಾವಿರ ಕೋಟಿ ರೂಪಾಯಿ ಸಾಲ ವಿತರಿಸಲಾಗಿದೆ ಎಂದು ಮಾಹಿತಿ ನೀಡಿದರು. ಪ್ರತಿಯೊಬ್ಬರಿಗೂ ಆಸ್ತಿಯ ಮೇಲಿನ ಹಕ್ಕಿನ ಭದ್ರತೆ ಒದಗಿಸುವ ಉದ್ದೇಶದಿಂದ ಮಹತ್ವಾಕಾಂಕ್ಷೆಯ ಭೂ ಗ್ಯಾರಂಟಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. 2026-27ನೇ ಸಾಲಿನಲ್ಲಿ 9.50 ಲಕ್ಷ ಹೊಸ ಇ-ಖಾತಾಗಳನ್ನು ವಿತರಿಸುವುದರ ಜೊತೆಗೆ ಮೂರು ಲಕ್ಷ ಬಿ-ಖಾತಾಗಳನ್ನು ಎ-ಖಾತಾಗಳಾಗಿ ಪರಿವರ್ತಿಸಿ ಹಸ್ತಾಂತರಿಸುವ ಗುರಿಯನ್ನು ಸರ್ಕಾರ ಹೊಂದಲಾಗಿದೆ ಎಂದರು.

ಆಂಬುಲೆನ್ಸ್‌ಗಳನ್ನು ಲೋಕಾರ್ಪಣೆ

ರಾಜ್ಯಾದ್ಯಂತ ಐದು ಲಕ್ಷ ನಿವೇಶನಗಳ ಹಂಚಿಕೆಗೆ ಅರ್ಜಿಗಳನ್ನ ಆಹ್ವಾನಿಸಲಾಗಿದ್ದು, ಸಾರ್ವಜನಿಕರಿಗೆ ತುರ್ತು ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ 100 ಹೊಸ ಆಂಬುಲೆನ್ಸ್‌ಗಳನ್ನು ಲೋಕಾರ್ಪಣೆಗೊಳಿಸಲಾಗುವುದು ಎಂದು ತಿಳಿಸಿದರು. ಅಂತಿಮವಾಗಿ ಕನ್ನಡ ಭಾಷೆಯ ಉಳಿವು ಮತ್ತು ಬೆಳವಣಿಗೆಯ ಜವಾಬ್ದಾರಿ ಯುವ ಪೀಳಿಗೆಯ ಮೇಲಿದೆ. ಮಕ್ಕಳು ಕನ್ನಡ ಭಾಷೆಯ ನಿಜವಾದ ರಾಯಭಾರಿಗಳು. ಅಮೂಲ್ಯವಾದ ನಮ್ಮ ಕನ್ನಡ ಭಾಷೆಯನ್ನ ಮುಂದಿನ ಪೀಳಿಗೆಗೂ ಉಳಿಸಿ ಬೆಳೆಸುವ ಮಹತ್ತರ ಹೊಣೆಗಾರಿಕೆ ಇಂದಿನ ಯುವಜನತೆಯ ಮೇಲಿದೆ. ಕನ್ನಡವನ್ನು ಕೇವಲ ಒಂದು ಭಾಷೆಯಾಗಿ ನೋಡದೆ, ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿ ಸ್ವೀಕರಿಸಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕರೆ ನೀಡಿದರು.

ಗ್ರಾಮಾನುಭವ ಕಾರ್ಯಕ್ರಮಕ್ಕೆ ಚಾಲನೆ

ಆರಂಭದಲ್ಲಿ ಗ್ರಾಮೀಣ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ನೀಡಲು ರೂಪಿಸಲಾಗಿರುವ 'ಸಿಎಂ ವಿದ್ಯಾರ್ಥಿ ಸಹಾಯಸ್ತ' ಹಾಗೂ ನಗರ ಪ್ರದೇಶದ ವಿದ್ಯಾರ್ಥಿಗಳಿಗೆ ಹಳ್ಳಿಯ ಬದುಕು, ರೈತರು, ಕೃಷಿ, ತೋಟಗಾರಿಕೆ ಮತ್ತು ಪಶುಸಂಗೋಪನೆಯ ನೇರ ಅನುಭವ ಒದಗಿಸಲು ರೂಪಿಸಿರುವ 'ಗ್ರಾಮಾನುಭವ' ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳು ಚಾಲನೆ ನೀಡಿದರು.

ಕನ್ನಡ ಹೋರಾಟಗಾರರ ಮೇಲಿನ ಪ್ರಕರಣ ವಾಪಸ್ ಪಡೆಯಲು ಸೂಚನೆ: ಕನ್ನಡ ಹೋರಾಟಗಾರರ ಮೇಲಿನ ಪ್ರಕರಣಗಳನ್ನು ಹಿಂಪಡೆಯುವ ಕುರಿತು ಈಗಾಗಲೇ ಸೂಚನೆ ನೀಡಲಾಗಿದೆ. ನಿಮ್ಮ ಮೇಲಿರುವ ಪ್ರಕರಣಗಳನ್ನೆಲ್ಲ ವಾಪಸ್ ಪಡೆಯಬೇಕು ಎಂದು ಸೂಚನೆ ನೀಡಿದ್ದೇನೆ. ಈ ಸಂಬಂಧ ಕಡತಗಳು ಸಿದ್ಧವಾಗುತ್ತಿವೆ. ಇಂತಹ ಪ್ರಕರಣಗಳಿಂದ ಹೋರಾಟಗಾರರಿಗೆ ಮುಕ್ತಿ ನೀಡಬೇಕು ಎಂಬ ತೀರ್ಮಾನಕ್ಕೆ ಸರ್ಕಾರ ಬಂದಿದೆ. ಇಂತಹ ಸಂದರ್ಭದಲ್ಲಿ ನೀವು ಮತ್ತೆ ಈ ರೀತಿ ಮಾಡಿದರೆ ಪೊಲೀಸರು ಪ್ರಕರಣ ವಾಪಸ್ ಪಡೆಯಲು ಆಕ್ಷೇಪ ವ್ಯಕ್ತಪಡಿಸುತ್ತಾರೆ. ಹೀಗಾಗಿ ದಯವಿಟ್ಟು ಕಾನೂನು ಕೈಗೆತ್ತಿಕೊಳ್ಳದೆ ಸರ್ಕಾರಕ್ಕೆ ಸಹಕಾರ ನೀಡಿ ಎಂದು ಸಿಎಂ ಮನವಿ ಮಾಡಿದರು.

ಕನ್ನಡ ಧ್ವಜವನ್ನು ಅಧಿಕೃತಗೊಳಿಸಲು ನಿರ್ಣಯ

ಇದಕ್ಕೂ ಮುನ್ನ ವಿಧಾನಸೌಧ ಆವರಣದಲ್ಲಿನ ಭುವನೇಶ್ವರಿ ದೇವಿ ಪ್ರತಿಮೆಗೆ ಸಿಎಂ ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಭಾನುವಾರ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಮಾತನಾಡಿದ ಸಿಎಂ, ಮುಂದಿನ ಅಧಿವೇಶನದಲ್ಲಿ ಕನ್ನಡ ಧ್ವಜವನ್ನು ಅಧಿಕೃತಗೊಳಿಸುವ ಸಂಬಂಧ ನಿರ್ಣಯ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗುವುದು ಎಂದು ತಿಳಿಸಿದ್ದಾರೆ.

ನಮ್ಮ ಸರ್ಕಾರ ಹಿಂದೆ ಕನ್ನಡದ ಧ್ವಜವನ್ನು ಅಧಿಕೃತವಾಗಿ ಕೇಂದ್ರ ಸರ್ಕಾರ ಒಪ್ಪುವಂತೆ ಮನವಿ ಮಾಡಿದ್ದೆವು. ಆದರೆ ಕೇಂದ್ರದಿಂದ ಸರಿಯಾದ ರೀತಿ ಉತ್ತರ ಬಂದಿಲ್ಲ. ಕಾನೂನು ತಜ್ಞರ ಜೊತೆ ಈ ಬಗ್ಗೆ ಚರ್ಚೆ ಮಾಡಿದ್ದೇನೆ. ಇನ್ನೊಂದು ಸುತ್ತು ಕಾನೂನು ತಜ್ಞರ ಜೊತೆ ಚರ್ಚೆ ಮಾಡುತ್ತೇವೆ. ರಾಷ್ಟ್ರದ ಧ್ವಜಕ್ಕೆ ಅದಕ್ಕೆ ಅದರದೇ ಆದ ಗೌರವ ಕೊಡಲೇಬೇಕು. ನಮ್ಮ ಧ್ವಜ ಹೇಗೆ ಇರಬೇಕು?. ಎಲ್ಲಿ ಇರಬೇಕು ಎಂಬ ಬಗ್ಗೆ ಬಾವುಟ ನಿಯಮದ ಬಗ್ಗೆ ಚರ್ಚೆ ಮಾಡಲಾಗಿದೆ. ಕನ್ನಡ ಬಾವುಟ ಎಲ್ಲೆಲ್ಲಿ ಹಾರಿಸಬೇಕು ಎಂಬ ಬಗ್ಗೆ ಸಾರ್ವಜನಿಕರು, ಶಾಸಕರಿಂದ ಅಭಿಪ್ರಾಯ ಪಡೆಯುತ್ತೇವೆ.

ಮುಂದಿನ ಅಧಿವೇಶನದಲ್ಲಿ ಈ ಸಂಬಂಧ ವಿಚಾರವನ್ನು ಮಂಡನೆ ಮಾಡುತ್ತೇವೆ ಎಂದರು. ನಮ್ಮ ಧ್ವಜವನ್ನು ಎಲ್ಲಾ ಕಡೆ ಅಧಿಕೃತವಾಗಿ ಬಳಸಲು ನಾವು ಬದ್ಧರಾಗಿರಬೇಕು. ರಾಜ್ಯ ಧ್ವಜ ಯಾವ ರಾಜ್ಯದಲ್ಲೂ ಇಲ್ಲ. ಕೆಲ ರಾಜ್ಯಗಳು ಬಳಸಲು ಯತ್ನಿಸುತ್ತಿವೆ. ವಿಧಾನಸೌಧದಲ್ಲೂ ಈ ಧ್ವಜ ಹಾರಿಸಲು ಅನುವು ಮಾಡುವಂತೆ ಸಾರ್ವಜನಿಕರು, ಶಾಸಕರ ಜೊತೆ ಚರ್ಚೆ ಮಾಡಿ ಅಭಿಪ್ರಾಯ ಪಡೆಯಲಾಗುತ್ತದೆ. ಮುಂದಿನ ಅಧಿವೇಶನದಲ್ಲಿ ಈ ಬಗ್ಗೆ ನಿರ್ಣಯ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸುವ ಕೆಲಸ ಮಾಡುತ್ತೇವೆ. ಒಂದು ಹೊಸ ರೂಪ ಕೊಡಲಿದ್ದೇವೆ. ಕಾನೂನು ಬದ್ಧವಾಗಿ ಏನೆಲ್ಲಾ ರಕ್ಷಣೆ ಮಾಡಬೇಕು ಅದರ ಬಗ್ಗೆ ನಮ್ಮ ಬದ್ಧತೆ ಇದೆ ಎಂದು ಭರವಸೆ ನೀಡಿದ್ದಾರೆ.

ಖಾಸಗಿ ಸಂಸ್ಥೆಯವರೂ ಒಂದು ತಿಂಗಳು ಕನ್ನಡ ಧ್ವಜವನ್ನು ಹಾರಿಸಬೇಕು. ಈ ಸಂಬಂಧ ಆದೇಶ ಹೊರಡಿಸಲು ಸಿದ್ಧತೆ ನಡೆಸುತ್ತಿದ್ದೇವೆ. ಎಲ್ಲಾ ಶಾಲೆಗಳಲ್ಲಿ ಕನ್ನಡ ರಾಜ್ಯೋತ್ಸವ ಕಡ್ಡಾಯ ಮಾಡಲಾಗುವುದು. ತಾಯಿ ಭುವನೇಶ್ವರಿಗೆ ಕರ್ನಾಟಕವನ್ನು ಕಾಪಾಡುವಂತೆ ಪ್ರಾರ್ಥನೆ ಮಾಡಿದ್ದೇವೆ. ಈ ಭಾಷೆಗೆ ಯಾವುದೇ ಗಡಿ ಇಲ್ಲ. ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ನಮ್ಮ ಬಾವುಟ ಹಾರಿಸಬೇಕು ಮತ್ತು ಜೊತೆಗೆ ಸರ್ಕಾರದ ಅಧೀನ, ಬೆಂಬಲಿತ ಸಂಸ್ಥೆಗಳು ಕನ್ನಡ ಬಾವುಟವನ್ನು ಕಡ್ಡಾಯವಾಗಿ ಹಾರಿಸಬೇಕು ಎಂದು ತಿಳಿಸಿದರು.

ಮತದಾರರ ಹಕ್ಕುಗಳನ್ನು ರಕ್ಷಿಸಲು ಕಾಂಗ್ರೆಸ್ ಬದ್ಧ

ದೆಹಲಿಯಲ್ಲಿ ಕಾಂಗ್ರೆಸ್ ನೇತೃತ್ವದಲ್ಲಿ ನಡೆಯುತ್ತಿರುವ ಪ್ರತಿಭಟನೆ ಬಗ್ಗೆ ಪ್ರತಿಕ್ರಿಯಿಸಿ, ಮತದಾನದ ಹಕ್ಕು ಎಂದರೆ ಅದು ಬದುಕುವ ಹಕ್ಕಿದ್ದಂತೆ. ಆದರೆ, ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಲಕ್ಷಾಂತರ ಜನರ ಮತಗಳನ್ನು ವ್ಯವಸ್ಥಿತವಾಗಿ ಅಳಿಸಿಹಾಕಲಾಗಿದೆ.

ದೇಶದ ಪ್ರತಿಯೊಬ್ಬ ಮತದಾರರಿಗೆ ಮತದಾನದ ಹಕ್ಕು ನೀಡುವುದು ನಮ್ಮ ಕರ್ತವ್ಯವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ರಕ್ಷಿಸಲು ಶ್ರಮಿಸುತ್ತಿರುವ ಪಕ್ಷವು ಪ್ರತಿ ಮತದಾರರ ಹಕ್ಕುಗಳನ್ನು ರಕ್ಷಿಸಲು ಬದ್ಧವಾಗಿದೆ. ಪ್ರಸ್ತುತ ಹಮ್ಮಿಕೊಳ್ಳಲಾಗಿರುವ ದೆಹಲಿಯಲ್ಲಿ ಹಮ್ಮಿಕೊಳ್ಳಲಾಗಿರುವ ಪ್ರತಿಭಟನೆ ಯಶಸ್ವಿಯಾಗಲಿದೆ. ಪ್ರತಿಯೊಬ್ಬ ಮತದಾರರ ಹಕ್ಕನ್ನು ರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು. ಕರ್ನಾಟಕದಲ್ಲಿ ಯಾವ ರೀತಿಯಲ್ಲಿ ಅಕ್ರಮಗಳನ್ನು ಸೃಷ್ಟಿಸಲಾಯಿತು ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ. ಲಕ್ಷಾಂತರ ಮತದಾರರ ಹೆಸರುಗಳನ್ನು ಉದ್ದೇಶಪೂರ್ವಕವಾಗಿ ಮತ ಪಟ್ಟಿಯಿಂದ ತೆಗೆಯಲಾಗಿದೆ. ಈ ಅನ್ಯಾಯದ ವಿರುದ್ಧ ನಮ್ಮ ಹೋರಾಟ ಮುಂದುವರೆಯಲಿದೆ ಎಂದು ಸಿಎಂ ಹೇಳಿದರು. ಯಾವುದೇ ಕನ್ನಡಪರ ಸಂಘಟನೆಗಳು, ಐಟಿ ಸಂಸ್ಥೆಗಳ ಮೇಲೆ ದಾಳಿ ಮಾಡಲು ಹೋಗಬಾರದು. ಕಾನೂನನ್ನು ಕೈಗೆತ್ತಿಕೊಳ್ಳುವುದು ಸರಿಯಲ್ಲ. ನೈತಿಕ ಪೊಲೀಸ್?ಗಿರಿ ನಡೆಸಲು ಅವಕಾಶವಿಲ್ಲ. ಸರ್ಕಾರ ಮತ್ತು ಪೊಲೀಸ್ ಇಲಾಖೆ ಇದೆ. ಯಾವುದೇ ದೂರು ಅಥವಾ ಸಮಸ್ಯೆಗಳಿದ್ದರೆ ಸರ್ಕಾರದ ಗಮನಕ್ಕೆ ತನ್ನಿ. ಪೊಲೀಸರು ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತಾರೆ ಎಂದು ತಿಳಿಸಿದರು.

ಭಾರತದ ಕಾರಿಡಾರ್‌ಗೆ ವಿರೋಧ, ಗಂಗಾ ನದಿ ಒಪ್ಪಂದ ನವೀಕರಣಕ್ಕೆ ಬಾಂಗ್ಲಾ ವಿಪಕ್ಷ ನಾಯಕನ ಆಗ್ರಹ

• ಉದಯವಾಹಿನಿ, ದೆಹಲಿ

ಭಾರತಕ್ಕೆ ತಮ್ಮ ಭೂಪ್ರದೇಶದ ಮೂಲಕ ಸಾರಿಗೆ ಮಾರ್ಗ ಒದಗಿಸುವ ಯಾವುದೇ ಕಾರಿಡಾರ್ ಕ್ರಮವನ್ನು ಬಾಂಗ್ಲಾದೇಶ ವಿರೋಧಿಸುತ್ತದೆ ಎಂದು ಬಾಂಗ್ಲಾದೇಶದ ವಿಪಕ್ಷ ನಾಯಕರೊಬ್ಬರು ತಿಳಿಸಿದ್ದು, ಇದೆ ವೇಳೆ ಭಾರತದೊಂದಿಗಿನ ಗಂಗಾ ನದಿ ನೀರು ಹಂಚಿಕೆ ಒಪ್ಪಂದವನ್ನು ನ್ಯಾಯಯುತ ಷರತ್ತುಗಳೊಂದಿಗೆ ನವೀಕರಿಸದಿದ್ದರೆ, ಹೊಸದಾಗಿ ಪ್ರತಿಭಟನೆಗಳನ್ನು ನಡೆಸುವುದಾಗಿಯೂ ಅವರು ಎಚ್ಚರಿಕೆ ನೀಡಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ನ್ಯಾಷನಲ್ ಸಿಟಿಜನ್ ಪಾರ್ಟಿ (ಎನ್‌ಸಿಪಿ) ಸಂಚಾಲಕ ನಹಿದ್ ಇಸ್ಲಾಂ ಈ ಕುರಿತು ಹೇಳಿಕೆ ನೀಡಿದ್ದು, ಬಾಂಗ್ಲಾದೇಶದ ಪ್ರಧಾನಿ ತಾರಿಕ್ ರೆಹಮಾನ್ ಅವರ ಸರ್ಕಾರವು, ತಮ್ಮ ದೇಶದ ಮೂಲಕ ಭಾರತಕ್ಕೆ ಸಾಗಣೆ




ಕಾರಿಡಾರ್ ಒದಗಿಸಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ್ದಾರೆ. ಇದೇ ವೇಳೆ ಎಚ್ಚರಿಕೆ ನೀಡಿರುವ ಅವರು, ಗಂಗಾ ನದಿ ಹಂಚಿಕೆ ಒಪ್ಪಂದ ನವೀಕರಣ ಮಾಡುವ ಮೂಲಕ ಬಾಂಗ್ಲಾದೇಶದ ನೀರಿನ ಪ್ರಮಾಣದ ರಕ್ಷಣೆ ಮಾಡಬೇಕು. 2024ರಲ್ಲಿ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ, ವಿದ್ಯಾರ್ಥಿ ನೇತೃತ್ವದ ಚಳವಳಿಯೊಂದಿಗೆ ಗುರುತಿಸಿಕೊಂಡಿದ್ದ ನಾಯಕರು 2025ರಲ್ಲಿ ಈ ಎನ್‌ಸಿಪಿ ಪಕ್ಷವನ್ನು ಸ್ಥಾಪಿಸಿದ್ದಾರೆ. ಮುಂದುವರೆದು ಮಾತನಾಡಿರುವ ಇಸ್ಲಾಂ, ಜಪಾನ್ ಕೂಡ ಬಾಂಗ್ಲಾದೇಶಗೆ ಮತ್ತೊಮ್ಮೆ ಕಾರಿಡಾರ್ ನಿರ್ಮಿಸುವ ಪ್ರಯತ್ನ ನಡೆಸಿದೆ. ಸರ್ಕಾರ ಅಕ್ರಮ ಕಾರಿಡಾರ್ ಅನ್ನು ಭಾರತಕ್ಕೆ ಒಪ್ಪಿಸುವ ಪ್ರಯತ್ನ ನಡೆಸಿದೆ. ಪ್ರಧಾನಿ ತಾರಿಖ್ ರೆಹಮಾನ್ ಅವರಿಗೆ ಹೇಳುವುದೇನೆಂದರೆ, ಬಾಂಗ್ಲಾದೇಶದ ಜನರು ಈ ರೀತಿ ಅಕ್ರಮ ಕಾರಿಡಾರ್ ಅನ್ನು ಸ್ವೀಕರಿಸುವುದಿಲ್ಲ ಎಂದು ಸ್ಪಷ್ಟಪಡಿಸಲು ಬಯಸುತ್ತೇನೆ ಎಂದಿದ್ದಾರೆ. ಅಕ್ಟೋಬರ್ 26ರಿಂದ 29ರವರೆಗೆ ಜಪಾನ್ ಪ್ರವಾಸ ಕೈಗೊಂಡಿದ್ದ ಪ್ರಧಾನಿ ರೆಹಮಾನ್, ಎರಡು ದೇಶಗಳ ನಡುವಿನ ಬಂಗಾಳ ಕೊಲ್ಲಿಯ ಕೈಗಾರಿಕಾ ಬೆಳವಣಿಗೆ ಬೆಲ್ಟ್ ಉನ್ನತೀಕರಿಸಲು ಒಪ್ಪಿಗೆ ನೀಡಿದ್ದರು. ಈ ಹೊಸ ಉಪಕ್ರಮವು ಸಂಪರ್ಕ ವ್ಯವಸ್ಥೆಯನ್ನು ಬಲಪಡಿಸುವುದು, ನೈಸರ್ಗಿಕ ವಿಕೋಪಗಳು ಹಾಗೂ ಭೌಗೋಳಿಕ-ರಾಜಕೀಯ ಅಪಾಯಗಳಿಗೆ ಸಿದ್ಧತೆ ನಡೆಸುವುದು, ಆರ್ಥಿಕ ಬೆಳವಣಿಗೆಗಾಗಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವವನ್ನು ಉತ್ತೇಜಿಸುವುದು ಮತ್ತು ಶಾಂತಿ ಹಾಗೂ ಸ್ಥಿರತೆಗಾಗಿ ಸಹಕರಿಸುವುದರ ಮೇಲೆ ಗಮನ ಕೇಂದ್ರೀಕರಿಸುತ್ತದೆ.

ಬಾಂಗ್ಲಾದೇಶವನ್ನು ಕೇಂದ್ರಬಿಂದುವನ್ನಾಗಿ ಮಾಡಿಕೊಂಡು, ಬಂಗಾಳ ಕೊಲ್ಲಿ ಪ್ರದೇಶವನ್ನು ಸಮಾನ ಸಮೃದ್ಧಿಯ ವಲಯವನ್ನಾಗಿ ಅಭಿವೃದ್ಧಿಪಡಿಸಲು ಶ್ರಮಿಸಲು ಇಬ್ಬರೂ ನಾಯಕರು ಒಪ್ಪಿಕೊಂಡಿದ್ದರು. ಇದಲ್ಲದೆ, ಜಪಾನ್ ತನ್ನ ಅಭಿವೃದ್ಧಿ ಸಂಸ್ಥೆಯಾದ ಜೈಕಾ ಮೂಲಕ ಆರ್ಥಿಕ ನೆರವು ನೀಡುವ ಮೂಲಕ, ಆಗ್ನೇಯ ಬಾಂಗ್ಲಾದೇಶದಲ್ಲಿರುವ ಮಾತಾರ್ಬಾರಿ ಆಳ ಸಮುದ್ರ ಬಂದರಿನ ಅಭಿವೃದ್ಧಿಗೆ ಬೆಂಬಲ ನೀಡಲು ಮುಂದಾಗಿದೆ.

ದೆಹಲಿ ಕರ್ನಾಟಕ ಭವನದಲ್ಲಿ 'ವಂದೇ ಮಾತರಂ' ಚರಣ ಗೊಂದಲ

• ಉದಯವಾಹಿನಿ, ದೆಹಲಿ

ಕನ್ನಡ ರಾಜ್ಯೋತ್ಸವ ದಿನವಾದ ಇಂದು ನವದೆಹಲಿಯ ಕರ್ನಾಟಕ ಭವನದಲ್ಲಿ ಆಯೋಜಿಸಲಾಗಿದ್ದ ರಾಜ್ಯೋತ್ಸವ ಸಮಾರಂಭದಲ್ಲಿ 'ವಂದೇ ಮಾತರಂ' ಗೀತೆಯ ಚರಣಗಳ ಗಾಯನಕ್ಕೆ ಸಂಬಂಧಿಸಿದಂತೆ ಕೆಲಕಾಲ ತೀವ್ರ ಗೊಂದಲ ಸೃಷ್ಟಿಯಾಯಿತು. ರಾಷ್ಟ್ರಗೀತೆಯ ನಂತರ ಆರು ಚರಣಗಳ ವಂದೇ ಮಾತರಂ ಗಾಯನ ಆರಂಭವಾಗುತ್ತಿದ್ದಂತೆ, ವೇದಿಕೆಯಲ್ಲಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸನ್ನೆ ಮೂಲಕ ಗಾಯನವನ್ನು ತಕ್ಷಣವೇ ನಿಲ್ಲಿಸುವಂತೆ ಆಯೋಜಕರಿಗೆ ಹೇಳಿದ ಘಟನೆ ನಡೆದಿದೆ. ಕರ್ನಾಟಕ ಭವನದ ಸಿಬ್ಬಂದಿ ಹಾಗೂ ಗಾಯಕರು ವಂದೇ ಮಾತರಂ ಹಾಡನ್ನು ಸತತವಾಗಿ ಆರು ಚರಣಗಳವರೆಗೂ ಹಾಡಲು ಪ್ರಾರಂಭಿಸಿದ್ದರು. ಮಾಜಿ ಸಿಎಂ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಕೆ. ಹರಿಪ್ರಸಾದ್ ಸೇರಿದಂತೆ ಹಲವು ಕಾಂಗ್ರೆಸ್ ಹಿರಿಯ ನಾಯಕರು ಉಪಸ್ಥಿತರಿದ್ದ ಈ ಕಾರ್ಯಕ್ರಮದಲ್ಲಿ ಗಾಯನವು 5ನೇ ಚರಣಕ್ಕೆ ತಲುಪುತ್ತಿದ್ದಂತೆ ಎಚ್ಚೆತ್ತುಕೊಂಡ ಸಿದ್ದರಾಮಯ್ಯ, ಕೈಸನ್ನೆ ಮಾಡುವ ಮೂಲಕ ಆಯೋಜಕರಿಗೆ ಹಾಡನ್ನು ತಕ್ಷಣವೇ ನಿಲ್ಲಿಸುವಂತೆ ಸೂಚಿಸಿದರು. ಸಿಎಂ ಸೂಚನೆ ನೀಡುತ್ತಿದ್ದಂತೆಯೇ ಕರ್ನಾಟಕ ಭವನದ ಸಿಬ್ಬಂದಿ ಗಾಯನವನ್ನು ಅರ್ಧಕ್ಕೇ ಸ್ಥಗಿತಗೊಳಿಸಿದರು. ವಂದೇ ಮಾತರಂ



ಗೀತೆಯ ಚರಣಗಳ ವಿಚಾರವು ಕರ್ನಾಟಕದಲ್ಲಿ ಇತ್ತೀಚೆಗಷ್ಟೇ ದೊಡ್ಡ ರಾಜಕೀಯ ಸ್ವರೂಪ ಪಡೆದುಕೊಂಡಿತ್ತು. ರಾಜ್ಯ ಸರ್ಕಾರದ ಅಧಿಕೃತ ಸಮಾರಂಭಗಳಲ್ಲಿ ವಂದೇ ಮಾತರಂ ಗೀತೆಯ ಮೊದಲ ಎರಡು ಚರಣಗಳನ್ನು ಮಾತ್ರ ಹಾಡಬೇಕು ಎಂದು ಸರ್ಕಾರಿ ಆದೇಶ ಹೊರಡಿಸಲಾಗಿತ್ತು. ಇತ್ತೀಚಿನ ವಿಧಾನಮಂಡಲ ಅಧಿವೇಶನದಲ್ಲೂ ಎರಡು ಚರಣಗಳ ಗಾಯನದ ನಂತರ ಬಿಜೆಪಿ ಶಾಸಕರು ಉಳಿದ ಚರಣಗಳನ್ನು ಹಾಡಿ ಪ್ರತಿಭಟನೆ ನಡೆಸಿದ್ದು ದೊಡ್ಡ ಚರ್ಚೆಗೆ ಗ್ರಾಸವಾಗಿತ್ತು. ದೆಹಲಿಯ ಕರ್ನಾಟಕ ಭವನದಲ್ಲಿಯೂ ನಿಯಮ ಮೀರಿ ಆರೂ ಚರಣಗಳನ್ನು ಹಾಡಲು ತೊಡಗಿದಾಗ, ಸರ್ಕಾರದ ಸ್ಪಷ್ಟ ನಿಯಮಾವಳಿಯನ್ನು ಪಾಲಿಸುವ ನಿಟ್ಟಿನಲ್ಲಿ ಸಿದ್ದರಾಮಯ್ಯ ಈ ಪ್ರಸಂಗದಲ್ಲಿ ಮಧ್ಯಪ್ರವೇಶಿಸಿ ಗಾಯನವನ್ನು ನಿಲ್ಲಿಸಿದರು ಎನ್ನಲಾಗಿದೆ.

ಐದನೇ ಚರಣ ತಲುಪುತ್ತಿದ್ದಂತೆ ಸನ್ನೆ ಮೂಲಕ ಸಿದ್ದರಾಮಯ್ಯ ಸೂಚನೆ

ಕರ್ನಾಟಕ ಭವನದ ಸಿಬ್ಬಂದಿ ಹಾಗೂ ಗಾಯಕರು ವಂದೇ ಮಾತರಂ ಹಾಡನ್ನು ಸತತವಾಗಿ ಆರು ಚರಣಗಳವರೆಗೂ ಹಾಡಲು ಪ್ರಾರಂಭಿಸಿದ್ದರು. ಆಗ ಮಾಜಿ ಸಿಎಂ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಕೆ. ಹರಿಪ್ರಸಾದ್ ಸೇರಿದಂತೆ ಹಲವು ಕಾಂಗ್ರೆಸ್ ಹಿರಿಯ ನಾಯಕರು ಉಪಸ್ಥಿತರಿದ್ದ ಈ ಕಾರ್ಯಕ್ರಮದಲ್ಲಿ ಗಾಯನವು 5ನೇ ಚರಣಕ್ಕೆ ತಲುಪುತ್ತಿದ್ದಂತೆ ಸಿದ್ದರಾಮಯ್ಯ, ಕೈಸನ್ನೆ ಮಾಡುವ ಮೂಲಕ ಆಯೋಜಕರಿಗೆ ಹಾಡನ್ನು ತಕ್ಷಣವೇ ನಿಲ್ಲಿಸುವಂತೆ ಸೂಚಿಸಿದರು. ಸಿಎಂ ಸೂಚನೆ ನೀಡುತ್ತಿದ್ದಂತೆಯೇ ಕರ್ನಾಟಕ ಭವನದ ಸಿಬ್ಬಂದಿ ಗಾಯನವನ್ನು ಅರ್ಧಕ್ಕೇ ಸ್ಥಗಿತಗೊಳಿಸಿದರು ಎಂದು ತಿಳಿದುಬಂದಿದೆ.

ದೆಹಲಿಯಲ್ಲಿ ವಿಪಕ್ಷಗಳ ಒಗ್ಗಟ್ಟು ಪ್ರದರ್ಶನ

ರ್‍ಯಾಲಿಯಲ್ಲಿ ಘಟಾನುಘಟಿ ನಾಯಕರು ಭಾಗಿ

'ವೋಟ್ ಬಚಾವೋ, ದೇಶ್ ಬಚಾವೋ' ಘೋಷಣೆ

10 ಸಾವಿರ ಪೊಲೀಸರನ್ನು ನಿಯೋಜಿಸಲಾಗಿ

• ಉದಯವಾಹಿನಿ, ದೆಹಲಿ

ಮತದಾರರ ಹಕ್ಕುಗಳ ರಕ್ಷಣೆ ಮತ್ತು ಚುನಾವಣಾ ಆಯೋಗದ ವಿರುದ್ಧದ ಆರೋಪಗಳನ್ನು ಮುಂದಿಟ್ಟುಕೊಂಡು ಇಂಡಿ ಒಕ್ಕೂಟ ದೆಹಲಿಯ ರಾಮಲೀಲಾ ಮೈದಾನದಲ್ಲಿ ಬೃಹತ್ ರ್‍ಯಾಲಿ ಆಯೋಜಿಸಿದೆ. 'ವೋಟ್ ಬಚಾವೋ, ದೇಶ್ ಬಚಾವೋ' ಘೋಷಣೆಯೊಂದಿಗೆ ನಡೆಯುತ್ತಿರುವ ಈ ಮೆರವಣಿಗೆಗೆ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಚಾಲನೆ ನೀಡಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕಾ ಗಾಂಧಿ, ಮಮತಾ ಬ್ಯಾನರ್ಜಿ,



ಸಿದ್ದರಾಮಯ್ಯ, ಹೇಮಂತ್ ಸೊರೇನ್, ತೇಜಸ್ವಿ ಯಾದವ್ ಸೇರಿದಂತೆ ಹಲವು ಪ್ರಮುಖ ನಾಯಕರು ರ್‍ಯಾಲಿಯಲ್ಲಿ ಭಾಗವಹಿಸಿದ್ದಾರೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡಬೇಕು ಎಂಬುದು ಪ್ರತಿಭಟನಾಕಾರರ ಪ್ರಮುಖ ಬೇಡಿಕೆಯಾಗಿದೆ. ದೇಶದ ವಿವಿಧ ಭಾಗಗಳಿಂದ ಸಾವಿರಾರು ಕಾರ್ಯಕರ್ತರು ದೆಹಲಿಗೆ ಆಗಮಿಸಿದ್ದಾರೆ. ಜನಸಂದಣಿ ನಿರ್ವಹಣೆಗಾಗಿ 10 ಸಾವಿರ ಪೊಲೀಸರನ್ನು ನಿಯೋಜಿಸಲಾಗಿದ್ದು, 200 ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಬೇಡಿಕೆಗಳು ಈಡೇರುವವರೆಗೂ ಹೋರಾಟ ಮುಂದುವರಿಸುವುದಾಗಿ ಇಂಡಿಯಾ ಒಕ್ಕೂಟದ ನಾಯಕರು ತಿಳಿಸಿದ್ದಾರೆ.

ಈ ದಿನದ ದರ ಪೆಟ್ರೋಲ್: 110.93 ₹/L ಡೀಸೆಲ್ : 98.80 ₹/L ಬಂಗಾರ: ₹13,888/Gram24ct ₹12,730/Gram22ct ಬೆಳ್ಳಿ: ₹200.00/Gram

ರಾಜಕೀಯ ವಿವಾದಕ್ಕೆ ಕಾರಣವಾಯ್ತು ಸಂತ ಕಬೀರರ ಹಾಡು!

• ಉದಯವಾಹಿನಿ, ಬೆಂಗಳೂರು

15ನೇ ಶತಮಾನದ ಸಂತ-ಕವಿ ಕಬೀರರು, ತಮ್ಮ ಜೀವನದುದ್ದಕ್ಕೂ ಧಾರ್ಮಿಕ ವಿಧಿವಿಧಾನಗಳು ಮತ್ತು ಮೂಢನಂಬಿಕೆಗಳನ್ನು ಟೀಕಿಸುತ್ತಾ ಬಂದರು. ಅವರು ಅನೇಕ ಭಜನೆಗಳನ್ನು ರಚಿಸಿದ್ದಾರೆ. ಕಬೀರರು ಬರೆದ ಅಂತಹ ಒಂದು ಭಜನೆಯ ಸಾಲು ಈಗ ರಾಜಕೀಯ ವಿವಾದಕ್ಕೆ ಕಾರಣವಾಗಿದೆ. ಶಾಸ್ತ್ರೀಯ ಸಂಗೀತ ಗಾಯಕಿ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಪತ್ನಿ ಶಿವಶ್ರೀ ಸ್ಕಂದಪ್ರಸಾದ್ ಅವರು ಈ ಭಜನೆಯನ್ನು ಹಾಡಿದ್ದು, ಅವರ ಹಾಡಿರುವ ತುಣುಕೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ದೆಹಲಿಯ ಜಂತರ್ ಮಂತರ್‌ನಲ್ಲಿ 'ಸಿಜೆಪಿ' ನಡೆಸಿದ ಪ್ರತಿಭಟನೆಯನ್ನು ಉದ್ದೇಶಿಸಿ ಅವರು ಈ ರೀತಿ ಹಾಡಿದ್ದಾರೆ ಎಂದು ಕೆಲವರು ವ್ಯಾಖ್ಯಾನಿಸುತ್ತಿದ್ದಾರೆ. ಆದರೆ, ಈ ವಿಡಿಯೋ ತುಣುಕು 'ಕಾಕ್ರೋಚ್ ಜನತಾ ಪಾರ್ಟಿ' ಪ್ರತಿಭಟನೆ ನಡೆಯುವುದಕ್ಕಿಂತ ಸುಮಾರು ಮೂರು ವರ್ಷಗಳ ಹಿಂದಿನದ್ದು ಎಂದು ಹಲವರು ಹೇಳುತ್ತಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರುವ ಈ ವಿಡಿಯೋದಲ್ಲಿ, ತೇಜಸ್ವಿ ಸೂರ್ಯ ಅವರ ಪತ್ನಿ ಕೆಂಪು ಬಣ್ಣದ ಸೀರೆ ಧರಿಸಿದ್ದಾರೆ, ಶಾಸ್ತ್ರೀಯ ಸಂಗೀತ ವಾದ್ಯವೊಂದನ್ನು ನುಡಿಸುತ್ತಾ ಹಾಡುವುದನ್ನು ಕಾಣಬಹುದು. ಕಬೀರರು ಹೇಳುತ್ತಾರೆ, ಕೇಳಿ ಸಾಧಕರೇ, ದೈವವನ್ನು ಭಕ್ತಿಯಿಂದ ಮಾತ್ರ ಪಡೆಯಬಹುದು 'ಜಂತರ್ ಮಂತರ್' (ಇಲ್ಲಿ 'ಜಂತರ್ ಮಂತರ್' ಎಂಬ ಪದವನ್ನು ಸ್ಥಳದ ಹೆಸರಾಗಿಯೂ ಮತ್ತು ಮೋಸದ ತಂತ್ರಗಳು ಎಂಬ ಅರ್ಥದಲ್ಲೂ ಬಳಸಲಾಗಿದೆ) ಎಂಬ ತಂತ್ರಗಾರಿಕೆಗಳಿಂದಲ್ಲ. ದೈವದ ನಾಮಸ್ಮರಣೆಯಿಂದ ಮಾತ್ರ ಮುಕ್ತಿ ಸಿಗುತ್ತದೆ ಎಂದು ಭಜನೆ ಹಾಡಿದ್ದಾರೆ.


ಉದಯವಾಹಿನಿ ಚಿತ್ರ

85 ಗ್ರಾಮ ಪಂಚಾಯಿತಿಗಳಲ್ಲಿ ಆರ್ಥಿಕ ಸೇರ್ಪಡೆ ಅಭಿಯಾನ

• ಉದಯವಾಹಿನಿ, ಬೆಂಗಳೂರು

ಅರ್ಹ ಎಲ್ಲಾ ನಾಗರಿಕರಿಗೂ ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳನ್ನು ತಲುಪಿಸುವ ಉದ್ದೇಶದಿಂದ ಬೆಂಗಳೂರು ನಗರ ಜಿಲ್ಲೆಯ 85 ಗ್ರಾಮ ಪಂಚಾಯಿತಿಗಳಲ್ಲಿ ಅಕ್ಟೋಬರ್ 28ರಿಂದ ಡಿಸೆಂಬರ್ 31ರವರೆಗೆ 'ಆರ್ಥಿಕ ಸೇರ್ಪಡೆ ಸಮಗ್ರ ವ್ಯಾಪ್ತಿ ಅಭಿಯಾನ' ಹಮ್ಮಿಕೊಳ್ಳಲಾಗಿದೆ. ಲೀಡ್ ಬ್ಯಾಂಕ್ ಕಚೇರಿಯು, ಗ್ರಾಮ ಪಂಚಾಯಿತಿಗಳು, ಬ್ಯಾಂಕ್‌ಗಳು ಹಾಗೂ ಇತರ ಸಂಬಂಧಪಟ್ಟ ಸಂಸ್ಥೆಗಳ ಸಹಯೋಗದಲ್ಲಿ ಈ ಅಭಿಯಾನವನ್ನು ಸಂಯೋಜಿಸುತ್ತಿದೆ. ಪ್ರಧಾನ ಮಂತ್ರಿ ಜನಧನ್ ಯೋಜನೆ, ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ, ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ ಮತ್ತು ಅಟಲ್ ಪಿಂಚಣಿ ಯೋಜನೆಗಳಡಿ ಅರ್ಹ ಫಲಾನುಭವಿಗಳನ್ನು ನೋಂದಾಯಿಸುವುದಕ್ಕೆ ಅಭಿಯಾನದಲ್ಲಿ ಆದ್ಯತೆ ನೀಡಲಾಗಿದೆ. ಇದರೊಂದಿಗೆ ಬ್ಯಾಂಕ್ ಖಾತೆಗಳಿಗೆ ಆಧಾರ್ ಸಂಖ್ಯೆ ಜೋಡಣೆ, ಇ-ಕೆವೈಸಿ ಮತ್ತು ಮರು-ಕೆವೈಸಿ ಪ್ರಕ್ರಿಯೆ, ಸೆಂಟ್ರಲ್ ಕೆವೈಸಿ ಗುರುತಿನ ಸಂಖ್ಯೆ ವಿತರಣೆ, ಅರ್ಹರಿಗೆ ಬ್ಯಾಂಕ್ ಖಾತೆ ತೆರೆಯುವುದು, ಆರ್ಥಿಕ ಸಾಕ್ಷರತಾ ಕಾರ್ಯಕ್ರಮಗಳು ಹಾಗೂ ಕುಂದುಕೊರತೆಗಳ ಪರಿಹಾರ ಕ್ರಮಗಳನ್ನೂ ಕೈಗೊಳ್ಳಲಾಗುತ್ತದೆ. ವಿಮಾ, ಪಿಂಚಣಿ, ಸಾಮಾಜಿಕ ಭದ್ರತಾ ಯೋಜನೆಗಳು ಮತ್ತು ಕೃಷಿ ಸಾಲ ಸೌಲಭ್ಯಗಳ ಕುರಿತು ಜನರಲ್ಲಿ ಅರಿವು ಮೂಡಿಸುವುದು ಈ ಉಪಕ್ರಮದ ಮತ್ತೊಂದು ಉದ್ದೇಶವಾಗಿದೆ. ವಿಶೇಷವಾಗಿ, ಈ ಸೌಲಭ್ಯಗಳಿಗೆ ಅರ್ಹರಾಗಿದ್ದರೂ ಇನ್ನೂ ಅವುಗಳ ಪ್ರಯೋಜನ ಪಡೆಯದ ಫಲಾನುಭವಿಗಳನ್ನು ತಲುಪಲು ಆದ್ಯತೆ ನೀಡಲಾಗಿದೆ.

ರಾಜ್ಯ 6 ಅಧಿಕಾರಿಗಳಿಗೆ ಕೇಂದ್ರ ಗೃಹಮಂತ್ರಿ ದಕ್ಷತಾ ಪದಕ!

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ತನಿಖೆ ನಡೆಸಿ, ಆರೋಪಿಗೆ ಶಿಕ್ಷೆ ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಎಸ್‌ಐಟಿ ಹಾಗೂ ಸಿಐಡಿ ವಿಭಾಗದ ಮೂವರು ಅಧಿಕಾರಿಗಳು ಇನ್ಸ್‌ಪೆಕ್ಟರ್ ಶೋಭಾ, ಎಎಸ್‌ಐ ರತ್ನಮ್ಮ ಮತ್ತು ಸಿಎಚ್‌ಸಿ ಬಾಲಕೃಷ್ಣ) ಸೇರಿದಂತೆ ರಾಜ್ಯದ 6 ಅಧಿಕಾರಿಗಳು ಕೇಂದ್ರೀಯ ಗೃಹಮಂತ್ರಿ ದಕ್ಷತಾ ಪದಕಕ್ಕೆ ಭಾಜನರಾಗಿದ್ದಾರೆ. ಬೆಂಗಳೂರು ನಗರದ ಹಲಸೂರು ಗೇಟ್ ಸಂಚಾರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶೋಭ ಎನ್, ಬೆಂಗಳೂರಿನ ಪ್ರಧಾನ ಕಛೇರಿಯ ಪೊಲೀಸ್ ಇನ್ಸ್‌ಪೆಕ್ಟರ್ ಎಂ. ಶ್ರೀನಿವಾಸ್ ರಾವ್, ರಾಯಚೂರಿನ ದೇವದುರ್ಗ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಮಂಜುನಾಥ್, ಬೆಳಗಾವಿ ನಗರದ ಮಾಳಮಾರುತಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಬಾವುದ್ದೀನ್ ರುಕ್ಸುದ್ದೀನ್ ಗಡೇಕರ್, ಬೆಂಗಳೂರು ನಗರ ಪೂರ್ವ ವಿಭಾಗದ ಮಹಿಳಾ ಪೊಲೀಸ್ ಠಾಣೆಯ ಸಹಾಯಕ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರತ್ನಮ್ಮ ಕೆ ಹಾಗೂ ಬೆಂಗಳೂರಿನ ಸಿಐಡಿ ಘಟಕದ ಸಿಹೆಚ್‌ಸಿ ಬಾಲಕೃಷ್ಣವೈ ಅವರು ತನಿಖಾ ವಿಭಾಗದ ಪದಕಕ್ಕೆ ಭಾಜನರಾಗಿದ್ದಾರೆ.

ವಿಧಿವಿಜ್ಞಾನ ವಿಭಾಗದಲ್ಲಿ ನೀಡಲಾಗುವ ದಕ್ಷತಾ ಪದಕಕ್ಕೆ ಮೈಸೂರಿನ ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯದ ಉಪನಿರ್ದೇಶಕರಾದ ಡಾ. ಚಂದ್ರಶೇಖರ್ ಭಾಜನರಾಗಿದ್ದಾರೆ.

ಯಾವುದೇ ತನಿಖೆಗೆ ಆದೇಶಿಸಿ, ಎದುರಿಸಲು ಸಿದ್ಧ; ಕುಮಾರಸ್ವಾಮಿ

: ಸಹಾಯಕ ಆಯುಕ್ತರೊಬ್ಬರ ಮಗಳು ನೀಡಿದ ದೂರಿನ ಆಧಾರದ ಮೇಲೆ ಇಡೀ ನೇಮಕಾತಿ ಪ್ರಕ್ರಿಯೆಯನ್ನು ಅನುಮಾನದಿಂದ ನೋಡುವಂತಾಯಿತು.

• ಉದಯವಾಹಿನಿ, ಬೆಂಗಳೂರು

1 2011ರ ನೇಮಕಾತಿ ಪ್ರಕ್ರಿಯೆಯಲ್ಲಿ ನನಗಾಗಲಿ

2 ದೇವೇಗೌಡರಿಗಾಗಲಿ ಯಾವ ಆಸಕ್ತಿ ಇತ್ತು ?

3 ಅನೇಕರು ಕುಟುಂಬಗಳಿಂದ ಬಂದವರಾಗಿದ್ದು

ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಮೂಲಕ 2011ರಲ್ಲಿ 364 ಅಭ್ಯರ್ಥಿಗಳ ನೇಮಕಾತಿಗೆ ಸಂಬಂಧಿಸಿದ ವಿವಾದದಲ್ಲಿ ತಮ್ಮ ಪಾತ್ರವಿದೆ ಎಂಬ ಆರೋಪಕ್ಕೆ ಕೇಂದ್ರ ಸಚಿವ ಹಾಗೂ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ತಿರುಗೇಟು ನೀಡಿದ್ದಾರೆ. ತಮ್ಮ ವಿರುದ್ಧ ಯಾವುದೇ ತನಿಖೆ ನಡೆಸಲು ರಾಜ್ಯ ಸರ್ಕಾರ ಸ್ವತಂತ್ರವಾಗಿದೆ. ಯಾವುದೇ ತನಿಖೆಗೂ ತಾವು ಸಿದ್ಧ ಎಂದು ಸವಾಲು ಹಾಕಿದ್ದಾರೆ. ಈ ನೇಮಕಾತಿ ಪ್ರಕ್ರಿಯೆಯಲ್ಲಿ ತಮಗಾಗಲಿ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರಿಗಾಗಲಿ ವೈಯಕ್ತಿಕ ಆಸಕ್ತಿ ಇರಲಿಲ್ಲ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2014ರಲ್ಲಿ ಮಹಿಳಾ ಅಭ್ಯರ್ಥಿಯೊಬ್ಬರು ನೀಡಿದ ದೂರಿನ ಬಳಿಕ 364 ಅಭ್ಯರ್ಥಿಗಳ ನೇಮಕಾತಿ ಪ್ರಕ್ರಿಯೆ ವಿವಾದಕ್ಕೆ ಕಾರಣವಾಗಿತ್ತು. ಈ ಸಂಬಂಧ ಅಪರಾಧ ತನಿಖಾ ದಳ (ಸಿಐಡಿ) ತನಿಖೆಯೂ ನಡೆದಿತ್ತು ಎಂದು ಹೇಳಿದರು. ಸಹಾಯಕ ಆಯುಕ್ತರೊಬ್ಬರ ಮಗಳು ನೀಡಿದ ದೂರಿನ ಆಧಾರದ ಮೇಲೆ ಇಡೀ ನೇಮಕಾತಿ ಪ್ರಕ್ರಿಯೆಯನ್ನು ಅನುಮಾನದಿಂದ ನೋಡುವಂತಾಯಿತು. 2011ರ ನೇಮಕಾತಿ ಪ್ರಕ್ರಿಯೆಯಲ್ಲಿ ನನಗಾಗಲಿ, ದೇವೇಗೌಡರಿಗಾಗಲಿ ಯಾವ ಆಸಕ್ತಿ ಇತ್ತು? ಅಕ್ರಮದಲ್ಲಿ ನನ್ನ ಪಾತ್ರವಿದೆ ಎಂದು ಯಾರಾದರೂ ಆರೋಪಿಸಿದರೆ ಯಾವುದೇ ತನಿಖೆ ನಡೆಸಲಿ. ಅದನ್ನು ಎದುರಿಸಲು ನಾನು ಸಿದ್ಧನಿದ್ದೇನೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

ಅವರಲ್ಲಿ ಅನೇಕರು ಬಡ ಕುಟುಂಬದವರು. ಜೀವನ ನಿರ್ವಹಣೆಗಾಗಿ ಕೂಲಿ ಕೆಲಸ ಮಾಡುತ್ತಿದ್ದವರೂ ಇದ್ದರು. ಗರ್ಭಿಣಿಯರೂ ಆಯ್ಕೆಯಾಗಿದ್ದರು. ಅವರ ಪರವಾಗಿ ನಾನು ಧ್ವನಿ ಎತ್ತಿದ್ದೆ ಎಂದು ತಿಳಿಸಿದರು.

ಹಣ ನೀಡಿ ಉದ್ಯೋಗ ಗಿಟ್ಟಿಸಿಕೊಂಡಿದ್ದಾರೆ ಎಂಬ ಆರೋಪ ಅರ್ಹ ಅಭ್ಯರ್ಥಿಗಳಿಗೆ ಮಾಡುವ ಅನ್ಯಾಯ ಎಂದು ಕುಮಾರಸ್ವಾಮಿ ಅಭಿಪ್ರಾಯಪಟ್ಟರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಆದೇಶ ನೀಡಿದೆ ಎಂದ ಅವರು, ಹಳೆಯ ವಿವಾದವನ್ನು ಮತ್ತೆ ಮುನ್ನೆಲೆಗೆ ತರುವ ಪ್ರಯತ್ನಗಳ ಬಗ್ಗೆಯೂ ಪ್ರಶ್ನಿಸಿದರು. ಸ್ಟುಡಿಯೋದಲ್ಲಿ ಚಿತ್ರೀಕರಣಕ್ಕಾಗಿ ಸೆಟ್ ಹಾಕಿದಂತೆ ಒಂದು ದೃಶ್ಯವನ್ನು ಸೃಷ್ಟಿಸಿ ಈ ಘಟನೆ ನಡೆಸಿರಬಹುದು ಎಂಬುದು ನನ್ನ ಅಭಿಪ್ರಾಯ. ಈ ವಿಚಾರದ ಬಗ್ಗೆ ಹೆಚ್ಚು ಮಾತನಾಡಲು ಇಷ್ಟಪಡುವುದಿಲ್ಲ ಎಂದು ಹೇಳಿದರು. ರಾಹುಲ್ ಗಾಂಧಿ ಅವರ ದೂರವಾಣಿ ಕರೆ ಮತ್ತು ಮುಂದಿನ ದಿನಗಳಲ್ಲಿ ನಡೆಯಬಹುದಾದ ರಾಜಕೀಯ ಬೆಳವಣಿಗೆಗಳ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿ, ಕನ್ನಡ ರಾಜ್ಯೋತ್ಸವ ಮುಗಿದ ಬಳಿಕ ಈ ಬಗ್ಗೆ ಮಾತನಾಡಬಹುದು ಎಂದರು. ತಮ್ಮನ್ನು ಏಕೆ ಬಂಧಿಸಬೇಕು ಎಂದು ಪ್ರಶ್ನಿಸಿದ ಅವರು, ರಾಹುಲ್ ಗಾಂಧಿ ಅವರನ್ನು ಒಳಗೊಂಡ ರಾಜಕೀಯ ಚರ್ಚೆಗಳು ಯಾರದ್ದೋ ಮುಖ ಉಳಿಸುವ ಪ್ರಯತ್ನವಾಗಿರಬಹುದು ಎಂದು ಹೇಳಿದರು. ಇದೇ ವೇಳೆ ಎಚ್‌ಎಂಟಿ ವಾಚ್ ಕಾರ್ಖಾನೆಯ ಪುನಶ್ಚೇತನಕ್ಕೆ ಸಾರ್ವಜನಿಕರು ಪ್ರೋತ್ಸಾಹ ಮತ್ತು ಬೆಂಬಲ ನೀಡಬೇಕು ಎಂದು ಕುಮಾರಸ್ವಾಮಿ ಮನವಿ ಮಾಡಿದರು. ಮಾಧ್ಯಮಗಳು ಕಾರ್ಖಾನೆಯ ಪರವಾಗಿ ಸಣ್ಣದೊಂದು ಸಕಾರಾತ್ಮಕ ಸಂದೇಶ ನೀಡಿದರೂ ಸಂಸ್ಥೆಗೆ ನೆರವಾಗಲಿದೆ. ಇದರಿಂದ ಎಚ್‌ಎಂಟಿ ವಾಚ್‌ಗಳ ಬಗ್ಗೆ ಜನರಲ್ಲಿ ಮತ್ತೆ ಆಸಕ್ತಿ ಮೂಡಲು ಸಾಧ್ಯವಾಗಲಿದೆ ಎಂದು ಹೇಳಿದರು.

> ಇದೇ ವೇಳೆ ತಮ್ಮ ನಿವಾಸದ ಮೇಲೆ ದಾಳಿ ಅಥವಾ ಮಹಜರು ನಡೆಸುವ ಸಾಧ್ಯತೆ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ ಅವರು, ಈ ಬೆಳವಣಿಗೆಯೇ ಪೂರ್ವನಿಯೋಜಿತ ನಾಟಕವಾಗಿರಬಹುದು ಎಂದು ಅನುಮಾನ ವ್ಯಕ್ತಪಡಿಸಿದರು.
> -ಎಚ್.ಡಿ. ಕುಮಾರಸ್ವಾಮಿ

ಉದ್ಯೋಗ ಪಡೆಯಲು ಕಷ್ಟ

ಅವರಲ್ಲಿ ಅನೇಕರು ಬಡ ಕುಟುಂಬಗಳಿಂದ ಬಂದವರಾಗಿದ್ದು, ಸರ್ಕಾರಿ ಉದ್ಯೋಗ ಪಡೆಯಲು ಸಾಕಷ್ಟು ಕಷ್ಟಪಟ್ಟಿದ್ದಾರೆ. ಆಯ್ಕೆಯಾದ 364 ಅಭ್ಯರ್ಥಿಗಳಲ್ಲಿ ದೃಷ್ಟಿಹೀನರಾಗಿದ್ದ ವ್ಯಕ್ತಿಯೊಬ್ಬರು ತಹಶೀಲ್ದಾರ್ ಆಗಿ ಆಯ್ಕೆಯಾಗಿದ್ದ ಉದಾಹರಣೆಯನ್ನೂ ನೀಡಿದರು.

2027ರ ಜನವರಿಯೊಳಗೆ ಜಿಪಂ, ತಾಪಂ ಚುನಾವಣೆ ಖಚಿತ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಚುನಾವಣೆಗಳು 2027ರ ಜನವರಿಯೊಳಗೆ ನಡೆದೇ ನಡೆಯುತ್ತವೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಶನಿವಾರ ತಿಳಿಸಿದರು.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತಾಡಿದ ಈಶ್ವರ್ ಖಂಡ್ರೆ, ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಕರಡು ಮೀಸಲು ಅಧಿಸೂಚನೆ ಹೊರಡಿಸಿದೆ. ಬರುವ ಜನವರಿ ಮೊದಲ ಅಥವಾ ಎರಡನೇ ವಾರಗಳಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ ಚುನಾವಣೆಗಳು ನಡೆಯುತ್ತವೆ ಎಂದರು. ಅ.19ರ ವರೆಗೆ ಕರಡು ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಸುಮಾರು 2 ಸಾವಿರಕ್ಕೂ ಅಧಿಕ ಆಕ್ಷೇಪಣೆ ಬಂದಿದ್ದು, ಅಧಿಕಾರಿಗಳು ನಿಯಮಾನುಸಾರ ಪರಿಶೀಲನೆ ಮಾಡುತ್ತಿದ್ದು, ಶೀಘ್ರವೇ ಅಂತಿಮ ಅಧಿಸೂಚನೆ ಹೊರಡಿಸಲಾಗುತ್ತದೆ ಎಂದು ಅವರು ಹೇಳಿದರು. ರಾಜ್ಯ ಸರ್ಕಾರ ಪ್ರಸ್ತಾವನೆ ಸಲ್ಲಿಸಿದ ತರುವಾಯ ರಾಜ್ಯ ಚುನಾವಣೆ ಆಯೋಗ, ಕೇಂದ್ರ ಚುನಾವಣೆ ಆಯೋಗದಿಂದ ಮತದಾರರ ಪಟ್ಟಿ ಪಡೆದು ಅಥವಾ ತನ್ನಲ್ಲಿರುವ ಮತದಾರರ ಪಟ್ಟಿಯನ್ನೇ ಪರಿಷ್ಕರಿಸಿ ಚುನಾವಣೆ ನಡೆಸುವ ಕುರಿತಂತೆ ಕ್ರಮ ವಹಿಸಲಿದೆ. ಬಹುತೇಕ ಜನವರಿ ಮೊದಲ ಅಥವಾ 2ನೇ ವಾರದಲ್ಲಿ ತಾಲೂಕು ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳು ನಡೆಯುತ್ತವೆ. ಈ ಚುನಾವಣೆಗಳ ತರುವಾಯ ಗ್ರಾಮ ಪಂಚಾಯತಿ ಚುನಾವಣೆಗಳು ನಡೆಯಲಿವೆ ಎಂದು ಮಾಹಿತಿ ನೀಡಿದರು.

ಹಳದಿ-ಕೆಂಪು ಕನ್ನಡ ಧ್ವಜಕ್ಕೆ ಮತ್ತೊಂದು ಬಣ್ಣ, ಮಧ್ಯದಲ್ಲಿ ರಾಜ್ಯ ಲಾಂಛನ

• ಉದಯವಾಹಿನಿ, ಬೆಂಗಳೂರು

ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡ ಧ್ವಜದ ವಿನ್ಯಾಸದಲ್ಲಿ ಮಹತ್ವದ ಬದಲಾವಣೆ ತರಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸಾಂಪ್ರದಾಯಿಕ ಹಳದಿ ಮತ್ತು ಕೆಂಪು ಬಣ್ಣದ ಧ್ವಜಕ್ಕೆ ಮತ್ತೊಂದು ಬಣ್ಣವನ್ನು ಸೇರಿಸುವುದರ ಜೊತೆಗೆ, ಮಧ್ಯ ಭಾಗದಲ್ಲಿ ಕರ್ನಾಟಕದ ರಾಜ್ಯ ಲಾಂಛನವನ್ನು ಅಳವಡಿಸಲು ಉದ್ದೇಶಿಸಲಾಗಿದೆ. ಅಲ್ಲದೆ, ಸರ್ಕಾರಿ ಕಚೇರಿಗಳು ಹಾಗೂ ಖಾಸಗಿ ಕಂಪನಿಗಳಲ್ಲಿ ಕನ್ನಡ ಧ್ವಜಾರೋಹಣ ಕಡ್ಡಾಯಗೊಳಿಸಲು ಸಿದ್ಧತೆ ನಡೆಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಘೋಷಿಸಿದ್ದಾರೆ.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ 71ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿದ ಬಳಿಕ ಮಾತನಾಡಿದ ಅವರು, ವಿಶ್ವದಾದ್ಯಂತ ನೆಲೆಸಿರುವ ಕನ್ನಡಿಗರಿಗೆ ರಾಜ್ಯೋತ್ಸವದ ಶುಭಾಶಯಗಳನ್ನು ಕೋರಿದರು. ಕನ್ನಡ ನಾಡು, ನುಡಿ, ನೆಲ ಹಾಗೂ ಧ್ವಜದ ರಕ್ಷಣೆಗೆ ಸರ್ಕಾರ ಸಂಪೂರ್ಣ ಬದ್ಧವಾಗಿದೆ ಎಂದು ತಿಳಿಸಿದರು.

ಕನ್ನಡದ ಅಸ್ಮಿತೆಯ ಸಂಕೇತವಾಗಿರುವ ಹಳದಿ-ಕೆಂಪು ಧ್ವಜಕ್ಕೆ ಅಧಿಕೃತ ಸ್ಥಾನಮಾನ ಕಲ್ಪಿಸುವುದರ ಜೊತೆಗೆ ಅದರ ವಿನ್ಯಾಸದಲ್ಲಿ ಬದಲಾವಣೆ ತರಲು ಸರ್ಕಾರ ಚಿಂತನೆ ನಡೆಸಿದೆ.

ಧ್ವಜದಲ್ಲಿ ಮತ್ತೊಂದು ಬಣ್ಣವನ್ನು ಸೇರಿಸಿ, ಮಧ್ಯಭಾಗದಲ್ಲಿ ಕರ್ನಾಟಕದ ರಾಜ್ಯ ಲಾಂಛನವನ್ನು ಅಳವಡಿಸುವ ಪ್ರಸ್ತಾವನೆಯಿದೆ. ಸರ್ಕಾರಿ ಕಚೇರಿಗಳಲ್ಲಿ ಕನ್ನಡ ಧ್ವಜ ಹಾರಿಸುವುದನ್ನು ಕಡ್ಡಾಯಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಐಟಿ-ಬಿಟಿ ಸೇರಿದಂತೆ ಎಲ್ಲಾ ಖಾಸಗಿ ಕಂಪನಿಗಳಲ್ಲೂ ಕನ್ನಡ ಬಾವುಟ ಹಾರಿಸುವಂತೆ ಆದೇಶ ಹೊರಡಿಸುವ ಕುರಿತು ಸಿದ್ಧತೆ ನಡೆದಿದೆ.


ಉದಯವಾಹಿನಿ ಚಿತ್ರ

ವಿಧಾನಸೌಧದ ಮೇಲೆಯೂ ಕನ್ನಡ ಧ್ವಜ ಹಾರಿಸುವ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ಸಂಬಂಧ ಇತ್ತೀಚೆಗೆ ಕಾನೂನು ತಜ್ಞರೊಂದಿಗೂ ಸಮಾಲೋಚನೆ ನಡೆಸಲಾಗಿದೆ ಎಂದು ತಿಳಿಸಿದರು.

ಮೇಕೆದಾಟು ಜಲಾಶಯ ಯೋಜನೆಗೆ ವೇಗ ನೀಡಲು ರಾಜ್ಯ ಸರ್ಕಾರ ಮಹತ್ವದ ಹೆಜ್ಜೆ

• ಉದಯವಾಹಿನಿ, ಬೆಂಗಳೂರು

ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಲು ಉದ್ದೇಶಿಸಿರುವ ಮೇಕೆದಾಟು ಸಮತೋಲನ ಜಲಾಶಯ ಯೋಜನೆಯ ವಿವಿಧ ಕಾರ್ಯಗಳ ಮೇಲ್ವಿಚಾರಣೆಗಾಗಿ ಮಂಡ್ಯ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿದೆ. ದೀರ್ಘಕಾಲದಿಂದ ಬಾಕಿ ಉಳಿದಿರುವ ಮೇಕೆದಾಟು ಯೋಜನೆಯನ್ನು ಮತ್ತೆ ಮುನ್ನೆಲೆಗೆ ತರಲು ಕಾಂಗ್ರೆಸ್ ಸರ್ಕಾರ ಈ ಘೋಷಣೆ ಮಾಡಿದೆ.

ಬೆಂಗಳೂರಿನ ಕುಡಿಯುವ ನೀರಿನ ಅಗತ್ಯ ಹಾಗೂ ಕಾವೇರಿ ಜಲಾನಯನ ಪ್ರದೇಶದ ನೀರಾವರಿ ಬೇಡಿಕೆಗಳನ್ನು ಪೂರೈಸಲು ಈ ಯೋಜನೆ ನಿರ್ಣಾಯಕವಾಗಿದೆ ಎಂದು ಕರ್ನಾಟಕದ ಹಿಂದಿನ ಸರ್ಕಾರಗಳೂ ಪ್ರತಿಪಾದಿಸಿವೆ. ಯೋಜನೆಗೆ ಅಗತ್ಯವಿರುವ ಭೂಮಿಯನ್ನು ಗುರುತಿಸುವ ಪ್ರಕ್ರಿಯೆಯಲ್ಲಿ ಹಲವು ಅಡೆತಡೆಗಳು ಎದುರಾಗಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ನೇತೃತ್ವದ ಸಮಿತಿಯನ್ನು ರಚಿಸುವ ಮೂಲಕ ಆಡಳಿತಾತ್ಮಕವಾಗಿ ಯೋಜನೆಗೆ ವೇಗ ನೀಡಲು ಸರ್ಕಾರ ಮುಂದಾಗಿದೆ.


ಉದಯವಾಹಿನಿ ಚಿತ್ರ

ಕರ್ನಾಟಕ ಮತ್ತು ತಮಿಳುನಾಡು ಗಡಿಯ ಸಮೀಪ ಪ್ರಸ್ತಾಪಿತವಾಗಿರುವ ಮೇಕೆದಾಟು ಸಮತೋಲನ ಜಲಾಶಯ ಯೋಜನೆಯು ಹಲವು ವರ್ಷಗಳಿಂದ ಸ್ಥಗಿತಗೊಂಡಿದೆ. ಅಂತಾರಾಜ್ಯ ಜಲವಿವಾದ, ಕೇಂದ್ರ ಸರ್ಕಾರದ ಅನುಮತಿಗಳ ಅಗತ್ಯ ಹಾಗೂ ಪರಿಸರ ಸಂಬಂಧಿತ ಆತಂಕಗಳು ಯೋಜನೆಗೆ ಅಡ್ಡಿಯಾಗಿವೆ. ಆದರೆ, ಅಸ್ತಿತ್ವದಲ್ಲಿರುವ ನೀರು ಹಂಚಿಕೆ ತೀರ್ಪುಗಳಿಗೆ ಧಕ್ಕೆಯಾಗದಂತೆ ಜಲಪ್ರವಾಹವನ್ನು ನಿಯಂತ್ರಿಸಲು ಈ ಜಲಾಶಯ ನೆರವಾಗಲಿದೆ ಎಂಬುದು ಕರ್ನಾಟಕದ ವಾದವಾಗಿದೆ. ಜಿಲ್ಲಾಮಟ್ಟದ ಸಮಿತಿ ರಚಿಸುವ ಮೂಲಕ ಸ್ಥಳೀಯ ಅಧಿಕಾರಿಗಳ ಸಮನ್ವಯ ಮತ್ತು ಆಡಳಿತಾತ್ಮಕ ಸಿದ್ಧತೆಗೆ ರಾಜ್ಯ ಸರ್ಕಾರ ಒತ್ತು ನೀಡಿದೆ. ಆದರೆ, ಯೋಜನೆಗೆ ಸಂಬಂಧಿಸಿದ ರಾಜಕೀಯ ಹಾಗೂ ಕಾನೂನು ಅಡೆತಡೆಗಳು ಇನ್ನೂ ಬಗೆಹರಿದಿಲ್ಲ.

ಈ ಸಂಬಂಧ ಜಲಸಂಪನ್ಮೂಲ ಸಚಿವ ಎನ್. ಚೆಲುವರಾಯಸ್ವಾಮಿ ಹಾಗೂ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ ಅವರು ದೆಹಲಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಚಿವರನ್ನು

ನೋಡಲ್ ಅಧಿಕಾರಿಯಾಗಿ ನೇಮಕ

ಮಂಡ್ಯ ಜಿಲ್ಲಾಧಿಕಾರಿಯನ್ನು ಯೋಜನೆಯ ಸಮನ್ವಯಕ್ಕಾಗಿ ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ. ಈಗಾಗಲೇ 1,250 ಎಕರೆ ಭೂಮಿಯನ್ನು ಗುರುತಿಸಲಾಗಿದೆ. ಶೀಘ್ರದಲ್ಲೇ ಮತ್ತೊಂದು 1,250 ಎಕರೆ ಭೂಮಿಯನ್ನು ಗುರುತಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

KSRTC ಸಿಹಿಸುದ್ದಿ; 2,600 ಹೆಚ್ಚುವರಿ ಬಸ್‌ಗಳ ವ್ಯವಸ್ಥೆ..!

• ಉದಯವಾಹಿನಿ, ಬೆಂಗಳೂರು

ದೀಪಾವಳಿ ಹಬ್ಬ ಹಾಗೂ ವಾರಾಂತ್ಯದ ಪ್ರಯಾಣಿಕರ ದಟ್ಟಣೆಯನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನವೆಂಬರ್ 6ರಿಂದ 8ರವರೆಗೆ ಬೆಂಗಳೂರಿನಿಂದ ವಿವಿಧ ಸ್ಥಳಗಳಿಗೆ 2,600 ಹೆಚ್ಚುವರಿ ಬಸ್‌ಗಳನ್ನು ಕಾರ್ಯಾಚರಣೆ ಮಾಡಲಿದೆ.

ಹಬ್ಬ ಮುಗಿಸಿ ವಾಪಸ್ ಬರುವ ಪ್ರಯಾಣಿಕರ ಅನುಕೂಲಕ್ಕಾಗಿ ನವೆಂಬರ್ 10 ಮತ್ತು 11ರಂದು ರಾಜ್ಯದೊಳಗಿನ ಹಾಗೂ ಹೊರರಾಜ್ಯದ ವಿವಿಧ ಸ್ಥಳಗಳಿಂದ ಬೆಂಗಳೂರಿಗೆ ವಿಶೇಷ ಬಸ್‌ಗಳು ಸಂಚರಿಸಲಿವೆ. ನವೆಂಬರ್ 8ರಂದು ನರಕ ಚತುರ್ದಶಿ ಹಾಗೂ ನವೆಂಬರ್ 10ರಂದು ಬಲಿಪಾಡ್ಯಮಿ ಇರುವ ಹಿನ್ನೆಲೆಯಲ್ಲಿ ಈ ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣ ಹಾಗೂ ಶಾಂತಿನಗರದ ಸಂಚಾರ ಮತ್ತು ಸಾರಿಗೆ ನಿರ್ವಹಣಾ ಕೇಂದ್ರದಿಂದ (ಟಿಟಿಎಂಸಿ) ವಿಶೇಷ ಬಸ್‌ಗಳು ಹೊರಡಲಿವೆ.

ಬಿಎಂಟಿಸಿಯ ಶಾಂತಿನಗರ, ವಿಜಯನಗರ, ಯಶವಂತಪುರ ಮತ್ತು ಜಯನಗರ ಟಿಟಿಎಂಸಿಗಳು, ಮಲ್ಲೇಶ್ವರಂ 18ನೇ ಅಡ್ಡ ರಸ್ತೆ, ಬಸವೇಶ್ವರನಗರ, ಎಲೆಕ್ಟ್ರಾನಿಕ್ ಸಿಟಿ, ಅತ್ತಿಬೆಲೆ, ಟಿನ್ ಫ್ಯಾಕ್ಟರಿ ಸೇರಿದಂತೆ ಇತರ ಬಸ್ ನಿಲ್ದಾಣಗಳಿಂದಲೂ ಹೆಚ್ಚುವರಿ ಮುಂಗಡ ಕಾಯ್ದಿರಿಸಿದ ಬಸ್‌ಗಳು ಕಾರ್ಯಾಚರಣೆ ಮಾಡಲಿವೆ.

ಕೆಂಪೇಗೌಡ ಬಸ್ ನಿಲ್ದಾಣದಿಂದ ಮಂಗಳೂರು, ಉಡುಪಿ, ಶಿವಮೊಗ್ಗ, ಹುಬ್ಬಳ್ಳಿ, ಬೆಳಗಾವಿ, ಕಲಬುರಗಿ, ಬಳ್ಳಾರಿ, ಹೈದರಾಬಾದ್, ವಿಜಯವಾಡ ಮತ್ತು ತಿರುಪತಿ ಸೇರಿದಂತೆ ಹಲವು ಸ್ಥಳಗಳಿಗೆ ಬಸ್‌ಗಳು ಸಂಚರಿಸಲಿವೆ. ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಮೈಸೂರು, ಹುಣಸೂರು, ಮಡಿಕೇರಿ, ವಿರಾಜಪೇಟೆ ಸೇರಿದಂತೆ ವಿವಿಧ ಸ್ಥಳಗಳಿಗೆ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ.

ಚೆನ್ನೈ, ಕೊಯಮತ್ತೂರು, ಮಧುರೈ, ತಿರುಚ್ಚಿ, ಪಾಲಕ್ಕಾಡ್, ತ್ರಿಶೂರ್, ಎರ್ನಾಕುಲಂ ಮತ್ತು ಕೋಯಿಕ್ಕೋಡ್‌ಗೆ ತೆರಳುವ ಐಷಾರಾಮಿ ಬಸ್‌ಗಳು ಶಾಂತಿನಗರ ಟಿಟಿಎಂಸಿಯಿಂದ ಹೊರಡಲಿವೆ.

ಅಡ್ಡಂಡ ಕಾರ್ಯಪ್ಪ ಮುಖಕ್ಕೆ ಮಸಿ ಬಳಿದ ಕಾಂಗ್ರೆಸ್ ಕಾರ್ಯಕರ್ತರು

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಬನಶಂಕರಿಯ ಸುಚಿತ್ರಾ ಅಕಾಡೆಮಿಯಲ್ಲಿ ನಾಟಕ ಪ್ರದರ್ಶನ ನಡೆಯುತ್ತಿದ್ದ ವೇಳೆ ನಾಟಕಕಾರ ಹಾಗೂ ರಂಗ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಅವರಿಗೆ ಕಾಂಗ್ರೆಸ್ ಕಾರ್ಯಕರ್ತರ ಗುಂಪೊಂದು ಮಸಿ ಬಳಿದ ಘಟನೆ ನಡೆದಿದೆ. ಬನಶಂಕರಿಯಲ್ಲಿರುವ ಸುಚಿತ್ರಾ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿಯಲ್ಲಿ ನಿನ್ನೆ ಸಂಜೆ ರಾಜಕೀಯ ಕಾರ್ಯಕರ್ತರು ಹಾಗೂ ನಾಟಕದ ಆಯೋಜಕರ ನಡುವೆ ಸಂಘರ್ಷ ಉಂಟಾಗಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ವೇಳೆ ನಾಟಕಕಾರ ಹಾಗೂ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಅವರಿಗೆ ಕಪ್ಪು ಮಸಿ ಬಳಿಯಲಾಗಿದೆ. 'ಗಾಂಧಿ ಹತ್ಯೆಯ ಸತ್ಯ' ಎಂಬ ನಾಟಕದ ಪ್ರದರ್ಶನದ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ಕಾರ್ಯಪ್ಪ ಅವರ ನಿರ್ದೇಶನದ 'ಗಾಂಧಿ ಹತ್ಯಾ ಸತ್ಯ: ದಿ ಟ್ರೂತ್ ಆಫ್ ಗಾಂಧೀಸ್ ಮರ್ಡರ್' ನಾಟಕದ ಪ್ರದರ್ಶನ ನಡೆಯುತ್ತಿದ್ದ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ನಾಟಕದಲ್ಲಿನ ಕೆಲವು ಸಂಭಾಷಣೆಗಳು ಪ್ರೇಕ್ಷಕರ ಆಕ್ರೋಶಕ್ಕೆ ಕಾರಣವಾಗಿದ್ದು, ಮಹಾತ್ಮ ಗಾಂಧಿ ಅವರನ್ನು ದೇಶದ್ರೋಹಿ ಎಂದು ಉಲ್ಲೇಖಿಸಿರುವುದು ವಿವಾದಕ್ಕೆ ಕಾರಣವಾಗಿದೆ ಎನ್ನಲಾಗಿದೆ.

ಕನ್ನಡಿಗರಿಗೆ ಕನ್ನಡದಲ್ಲೇ ಕನ್ನಡ ರಾಜ್ಯೋತ್ಸವದ ಶುಭಾಶಯ ಕೋರಿದ :ಪ್ರಧಾನಿ

• ಉದಯವಾಹಿನಿ, ಬೆಂಗಳೂರು

ಕನ್ನಡ ರಾಜ್ಯೋತ್ಸವದ ಅಂಗವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕನ್ನಡಿಗರಿಗೆ ಕನ್ನಡದಲ್ಲೇ ಶುಭಾಶಯ ಕೋರಿದ್ದಾರೆ. ಕರ್ನಾಟಕದ ಶ್ರೀಮಂತ ಪರಂಪರೆ, ಸಾಂಸ್ಕೃತಿಕ ವೈಭವ ಹಾಗೂ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗಳನ್ನು ಇಬ್ಬರೂ ನಾಯಕರು ಶ್ಲಾಘಿಸಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ


ಉದಯವಾಹಿನಿ ಚಿತ್ರ

ಪ್ರಧಾನಮಂತ್ರಿ ನರೇಂದ್ರ ಮೋದಿಯವರು, ಕರ್ನಾಟಕವು ಶ್ರೀಮಂತ ಪರಂಪರೆ, ಗಮನಾರ್ಹ ಸಾಧನೆಗಳನ್ನು ಹಾಗೂ ಅಪಾರ ಸಾಧ್ಯತೆಗಳನ್ನು ಹೊಂದಿರುವ ನಾಡು ಎಂದು ಬಣ್ಣಿಸಿದ್ದಾರೆ. ಕರ್ನಾಟಕದ ವೈಭವೋಪೇತ ಪರಂಪರೆ ಮತ್ತು ಸಾರ್ವಕಾಲಿಕ ಆಚಾರ-ವಿಚಾರಗಳು ದೇಶದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮತ್ತಷ್ಟು ಹೆಚ್ಚಿಸಿವೆ. ಇಲ್ಲಿನ ಜನರು ತಮ್ಮ ಕಠಿಣ ಪರಿಶ್ರಮ, ಉದ್ಯಮಶೀಲತೆ ಹಾಗೂ ಭವಿಷ್ಯದ ಕ್ಷೇತ್ರಗಳಲ್ಲಿನ ಕೌಶಲದಿಂದ ವಿಶಿಷ್ಟ ಛಾಪು ಮೂಡಿಸಿದ್ದಾರೆ ಎಂದು ಹೇಳಿದ್ದಾರೆ. ಮಾಹಿತಿ

ನ್ಯಾಯಾಧೀಶನಾಗಬೇಕೆಂಬ ಕನಸು ಹೊತ್ತಿದ್ದ ದಾವಣಗೆರೆ ವಕೀಲ

• ಉದಯವಾಹಿನಿ, ಬೆಂಗಳೂರು

ಉತ್ತರಾಖಂಡ್‌ನ ಚಮೋಲಿ ಜಿಲ್ಲೆಯಲ್ಲಿ ಸಂಭವಿಸಿದ ಭೀಕರ ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟ ಕರ್ನಾಟಕದ ಐದು ಯಾತ್ರಿಕರಲ್ಲಿ ಬೆಂಗಳೂರಿನ ವಕೀಲ ಸುಧೀರ್ ಕೆ (49) ಕೂಡ ಒಬ್ಬರಾಗಿದ್ದು, ತಂದೆಯ ಹಾದಿಯಲ್ಲೇ ಸಾಗಿ ತಾವೂ ನ್ಯಾಯಾಧೀಶರಾಗಬೇಕೆಂಬ ಅವರ ದೊಡ್ಡ ಕನಸು ಇದೀಗ ಅರ್ಧಕ್ಕೆ ಕಮರಿಹೋಗಿದೆ. ಮೃತ ಸುಧೀರ್ ಅವರು ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ತ್ಯಾವಣಿಗೆ ಗ್ರಾಮದ ಪ್ರಸಿದ್ಧ ಹಾಗೂ ಸುಶಿಕ್ಷಿತ 'ಕೊಕ್ಕನೂರು' ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಇವರ ತಂದೆ ಮಲ್ಲೇಶಪ್ಪ ಅವರು ಈ ಹಿಂದೆ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ್ದರು. ತಂದೆಯ ಪ್ರೇರಣೆಯಿಂದ ಸುಧೀರ್ ಅವರಿಗೂ ನ್ಯಾಯಾಧೀಶರಾಗಬೇಕೆಂಬ ತೀವ್ರ ಆಸೆಯಿತ್ತು.

ಸುಧೀರ್ ಅವರು ವಕೀಲ ವೃತ್ತಿಯಲ್ಲಿದ್ದರೂ ಹಣದ ಆಸೆಯಿಲ್ಲದೆ, ತಮ್ಮ ಹುಟ್ಟೂರಾದ ತ್ಯಾವಣಿಗೆ ಗ್ರಾಮದ ಬಡ ಜನರಿಗೆ ಉಚಿತವಾಗಿ ಅಥವಾ ಅತ್ಯಂತ ಕಡಿಮೆ ವೆಚ್ಚದಲ್ಲಿ ಕಾನೂನು ನೆರವು ನೀಡುತ್ತಿದ್ದರು.

ಬೆಂಗಳೂರಿಗೆ ಬಂದು ಕೋರ್ಟ್ ವೆಚ್ಚ ಭರಿಸಲು ಸಾಧ್ಯವಾಗದ ಬಡ ಹಳ್ಳಿಗರ ಪರವಾಗಿ ಅವರು ವಕಾಲತ್ತು ವಹಿಸುವ ಮೂಲಕ ಜನಪ್ರಿಯತೆಗಳಿಸಿದ್ದರು.

ಈ ಕುರಿತು ಮಾತನಾಡಿದ ಅವರ ಸಂಬಂಧಿ ಜಗದೀಶ್, ಸುಧೀರ್ ಕುಟುಂಬದವರೊಂದಿಗೆ ಹಾಗೂ ಗ್ರಾಮಸ್ಥರೊಂದಿಗೆ ಬಹಳ ಆತ್ಮೀಯವಾಗಿದ್ದರು. ಬೆಂಗಳೂರಿಗೆ ತೆರಳಲು ಸಾಧ್ಯವಾಗದ ಗ್ರಾಮಸ್ಥರ ಪ್ರಕರಣಗಳನ್ನು ಅವರೇ ನಿರ್ವಹಿಸಿ ನ್ಯಾಯ ದೊರಕಿಸಿಕೊಡಲು ಸಹಾಯ ಮಾಡುತ್ತಿದ್ದರು ಎಂದು ತಿಳಿಸಿದರು.

ವಿದ್ಯುತ್ ವಹಿವಾಟಿಗೆ ಪಾರದರ್ಶಕ, ವೇಗದ ಡಿಜಿಟಲ್ ವ್ಯವಸ್ಥೆ

ಪಾರದರ್ಶಕ, ಹೊಣೆಗಾರಿಕೆಯುತ, ನಿಖರ ಮತ್ತು ವೇಗಗೊಳಿಸುವ ಉದ್ದೇಶದಿಂದ ಸಮಗ್ರ ಡಿಜಿಟಲ್ ವೇದಿಕೆಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

• ಉದಯವಾಹಿನಿ, ಬೆಂಗಳೂರು

1 ಖರೀದಿದಾರರವರೆಗೆ ಒಂದೇ ವ್ಯವಸ್ಥೆ

2 ಕಂಪನಿಗಳು ಒಂದೇ ಡಿಜಿಟಲ್ ವ್ಯವಸ್ಥೆ

3 ಎಷ್ಟು ವಿದ್ಯುತ್ ಪ್ರಸರಣಗೊಂಡಿದೆ

ಕರ್ನಾಟಕದ ವಿದ್ಯುತ್ ವಲಯದ ವಹಿವಾಟುಗಳನ್ನು ಮತ್ತಷ್ಟು ಪಾರದರ್ಶಕ, ಹೊಣೆಗಾರಿಕೆಯುತ, ನಿಖರ ಮತ್ತು ವೇಗಗೊಳಿಸುವ ಉದ್ದೇಶದಿಂದ ಸಮಗ್ರ ಡಿಜಿಟಲ್ ವೇದಿಕೆಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದ್ದಾರೆ.

ಸಚಿವ ಕೆ.ಜೆ. ಜಾರ್ಜ್ ಅವರ ನಿರ್ದೇಶನದಂತೆ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ. ವಿ. ರಾಮ್ ಪ್ರಸಾತ್ ಮನೋಹರ್ ಅವರು ಯೋಜನೆಯ ಅನುಷ್ಠಾನಕ್ಕೆ ಅಗತ್ಯ ಕಾರ್ಯಗಳನ್ನು ಆರಂಭಿಸಿದ್ದು, ಸಂಬಂಧಿತ ವಿಭಾಗಗಳು ಹಾಗೂ ಸಂಸ್ಥೆಗಳ ನಡುವಿನ ದತ್ತಾಂಶ ಮತ್ತು ಪ್ರಕ್ರಿಯೆಗಳ ಏಕೀಕರಣಕ್ಕೆ ಕ್ರಮ ಕೈಗೊಂಡಿದ್ದಾರೆ. ವಿದ್ಯುತ್ ಉತ್ಪಾದನಾ ಸಂಸ್ಥೆಗಳು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್), ವಿದ್ಯುತ್ ಸರಬರಾಜು ಕಂಪನಿಗಳು ಹಾಗೂ ಇತರೆ ಸಂಬಂಧಿತ ಸಂಸ್ಥೆಗಳ ನಡುವಿನ ಪ್ರಮುಖ ವಹಿವಾಟುಗಳನ್ನು ಒಂದೇ ಕೇಂದ್ರೀಕೃತ ಡಿಜಿಟಲ್ ವೇದಿಕೆಯಲ್ಲಿ ಜೋಡಿಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಈವರೆಗೆ ವಿವಿಧ ಹಂತಗಳಲ್ಲಿ ಪ್ರತ್ಯೇಕವಾಗಿ ಹಾಗೂ ಹಸ್ತಚಾಲಿತವಾಗಿ ನಡೆಯುತ್ತಿದ್ದ ವಿದ್ಯುತ್ ಖರೀದಿ?ಮಾರಾಟ, ಬಿಲ್ಲಿಂಗ್, ಇಂಧನ ಸಮನ್ವಯ, ಬ್ಯಾಂಕಿಂಗ್, ಓಪನ್ ಆಕ್ಸೆಸ್ ಮತ್ತು ಹಣಕಾಸು ಇತ್ಯರ್ಥ ಪ್ರಕ್ರಿಯೆಗಳನ್ನು ಡಿಜಿಟಲ್ ಹಾಗೂ ಸ್ವಯಂಚಾಲಿತಗೊಳಿಸಲಾಗುತ್ತದೆ. ಇದರಿಂದ ಮಾನವ ಹಸ್ತಕ್ಷೇಪ ಕಡಿಮೆಯಾಗುವುದರ ಜೊತೆಗೆ, ವಹಿವಾಟಿನಲ್ಲಿ ಪಾರದರ್ಶಕತೆ, ನಿಖರತೆ, ಹೊಣೆಗಾರಿಕೆ ಹಾಗೂ ವೇಗ ಹೆಚ್ಚಲಿದೆ. **ಉತ್ಪಾದಕರಿಂದ ಖರೀದಿದಾರರವರೆಗೆ ಒಂದೇ ವ್ಯವಸ್ಥೆ:** ಮೂಲಕ ವಿದ್ಯುತ್ ಉತ್ಪಾದಕರು, ವಿದ್ಯುತ್ ಖರೀದಿದಾರರು, ಪ್ರಸರಣ ಸಂಸ್ಥೆಗಳು ಹಾಗೂ ವಿದ್ಯುತ್ ಸರಬರಾಜು ಕಂಪನಿಗಳು ಒಂದೇ ಡಿಜಿಟಲ್ ವ್ಯವಸ್ಥೆಯಡಿ ಅಗತ್ಯ ದತ್ತಾಂಶ ಮತ್ತು ವಹಿವಾಟುಗಳನ್ನು ನಿರ್ವಹಿಸಲು ಸಾಧ್ಯವಾಗಲಿದೆ. ಯಾರು ಎಷ್ಟು ವಿದ್ಯುತ್ ಉತ್ಪಾದಿಸಿದ್ದಾರೆ,

ಎಷ್ಟು ವಿದ್ಯುತ್ ಪ್ರಸರಣಗೊಂಡಿದೆ, ಎಷ್ಟು ಬಳಕೆಯಾಗಿದೆ ಹಾಗೂ ಅದಕ್ಕೆ ಸಂಬಂಧಿಸಿದ ಬಿಲ್ಲಿಂಗ್ ಮತ್ತು ಹಣಕಾಸು ಇತ್ಯರ್ಥದ ಸ್ಥಿತಿ ಏನು ಎಂಬ ಮಾಹಿತಿಯನ್ನು ಹೆಚ್ಚು ನಿಖರವಾಗಿ ನಿರ್ವಹಿಸಲು ವ್ಯವಸ್ಥೆ ನೆರವಾಗಲಿದೆ. **ರಿಯಲ್‌ಟೈಮ್ ಮಾಹಿತಿ, ವೇಗದ ಇತ್ಯರ್ಥ:** ಸುಧಾರಿತ ತಂತ್ರಜ್ಞಾನ ಮತ್ತು ಡ್ಯಾಶ್‌ಬೋರ್ಡ್ ವ್ಯವಸ್ಥೆಯ ಮೂಲಕ ವಿದ್ಯುತ್ ವಹಿವಾಟು, ಬಿಲ್ಲಿಂಗ್, ಇಂಧನ ಸಮನ್ವಯ ಹಾಗೂ ಹಣಕಾಸು ಇತ್ಯರ್ಥಕ್ಕೆ ಸಂಬಂಧಿಸಿದ ಮಾಹಿತಿಯನ್ನು ರಿಯಲ್‌ಟೈಮ್‌ನಲ್ಲಿ ವೀಕ್ಷಿಸಲು ಮತ್ತು ಮೇಲ್ವಿಚಾರಣೆ ಮಾಡಲು ಅವಕಾಶ ಕಲ್ಪಿಸಲಾಗುತ್ತದೆ.

ಇದರಿಂದ ಬಿಲ್ಲಿಂಗ್ ವ್ಯತ್ಯಾಸಗಳು, ಲೆಕ್ಕಪತ್ರ ಹೊಂದಾಣಿಕೆಯ ವಿಳಂಬ ಹಾಗೂ ದತ್ತಾಂಶದಲ್ಲಿನ ಅಸಂಗತತೆಗಳನ್ನು ಕಡಿಮೆ ಮಾಡಿ, ವಹಿವಾಟು ಮತ್ತು ಹಣಕಾಸು ಇತ್ಯರ್ಥವನ್ನು ಮತ್ತಷ್ಟು ತ್ವರಿತಗೊಳಿಸಲು ಸಾಧ್ಯವಾಗಲಿದೆ.

ವಿವಿಧ ಸಂಸ್ಥೆಗಳ ನಡುವಿನ ದತ್ತಾಂಶ ಹರಿವು ಮತ್ತು ವಹಿವಾಟು ಮತ್ತಷ್ಟು ಸುಗಮವಾಗಲಿದೆ. ಬಿಲ್ಲುಗಳು ಮತ್ತು ಸಂಬಂಧಿತ ದಾಖಲೆಗಳಿಗೆ ಡಿಜಿಟಲ್ ಸಹಿ ಹಾಗೂ ಡಿಜಿಟಲ್ ಅನುಮೋದನೆ ವ್ಯವಸ್ಥೆ ಅಳವಡಿಸುವ ಮೂಲಕ ಕಾಗದ ಆಧಾರಿತ ಹಾಗೂ ಹಸ್ತಚಾಲಿತ ಪ್ರಕ್ರಿಯೆಗಳನ್ನು ಕಡಿಮೆ ಮಾಡಲು ಉದ್ದೇಶಿಸಲಾಗಿದೆ.


ಉದಯವಾಹಿನಿ ಚಿತ್ರ

> ತಂತ್ರಜ್ಞಾನ ಅಳವಡಿಕೆ ಕೇವಲ ಡಿಜಿಟಲೀಕರಣಕ್ಕೆ ಸೀಮಿತವಾಗಬಾರದು. ಅದು ಇಲಾಖೆಯ ಕಾರ್ಯದಕ್ಷತೆಯನ್ನು ಹೆಚ್ಚಿಸಬೇಕು, ನಷ್ಟಗಳನ್ನು ಕಡಿಮೆ ಮಾಡಬೇಕು, ಹಣಕಾಸು ನಿರ್ವಹಣೆಯನ್ನು ಬಲಪಡಿಸಬೇಕು ಹಾಗೂ ಆದಾಯ ಸಂಗ್ರಹಣೆಯನ್ನು ಸುಧಾರಿಸಬೇಕು ಎಂದು ತಿಳಿಸಿದ್ದಾರೆ. -ಸಚಿವ ಕೆ.ಜೆ. ಜಾರ್ಜ್

ಲೆಕ್ಕಾಚಾರದ ಅವಲಂಬನೆ

ಮೀಟರ್‌ಗಳಿಂದ ನೇರವಾಗಿ ದತ್ತಾಂಶ ಪಡೆಯುವ, 15 ನಿಮಿಷಗಳ ಬ್ಲಾಕ್ ಮಟ್ಟದ ದತ್ತಾಂಶ ಹಾಗೂ ಇಂಟರ್‌ಫೇಸ್ ಪಾಯಿಂಟ್ ಮಾಹಿತಿಯನ್ನು ವ್ಯವಸ್ಥೆಯೊಂದಿಗೆ ಜೋಡಿಸುವ ಮೂಲಕ ಹಸ್ತಚಾಲಿತ ದತ್ತಾಂಶ ನಮೂದು ಮತ್ತು ಲೆಕ್ಕಾಚಾರದ ಅವಲಂಬನೆಯನ್ನು ಕಡಿಮೆ ಮಾಡಲಾಗುತ್ತದೆ

ಗುಂಡ್ಲುಪೇಟೆಯಲ್ಲಿ ಕರವೇಯಿಂದ ಕನ್ನಡ ರಾಜ್ಯೋತ್ಸವ ಸಂಭ್ರಮ

• **ಉದಯವಾಹಿನಿ, ಗುಂಡ್ಲುಪೇಟೆ**

ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಪಟ್ಟಣದ ಹಳೇ ಐಬಿ ಎದುರಿನ ಶ್ರೀ ಭುವನೇಶ್ವರಿ ವೃತ್ತದಲ್ಲಿ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಕನ್ನಡ ಧ್ವಜಾರೋಹಣ ಹಾಗೂ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಗೆ ಗೌರವ ಸಮರ್ಪಿಸಲಾಯಿತು.

ಕರವೇ ಜಿಲ್ಲಾ ಉಪಾಧ್ಯಕ್ಷ ರಾಜೇಂದ್ರ ವಿ. ನಾಯಕ್, ತಾಲ್ಲೂಕ ಅಧ್ಯಕ್ಷ ಜಿ.ಡಿ. ರಮೇಶ್ ನಾಯಕ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ನಾಗರಾಜು, ಯುವ ಘಟಕದ ಅಧ್ಯಕ್ಷ ಮನೀಶ್ ಹಾಗೂ ಹಂಗಳ ಹೋಬಳಿ ಅಧ್ಯಕ್ಷ ಚೆನ್ನನಾಯಕ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಿತು. ಕನ್ನಡ ಭಾಷೆಯ ಉಳಿವು ಮತ್ತು ಬೆಳವಣಿಗೆಗೆ ಪ್ರತಿಯೊಬ್ಬ ಕನ್ನಡಿಗರೂ ಕೈಜೋಡಿಸಬೇಕು ಎಂದು ಈ ಸಂದರ್ಭದಲ್ಲಿ ಕರೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಹರೀಶ್, ಮೂಕಳ್ಳಿ ಕಾಲೋನಿಯ ಯೋಗೇಶ್, ಮಹದೇವ್, ಮಹೇಶ್, ಕೋಡಳ್ಳಿ ಸುರೇಶ್, ಜವರಶೆಟ್ಟಿ, ಗುರು, ರಾಮು, ಸುಂದರ್ ಸೇರಿದಂತೆ ಕರವೇ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

ಅಪಾಯಕಾರಿ ಸ್ಥಿತಿಯಲ್ಲಿದ್ದ ವಿದ್ಯುತ್ ಕಂಬ, ತಂತಿ ತೆರವು

• **ಉದಯವಾಹಿನಿ, ವೇಮಗಲ್**

ಪಟ್ಟಣದ ಚಿಕ್ಕಬಳ್ಳಾಪುರ ರಸ್ತೆಯಲ್ಲಿ ರಸ್ತೆ ವಿಸ್ತರಣೆ ಕಾಮಗಾರಿ ವೇಳೆ ಮರ ಬಿದ್ದು ಮುರಿದು ಅಪಾಯಕಾರಿ ಸ್ಥಿತಿಯಲ್ಲಿದ್ದ ವಿದ್ಯುತ್ ಕಂಬ ಹಾಗೂ ತಂತಿಯನ್ನು ಶನಿವಾರ ಬೆಸ್ಕಾಂ ಸಿಬ್ಬಂದಿ ತೆರವುಗೊಳಿಸಿದ್ದಾರೆ.

ರಸ್ತೆ ಬದಿಯಲ್ಲಿ ನೇತಾಡುತ್ತಿದ್ದ ವಿದ್ಯುತ್ ಕಂಬ ಹಾಗೂ ತಂತಿಗಳನ್ನು ತೆರವುಗೊಳಿಸಿ.

ಅಲ್ಲಿ ಹೊಸ ಕಂಬಗಳನ್ನು ಅಳವಡಿಸಿ ವಿದ್ಯುತ್ ಮಾರ್ಗ ಸರಿಪಡಿಸಿದರು. ರಸ್ತೆ ವಿಸ್ತರಣೆ ಕಾಮಗಾರಿ ವೇಳೆಮರ ಬಿದ್ದು ಕಂಬಗಳು ಮುರಿದುಬಿದ್ದು, ತಂತಿಗಳು ಮಳಿಗೆಗಳ ಮುಂಭಾಗದಲ್ಲೇ ನೇತಾಡುತ್ತಿದ್ದವು.


ಉದಯವಾಹಿನಿ ಚಿತ್ರ

ಕಳೆದ ಮೂರು ದಿನಗಳಿಂದ ಕಂಬ ತೆರವುಗೊಳಿಸದ ಕಾರಣ ವಿದ್ಯುತ್ ಸಂಪರ್ಕ ಕಡಿತಗೊಂಡು ಬೀದಿ ದೀಪಗಳು ಉರಿಯದೆ ಮುಖ್ಯ ರಸ್ತೆಯಲ್ಲಿ ಕತ್ತಲು ಆವರಿಸಿತ್ತು. ಈ ಬಗ್ಗೆ 'ಅಪಾಯಕಾರಿ ಸ್ಥಿತಿಯಲ್ಲಿ ವಿದ್ಯುತ್ ಕಂಬ, ತಂತಿ' ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು. ವರದಿ ಬೆನ್ನಲ್ಲೇ ಎಚ್ಚೆತ್ತ ಬೆಸ್ಕಾಂ ಸಿಬ್ಬಂದಿ ಶನಿವಾರ ಬೆಳಿಗ್ಗೆಯೇ ಕಾರ್ಯಾಚರಣೆ ನಡೆಸಿದರು. ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಉದಯ ವಾಹಿನಿ

ಪ್ರಾದೇಶಿಕ

ಸೋಮವಾರ
02 ನವೆಂಬರ್ 2026

ಮಿನಿ ನ್ಯೂಸ್


ಜನರ ಸಮಸ್ಯೆ ಬಗೆಹರಿಸುವುದೇ ಆದ್ಯತೆ: ಬಾಲಕೃಷ್ಣ ಭರವಸೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಮಾಗಡಿ**

ಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ಶನಿವಾರ ನಡೆದ 'ಪ್ರಜಾಸೇವೆ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಪೌರಾಡಳಿತ ಸಚಿವ ಎಚ್.ಸಿ.ಬಾಲಕೃಷ್ಣ, ಸಾರ್ವಜನಿಕರ ಅರ್ಜಿಗಳನ್ನು ಸ್ವೀಕರಿಸಿ ಸಮಸ್ಯೆ ಬಗೆಹರಿಸುವುದೇ ಈ ಕಾರ್ಯಕ್ರಮದ ಉದ್ದೇಶ ಎಂದು ಭರವಸೆ ನೀಡಿದರು. 'ಮುಖ್ಯಮಂತ್ರಿ ಆದೇಶದಂತೆ ಉಸ್ತುವಾರಿ ಸಚಿವರು ತಮ್ಮ ಜಿಲ್ಲೆಗಳಲ್ಲಿ ಜನರ ಮನೆ ಬಾಗಿಲಿಗೆ ಸರ್ಕಾರಿ ಸೇವೆ ತಲುಪಿಸಲು ಈ ಕಾರ್ಯಕ್ರಮ ಆಯೋಜಿಸುತ್ತಿದ್ದಾರೆ. ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ ಎರಡು ತಿಂಗಳೊಳಗೆ ಇದೇ ವೇದಿಕೆಯಲ್ಲಿ ಪರಿಹಾರ ನೀಡಲಾಗುವುದು. ಹೆಚ್ಚಿನ ಅರ್ಜಿಗಳು ಕಂದಾಯ ಇಲಾಖೆಗೆ ಸಂಬಂಧಿಸಿವೆ. ಅಧಿಕಾರಿಗಳಿಗೆ ತ್ವರಿತ ಪರಿಹಾರಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಕುದೂರಿನ ಕಾರ್ಯಕ್ರಮದ ಅರ್ಜಿ ವಿಲೇವಾರಿ ಬಗ್ಗೆ ಮುಂದಿನ ವಾರ ಸಭೆ ನಡೆಸಲಾಗುವುದು' ಎಂದರು. ಗೃಹ ಸಚಿವ ಪ್ರಿಯಾಂಕ್ ಖರ್ಗೆ ಕಾರ್ಯವೈಖರಿ ಕುರಿತು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಟೀಕೆಗೆ ಪ್ರತಿಕ್ರಿಯಿಸಿ, 'ಕುಮಾರಸ್ವಾಮಿ ಹತಾಶರಾಗಿ ಎಲ್ಲರ ಮೇಲೂ ಆರೋಪ ಮಾಡುತ್ತಿದ್ದಾರೆ. ಪ್ರಿಯಾಂಕ್ ಖರ್ಗೆ ಕಾನೂನುಬದ್ಧವಾಗಿ ಯಶಸ್ವಿಯಾಗಿ ಕೆಲಸ ಮಾಡುತ್ತಿದ್ದಾರೆ.

ರಾಜ್ಯೋತ್ಸವ ಸಿದ್ಧತೆ; ಒತ್ತುವರಿ ತೆರವು ಕಾರ್ಯಾಚರಣೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಕೋಲಾರ**

ಗಡಿನಾಡು ಜಿಲ್ಲೆಯಲ್ಲಿ ಕನ್ನಡದ ತೇರು ಎಳೆಯಲು ನಗರದಲ್ಲಿ ಸಿದ್ಧತೆ ನಡೆದಿದ್ದು, ಎಲ್ಲೆಡೆಯೂ ಕನ್ನಡ ಧ್ವಜಗಳ ಅಲಂಕಾರ ಮಾಡಲಾಗಿದೆ.

ನಗರದ ಗಾಂಧಿವನದಲ್ಲಿ ಭಾನುವಾರ ಬೆಳಿಗ್ಗೆ 9 ಗಂಟೆಗೆ ಜಿಲ್ಲಾಡಳಿತ ಹಮ್ಮಿಕೊಂಡಿರುವ ಕರ್ನಾಟಕ ರಾಜ್ಯೋತ್ಸವಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ ಧ್ವಜಾರೋಹಣ ಮೂಲಕ ಚಾಲನೆ ನೀಡಲಿದ್ದಾರೆ. ಭುವನೇಶ್ವರಿ ತಾಯಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ವೇದಿಕೆ ಕಾರ್ಯಕ್ರಮದ ನಂತರ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಶಾಸಕ ಕೊತ್ತೂರು ಮಂಜುನಾಥ್ ಅಧ್ಯಕ್ಷತೆ ವಹಿಸುವರು. ಮೆರವಣಿಗೆ ಹಿನ್ನೆಲೆಯಲ್ಲಿ ಶ್ರೀಭುವನೇಶ್ವರಿ ಕನ್ನಡ ಸಂಘದಿಂದ ನಗರದ ಮುಖ್ಯ ರಸ್ತೆಗಳ ಕಂಬಗಳಿಗೆ ಹಾಗೂ ವೃತ್ತಗಳಲ್ಲಿ ಕನ್ನಡ ಧ್ವಜ ಬಣ್ಣದ ಬಟ್ಟೆಗಳನ್ನು ಅಲಂಕಾರ ಮಾಡಲಾಗಿದೆ.ಜಿಲ್ಲಾಧಿಕಾರಿ ಎಂ.ಆರ್.ರವಿಕುಮಾರ್ ಶನಿವಾರ ರಾಜ್ಯೋತ್ಸವ ಕಾರ್ಯಕ್ರಮದ ಪೂರ್ವಸಿದ್ಧತೆಯನ್ನು ಪರಿಶೀಲಿಸಿದರು. ದಿಢೀರ್ ಕಾರ್ಯಾಚರಣೆ ನಡೆಸಿ ಪಾದಚಾರಿ ಮಾರ್ಗದಲ್ಲಿ ಅಂಗಡಿ, ಮಳಿಗೆಗಳು ಮಾಡಿಕೊಂಡಿದ್ದ ಒತ್ತುವರಿಯನ್ನು ನಗರಸಭೆ ಸಿಬ್ಬಂದಿಯಿಂದ ತೆರವುಗೊಳಿಸುವ ಮೂಲಕ ಬಿಸಿ ಮುಟ್ಟಿಸಿದರು.ಗಾಂಧಿವನದಿಂದ ಹೊರಡುವ ಭುವನೇಶ್ವರಿ ತಾಯಿಯ ಮೆರವಣಿಗೆ ಮಾರ್ಗ ಪರಿಶೀಲಿಸುತ್ತಾ ಎಂ.ಜಿ.ಯಲ್ಲಿ ಹೆಜ್ಜೆ ಹಾಕಿದರು.

ಜನರ ಮನೆ ಬಾಗಿಲಿಗೆ ಸರ್ಕಾರಿ ಸೇವೆ ತಲುಪಿಸಲು ಪ್ರಜಾಸೇವಾ ಕಾರ್ಯಕ್ರಮ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಕನಕಪುರ**

'ರೈತರ ಮನೆ ಬಾಗಿಲಿಗೆ ಸರ್ಕಾರಿ ಸೇವೆ ತಲುಪಿಸಲು ಸರ್ಕಾರದಿಂದ ಪ್ರಜಾಸೇವಾ ಕಾರ್ಯಕ್ರಮ ನಡೆಸಲಾಗುತ್ತಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು' ಉಪ ವಿಭಾಗಾಧಿಕಾರಿ ಮಿಥುನ್ ಚೆಕ್ಕಿ ತಿಳಿಸಿದರು. ತಾಲ್ಲೂಕಿನ ಸಾತನೂರಿನಲ್ಲಿ ಶನಿವಾರ ನಡೆದ ಹೋಬಳಿ ಮಟ್ಟದ ಪ್ರಜಾಸೇವಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

'ಸಾರ್ವಜನಿಕರು ಸರ್ಕಾರಿ ಸೇವೆ ಪಡೆಯಲು ಅಥವಾ ಕುಂದುಕೊರತೆ, ಸಮಸ್ಯೆ ಪರಿಹರಿಸಿಕೊಳ್ಳಲು ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಲು ಸರ್ಕಾರದಿಂದ ಈ ಪ್ರಜಾಸೇವಾ ಕಾರ್ಯಕ್ರಮ ನಡೆಸಲಾಗುತ್ತಿದೆ' ಎಂದರು.

ತಹಶೀಲ್ದಾರ್ ಸಂಜಯ್, 'ಒಂದು ಮತ್ತು ಮೂರನೇ ಶನಿವಾರ ಜಿಲ್ಲಾಮಟ್ಟದ ಪ್ರಜಾಸೇವಾ ಕಾರ್ಯಕ್ರಮ ಶಾಸಕರ ಅಧ್ಯಕ್ಷತೆಯಲ್ಲಿ ನಡೆಯುತ್ತಿದೆ. ಎರಡು ಮತ್ತು ನಾಲ್ಕನೇ ಶನಿವಾರ ಹೋಬಳಿ ಮಟ್ಟದಲ್ಲಿ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ನಡೆಯುತ್ತಿದೆ' ಎಂದು ತಿಳಿಸಿದರು. 'ತಾಲ್ಲೂಕಿನ ಕೋಡಿಹಳ್ಳಿ ಮತ್ತು ಉಯ್ಯಂಬಳ್ಳಿ ಹೋಬಳಿಯಲ್ಲಿ ಈಗಾಗಲೇ ಪ್ರಜಾಸೇವಾ ಕಾರ್ಯಕ್ರಮ ನಡೆಸಲಾಗಿದೆ. ಈಗ ಸಾತನೂರಿನಲ್ಲಿ ನಡೆಸಲಾಗಿದೆ. ಸಾಮಾಜಿಕ ಭದ್ರತೆಯ 4500 ಅರ್ಜಿ ವಿಲೇವಾರಿ ಮಾಡಿದ್ದು ಪಿಂಚಣಿಯನ್ನು ಮರು ಚಾಲನೆ ಮಾಡಲಾಗಿದೆ' ಎಂದರು.ಕಾರ್ಯಕ್ರಮದಲ್ಲಿ ವಿವಿಧ ಇಲಾಖೆ ತಾಲ್ಲೂಕು ಮಟ್ಟದ ಅಧಿಕಾರಿಗಳು, ನೌಕರರು, ಸಿಬ್ಬಂದಿ ಪಾಲ್ಗೊಂಡಿದ್ದರು.ಮದ್ಯಪಾನದಿಂದ ಸಂಭವಿಸುವ ಅನಾಹುತಗಳು ಹಾಗೂ ಕುಟುಂಬ ವ್ಯವಸ್ಥೆಯ ಮೇಲೆ ಬೀರುವ ಗಂಭೀರ ಪರಿಣಾಮಗಳು ಹಾಗೂ ಮಕ್ಕಳ ಶೈಕ್ಷಣಿಕ ಜೀವನದ ಮೇಲೆ ಬೀರುವಂತಹ ಪರಿಣಾಮಗಳ ಕುರಿತು ಪರಿವರ್ತನಾ ಕಲಾ ಸಂಸ್ಥೆಯ ವತಿಯಿಂದ ನಾಟಕದ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲಾಯಿತು.

ಕನ್ನಡ ಕಡೆಗಣನೆ, ನಾಮಫಲಕಗಳಲ್ಲಿ ಇಂಗ್ಲಿಷ್ ಅಕ್ಷರಗಳೇ ರಾಚುತ್ತಿವೆ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಮುಳಬಾಗಿಲು**

ತಾಲ್ಲೂಕಿನ ಗಡಿ ಹಾಗೂ ಪ್ರಮುಖ ವ್ಯಾಪಾರ, ಸಂಪರ್ಕ ಕೇಂದ್ರಗಳಲ್ಲಿ ಕನ್ನಡ ಲಿಪಿ ಮಾಯವಾಗಿದ್ದು, ಇಂಗ್ಲಿಷ್ ಅಕ್ಷರಗಳೇ ಕಣ್ಣಿಗೆ ರಾಚುತ್ತಿವೆ.

ಬೆಂಗಳೂರಿನ ಕೆ.ಆರ್.ಪುರಂನಿಂದ ನೆರೆಯ ಆಂಧ್ರಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಕೆಲವು ಬಸ್ ನಿಲ್ದಾಣಗಳನ್ನು ಸೂಚಿಸುವ, ಆರ್.ಟಿ.ಒ ಕಚೇರಿಯ ನಾಮ ಫಲಕಗಳು, ಇಂಧನ ಕೇಂದ್ರಗಳು, ಪೆಟ್ರೋಲ್ ಬಂಕ್, ಹೆದ್ದಾರಿ ಸೂಚನಾ ಫಲಕಗಳಲ್ಲಿ ಕೇವಲ ಇಂಗ್ಲೀಷ್‌ನಲ್ಲಿ ಬರೆಯಲಾಗಿದ್ದು ಕನ್ನಡವನ್ನು ಕಡೆಗಣಿಸಲಾಗಿದೆ. ರಾಷ್ಟ್ರೀಕೃತ ಬ್ಯಾಂಕ್, ಅಂಚೆ ಕಚೇರಿ ಮತ್ತಿತರ ಹೆಸರುಗಳನ್ನು ಇಂಗ್ಲಿಷ್‌ನಲ್ಲಿ ಬರೆದರೂ ಕನ್ನಡದಲ್ಲೂ ಬರೆಯಲಾಗಿರುತ್ತದೆ. ಆದರೆ ಹೆದ್ದಾರಿಯ ಉದ್ದಕ್ಕೂ ಇರುವ ಸೂಚನಾ ಫಲಕ ಹಾಗೂ ಕೆಲವು ವ್ಯಾಪಾರ ವಹಿವಾಟು ಕೇಂದ್ರಗಳ ಮೇಲೆ ಕೇವಲ ಇಂಗ್ಲಿಷ್ ಅಕ್ಷರಗಳಲ್ಲಿ ಮಾತ್ರ ಮಾಹಿತಿ ಬರೆಯಲಾಗಿದೆ.

ತಾಲ್ಲೂಕಿನ ಹೆದ್ದಾರಿಯಲ್ಲಿನ ಬಹುತೇಕ ಎಲ್ಲಾ ಪೆಟ್ರೋಲ್ ಬಂಕ್‌ಗಳ ಮೇಲೆ ಕೇವಲ ಇಂಗ್ಲಿಷ್ ಅಕ್ಷರಗಳು ಬಿಟ್ಟರೆ ಕನ್ನಡದ ಅಕ್ಷರಗಳೇ ಮಾಯವಾಗಿವೆ. ಹೆದ್ದಾರಿಯ ಕೆಲವೆಡೆ ಮಾತ್ರ ಕೆಲವು ಸಂಚಾರ ದೀಪಗಳಲ್ಲಿ ಕನ್ನಡದಲ್ಲಿ ಸಣ್ಣ ಅಕ್ಷರಗಳಲ್ಲಿ ಬರೆದಿದ್ದರೆ, ಉಳಿದಂತೆ ಬಹುತೇಕ ಕಡೆ ಕನ್ನಡ ಮಾಯವಾಗಿದೆ.

ತಾಲ್ಲೂಕಿನ ಪದ್ಮಘಟ್ಟ ಹಾಗೂ ತಾತಿಕಲ್ಲು ಗ್ರಾಮಗಳ ನಡುವಿನ ಆರ್‌ಟಿಒ ತನಿಖಾ ಠಾಣೆ ಇದೆ. ಆರ್‌ಟಿಒ ಗುರುತಿನ ನಾಮಫಲಕ ಮತ್ತಿತರರ ಎಲ್ಲಾ ಫಲಕಗಳು ಇಂಗ್ಲೀಷಿನಲ್ಲೇ ಇವೆ. ಈ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸಿದರೆ ಹೆದ್ದಾರಿಯಲ್ಲಿ ಹಲವು ರಾಜ್ಯಗಳ ವಾಹನ ಸವಾರರು ಸಂಚರಿಸುವ ಕಾರಣದಿಂದ ಇಂಗ್ಲೀಷ್ ನಾಮಫಲಕಗಳನ್ನು ಅಳವಡಿಸಲಾಗಿದೆ ಎಂದು ಸಮಜಾಯಿಷಿ ನೀಡುತ್ತಾರೆ.

ಮೇಕೆದಾಟು ಯೋಜನೆ ಬಗ್ಗೆ ಜಲಾಶಯ ನಿರ್ಮಾಣ ಯಾವಾಗ?

ಅರಣ್ಯ ಇಲಾಖೆಗೆ ಪರ್ಯಾಯ ಭೂಮಿಯನ್ನು ಒದಗಿಸುವ ಕುರಿತು ಅಧಿಕಾರಿಗಳು ಈಗಾಗಲೇ ಸಭೆಗಳನ್ನು ನಡೆಸಿದ್ದಾರೆ ಎಂದು ಅವರು ತಿಳಿಸಿದರು.

• **ಉದಯವಾಹಿನಿ, ಮಂಡ್ಯ**

1 ಜನರ ಹಿತಾಸಕ್ತಿಗಾಗಿ ನಾನು ಹೋರಾಡಿದ್ದೇನೆ

2 ಭೂಮಿ ಸೇರಿದಂತೆ ಪರ್ಯಾಯ ಜಮೀನನ್ನು

3 2,500 ಎಕರೆ ಭೂಮಿಯನ್ನು ಗುರುತಿಸಿದ್ದೇವೆ

ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರ ತಾಲೂಕಿನಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಲು ಉದ್ದೇಶಿಸಿರುವ 'ಮೇಕೆದಾಟು ಸಮತೋಲನ ಜಲಾಶಯ' ಯೋಜನೆಗಾಗಿ, ಅರಣ್ಯ ಭೂಮಿ ಸೇರಿದಂತೆ ಒಟ್ಟು 2,500 ಎಕರೆ ಜಮೀನನ್ನು ಪರ್ಯಾಯ ಭೂಮಿಯಾಗಿ ಗುರುತಿಸಲಾಗಿದೆ ಎಂದು ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಈ ಯೋಜನೆ ಜಾರಿಯಾದರೆ, ಕರ್ನಾಟಕ 66 ಟಿಎಂಸಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳಲು ಮತ್ತು ನೀರಿನ ಕೊರತೆಯಿರುವ ಕಠಿಣ ಸಮಯಗಳಲ್ಲಿ ನೀರನ್ನು ನಿಯಂತ್ರಿತವಾಗಿ ಬಿಡುಗಡೆ ಮಾಡಲು ಸಾಧ್ಯವಾಗುತ್ತದೆ. ಇದರಿಂದ ಮಂಡ್ಯ ಮತ್ತು ಕಾವೇರಿ ಜಲಾನಯನ ಪ್ರದೇಶದ ಇತರ ಭಾಗಗಳಲ್ಲಿರುವ ರೈತರಿಗೆ ಅನುಕೂಲವಾಗಲಿದೆ ಎಂದು ಅವರು ಹೇಳಿದರು.

ಮಂಡ್ಯದ ಜನರ ಹಿತಾಸಕ್ತಿಗಾಗಿ ನಾನು ನನ್ನ ಅಧಿಕಾರಾವಧಿಯಲ್ಲಿ ಹೋರಾಡಿದ್ದೇನೆ. ಸುಪ್ರೀಂ ಕೋರ್ಟ್‌ನಲ್ಲಿ ಪ್ರಮಾಣಪತ್ರ ಸಲ್ಲಿಸುವಂತೆ ನೋಡಿಕೊಂಡಿದ್ದೇನೆ, ಕಾನೂನು ಹೋರಾಟದಲ್ಲಿ ಗೆದ್ದಿದ್ದೇನೆ ಮತ್ತು ಮೇಕೆದಾಟು ಯೋಜನೆಯನ್ನು ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್‌ನಿಂದ ಅನುಮತಿಯನ್ನೂ ಪಡೆದಿದ್ದೇನೆ, ಎಂದು ಮಂಡ್ಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಶಿವಕುಮಾರ್ ಹೇಳಿದರು. ಈ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡುವ ಸಮಿತಿಯ ಅಧ್ಯಕ್ಷರನ್ನಾಗಿ


ಉದಯವಾಹಿನಿ ಚಿತ್ರ

ಮಂಡ್ಯ ಜಿಲ್ಲಾಧಿಕಾರಿಯನ್ನು ನೇಮಿಸಲಾಗಿದೆ ಮತ್ತು ಅರಣ್ಯ ಇಲಾಖೆಗೆ ಪರ್ಯಾಯ ಭೂಮಿಯನ್ನು ಒದಗಿಸುವ ಕುರಿತು ಅಧಿಕಾರಿಗಳು ಈಗಾಗಲೇ ಸಭೆಗಳನ್ನು ನಡೆಸಿದ್ದಾರೆ ಎಂದು ಅವರು ತಿಳಿಸಿದರು.ಮೇಕೆದಾಟು ಯೋಜನೆಯು ಕರ್ನಾಟಕ ಸರ್ಕಾರ ಪ್ರಸ್ತಾಪಿಸಿರುವ ಬಹುಪಯೋಗಿ (ಕುಡಿಯುವ ನೀರು ಮತ್ತು ವಿದ್ಯುತ್ ಉತ್ಪಾದನೆ) ಯೋಜನೆಯಾಗಿದೆ. ರಾಮನಗರ ಜಿಲ್ಲೆಯ (ಈಗ ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣಗೊಂಡಿದೆ) ಕನಕಪುರದ ಬಳಿ ಸಮತೋಲನ ಜಲಾಶಯವನ್ನು ನಿರ್ಮಿಸುವುದು ಇದರ ಉದ್ದೇಶವಾಗಿದೆ. ಯೋಜನೆಯ ಮಹತ್ವವನ್ನು ವಿವರಿಸಿದ ಶಿವಕುಮಾರ್, ಕರ್ನಾಟಕ ನದಿಯ ಕೆಳಭಾಗಕ್ಕೆ 177 ಟಿಎಂಸಿ ನೀರನ್ನು ಹರಿಸಬೇಕಾದ ಅನಿವಾರ್ಯತೆಯಿದೆ. ಹೀಗಾಗಿ, ಪ್ರಸ್ತಾಪಿತ ಜಲಾಶಯ ನೀರು ಬಿಡುಗಡೆಯನ್ನು ನಿಯಂತ್ರಿಸಲು ಸಹಕಾರಿಯಾಗಲಿದೆ ಎಂದು ಹೇಳಿದರು. ಪ್ರಸ್ತುತ, ಎಷ್ಟು ಕ್ಯೂಸೆಕ್ ನೀರನ್ನು ಯಾವಾಗ ಬಿಡುಗಡೆ ಮಾಡಬೇಕು ಎಂಬ ಬಗ್ಗೆ ನಮಗೆ ಆಗಾಗ್ಗೆ ನಿರ್ದೇಶನಗಳು ಬರುತ್ತಿರುತ್ತವೆ. ಇಂತಹ ಸನ್ನಿವೇಶಗಳನ್ನು ನಿಭಾಯಿಸಲು ಈ ಯೋಜನೆಯು ನಮಗೆ ಸಹಕಾರಿಯಾಗಲಿದೆ, ಎಂದು ಅವರು ಹೇಳಿದರು. ಅಲ್ಲದೆ, ಇದು ಮಂಡ್ಯದ ರೈತರಿಗೆ ಹಾಗೂ ಹೇಮಾವತಿ ಮತ್ತು ಕಾವೇರಿ ಜಲಾನಯನ ಪ್ರದೇಶದ ಇತರ ಭಾಗಗಳಲ್ಲಿ ನೀರಾವರಿಯನ್ನು ಅವಲಂಬಿಸಿರುವವರಿಗೆ ಪ್ರಯೋಜನಕಾರಿಯಾಗಲಿದೆ ಎಂದು ಅವರು ತಿಳಿಸಿದರು.ರಾಜ್ಯ ಸರ್ಕಾರ ಅರಣ್ಯ ಅನುಮತಿ ಪೋರ್ಟಲ್‌ನಲ್ಲಿ ಪರ್ಯಾಯ ಭೂಮಿಗೆ ಸಂಬಂಧಿಸಿದ ವಿವರಗಳನ್ನು ಅಪ್‌ಲೋಡ್ ಮಾಡಲಿದ್ದು, ಆ ನಂತರ ಅಗತ್ಯ ಅನುಮತಿಗಳು ದೊರೆಯುವ ನಿರೀಕ್ಷೆಯಿದೆ ಎಂದು ಅವರು ಹೇಳಿದರು. ಈ ಯೋಜನೆಗಾಗಿ ರೈತರ ಸುಮಾರು 500 ಎಕರೆ ಭೂಮಿಯನ್ನು ಮಾತ್ರ ಸ್ವಾಧೀನಪಡಿಸಿಕೊಳ್ಳಲಾಗುವುದು ಎಂದು ಉಲ್ಲೇಖಿಸಿದ ಶಿವಕುಮಾರ್, ಭೂ ಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು ಎಂದು ಹೇಳಿದರು.

ಯೋಜನೆಗೆ ಅಗತ್ಯವಿರುವ ಭೂಮಿಯ ಬದಲಾಗಿ, ಅರಣ್ಯ ಭೂಮಿ ಸೇರಿದಂತೆ ಪರ್ಯಾಯ ಜಮೀನನ್ನು ಒದಗಿಸಲು ನಾವು ಒಮ್ಮತದಿಂದ ನಿರ್ಧರಿಸಿದ್ದೇವೆ. ಇಲ್ಲಿಯವರೆಗೆ 2,500 ಎಕರೆ ಭೂಮಿಯನ್ನು ಗುರುತಿಸಿದ್ದೇವೆ ಮತ್ತು ಉಳಿದ ಭೂಮಿಯನ್ನು ಗುರುತಿಸುವ ಪ್ರಕ್ರಿಯೆ ನಡೆಯುತ್ತಿದೆ, ಎಂದು ಅವರು ಹೇಳಿದರು. – ಡಿ.ಕೆ. ಶಿವಕುಮಾರ್

ವಿದ್ಯುತ್ ಉತ್ಪಾದನೆಯೂ ಆಗಲಿ

ಅಧಿಕಾರಿಗಳ ಪ್ರಕಾರ, ಈ ಯೋಜನೆ ಪೂರ್ಣಗೊಂಡರೆ ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ 4.75 ಟಿಎಂಸಿ ಅಡಿ ಕುಡಿಯುವ ನೀರನ್ನು ಒದಗಿಸಲು ಸಾಧ್ಯವಾಗುತ್ತದೆ. ಜೊತೆಗೆ, ಇದರಿಂದ 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯೂ ಆಗಲಿದೆ.

ನಿಮ್ಮ ಕೈಯಲ್ಲಿ ಆಗಲ್ಲ ಬಿಡಿ, ನೀವು ಏನು ಅಂತಾ ನನಗೆ ಗೊತ್ತು

• **ಉದಯವಾಹಿನಿ, ಮಂಡ್ಯ**


ಉದಯವಾಹಿನಿ ಚಿತ್ರ

'ಕುಣಿಯಲಾಗದವನಿಗೆ ನೆಲ ಡೊಂಕು' ಎಂಬಂತಾಗಿದೆ ಎಚ್.ಡಿ. ಕುಮಾರಸ್ವಾಮಿ ಅವರ ಪಾಡು. ಆರೋಪ, ಟೀಕೆ ಮಾಡುವುದನ್ನು ಬಿಟ್ಟು ಮೊದಲು ನಮ್ಮ ಜಿಲ್ಲೆಯ ಜನರ ಋಣ ತೀರಿಸುವ ಕೆಲಸ ಮಾಡಿ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ವಾಗ್ದಾಳಿ ನಡೆಸಿದರು.

ನಗರದ ಮಂಡ್ಯ ವಿಶ್ವವಿದ್ಯಾಲಯ ಆವರಣದಲ್ಲಿ 1,793 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಇಲ್ಲಿನ ಜನ ಎರಡೂವರೆ ಲಕ್ಷ ಮತಗಳ ಅಂತರದಿಂದ ನಿಮಗೆ ಅಧಿಕಾರ ನೀಡಿದ್ದಾರೆ. ಆದರೆ ನೀವು ಜಿಲ್ಲೆಗೆ ನೀಡಿದ ಕೊಡುಗೆಯೇನು? ಸಿಎಸ್‌ಆರ್ ನಿಧಿಯಲ್ಲಿ ಅಲ್ಲೊಂದು ಇಲ್ಲೊಂದು ಬಸ್ ನಿಲ್ದಾಣ ನಿರ್ಮಿಸಿದರೆ ಅದು ಅಭಿವೃದ್ಧಿ ಎನಿಸಿಕೊಳ್ಳುವುದಿಲ್ಲ. ನೀವು ಕೈಗಾರಿಕೆ ಸ್ಥಾಪಿಸಲು ಕೇಳಿರುವ 100 ಎಕರೆ ಜಮೀನು ನೀಡಿದ್ದೇವೆ. ಅಗತ್ಯ ಬಿದ್ದರೆ ಇನ್ನೂ 500 ಎಕರೆ ಕೊಡಲು ಸಿದ್ಧರಿದ್ದೇವೆ. ಮೊದಲು ಕೆಲಸ ಮಾಡಿ ತೋರಿಸಿ' ಎಂದು ಕುಟುಕಿದರು.

ನಿಮ್ಮ ಕೈಯಲ್ಲಿ ಕಾರ್ಖಾನೆ ನಿರ್ಮಿಸಲು ಆಗುವುದಿಲ್ಲ ಎಂಬುದು ನನಗೆ ಚೆನ್ನಾಗಿ ಗೊತ್ತು, ಏಕೆಂದರೆ ನಾನು ನಿಮ್ಮ ಜತೆಯಲ್ಲೇ ಇದ್ದವನು. ಸರ್ಕಾರಿ ಸ್ವಾಮ್ಯದ ಏಕೈಕ ಸಕ್ಕರೆ ಕಾರ್ಖಾನೆ ಮೈಷುಗರ್ ನಮ್ಮ ಜಿಲ್ಲೆಯಲ್ಲಿದೆ. ಇಲ್ಲಿ ಡಿಸ್ಟಿಲರಿ ಘಟಕ ಪ್ರಾರಂಭಿಸಲು ಸಾಕಷ್ಟು ಶ್ರಮಿಸುತ್ತಿದ್ದೇನೆ ಎಂದರು.

ಗಡಿಭಾಗದಲ್ಲಿ ಕನ್ನಡದ ಡಿಂಡಿಮ: ಎತ್ತುಗಟ್ಟಿ ಬೆಟ್ಟದ ಮೇಲೆ ರಾಜ್ಯೋತ್ಸವ ಸಂಭ್ರಮ

• **ಉದಯವಾಹಿನಿ, ಗುಂಡ್ಲುಪೇಟೆ**

ಗಡಿಭಾಗದಲ್ಲಿ ಕನ್ನಡದ ಕಂಪು ಪಸರಿಸುವ ಮೂಲಕ ಕನ್ನಡಿಗರ ಅಭಿಮಾನವನ್ನು ಎತ್ತಿಹಿಡಿಯುವ ಉದ್ದೇಶದಿಂದ ಎತ್ತುಗಟ್ಟಿ ಬೆಟ್ಟದ ಮೇಲೆ 71 ನೇ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಗಡಿನಾಡ ರಕ್ಷಣಾ ಸಮಿತಿ ಪದಾಧಿಕಾರಿಗಳು ಸಿಹಿ ಹಂಚಿ ಕನ್ನಡ ರಾಜ್ಯೋತ್ಸವದ ಸಂಭ್ರಮವನ್ನು ಹಂಚಿಕೊಂಡರು. ಗಡಿನಾಡ ರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಮುನೀರ್ ಪಾಷಾ ಹಾಗೂ ಇಲಿಯಾಸ್ ಕುಮಾರ್ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ತಮಿಳುನಾಡಿಗೆ ಸೇರಿದ ಬಯ್ಯನಪುರ, ಪಣಕಳ್ಳಿ, ಚಿಮಟಹಳ್ಳಿ, ಪಾಳ್ಯ ಸೇರಿದಂತೆ ಹಲವು ಗ್ರಾಮಗಳ ಕನ್ನಡಿಗರು ಭಾಗವಹಿಸಿದ್ದರು. ಗಡಿಭಾಗದ ಕನ್ನಡಿಗರೊಂದಿಗೆ ಒಗ್ಗೂಡಿ ಕನ್ನಡ ರಾಜ್ಯೋತ್ಸವ ಆಚರಿಸುವ ಮೂಲಕ ಕನ್ನಡ ಭಾಷೆ, ನಾಡು-ನುಡಿಯ ಮೇಲಿನ ಅಭಿಮಾನವನ್ನು ವ್ಯಕ್ತಪಡಿಸಿದರು. ತಮಿಳುನಾಡಿನ ವ್ಯಾಪ್ತಿಗೆ ಸೇರಿದ್ದರೂ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಮರೆಯದೆ ಉಳಿಸಿಕೊಂಡಿರುವ ಗಡಿಭಾಗದ ಕನ್ನಡಿಗರಿಗೆ ಸಂಘಟನೆಯ ಪದಾಧಿಕಾರಿಗಳು ಕೃತಜ್ಞತೆ


ಉದಯವಾಹಿನಿ ಚಿತ್ರ

ಸಲ್ಲಿಸಿದರು. ಬಸವೇಶ್ವರ ದೇಗುಲದ ಮುಂಭಾಗ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಗೌರವ ಸಮರ್ಪಿಸಲಾಯಿತು. ಕನ್ನಡದ ಉಳಿವು ಮತ್ತು ಬೆಳವಣಿಗೆಗೆ ಗಡಿನಾಡ ಕನ್ನಡಿಗರ ಕೊಡುಗೆ ಅಪಾರ ಎಂದು ಈ ಸಂದರ್ಭದಲ್ಲಿ ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಸಂಘಟನೆಯ ರಾಜ್ಯ ಗೌರವ ಉಪಾಧ್ಯಕ್ಷ ಅಲೀಮ್ ಪಾಷಾ, ತಾಲೂಕು ಗೌರವಾಧ್ಯಕ್ಷ ರಹಮತ್ ಉಲ್ಲಾಖಾನ್, ನೃತ್ಯ ಸಂಯೋಜಕ ಸದ್ದಾಂ ಅಹಮದ್, ಪ್ರೇಮ್ ಕುಮಾರ್, ಮನು, ಚನ್ನಬಸವ, ಕಾರ್ತಿಕ್, ರಾಜೇಶ್, ಸುನಿಲ್, ಬೀರೇಶ್ ಸೇರಿದಂತೆ ಹಲವು ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಅರ್ಹ ಎಲ್ಲಾ ಆಸ್ತಿ ಮಾಲೀಕರಿಗೂ ಇ-ಖಾತಾ ಸೌಲಭ್ಯ

• **ಉದಯವಾಹಿನಿ, ಮೈಸೂರು**

ಮಹಾನಗರ ಪಾಲಿಕೆ ವತಿಯಿಂದ ಆಯೋಜಿಸಿದ್ದ ಪ್ರಜಾಸೇವಾ ವಿಶೇಷ ಇ-ಖಾತಾ ವಿತರಣಾ ಆಂದೋಲನಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆತಿದ್ದು, ಅರ್ಹ ಎಲ್ಲ ಆಸ್ತಿ ಮಾಲೀಕರಿಗೂ ಇ-ಖಾತಾ ಸೌಲಭ್ಯ ತಲುಪಿಸುವುದು ಸರ್ಕಾರದ ಉದ್ದೇಶವಾಗಿದೆ ಎಂದು ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಮೈಸೂರು ಮಹಾನಗರ ಪಾಲಿಕೆ ಆವರಣದಲ್ಲಿ ಆಂದೋಲನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಆಸ್ತಿ ದಾಖಲೆಗಳನ್ನು ಸುಲಭವಾಗಿ ಒದಗಿಸುವುದು ಹಾಗೂ ಇ-ಖಾತಾ ಪ್ರಕ್ರಿಯೆಯನ್ನು ಸರಳಗೊಳಿಸುವ ನಿಟ್ಟಿನಲ್ಲಿ ಇಂತಹ ಆಂದೋಲನಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದರು.

ಪಾಲಿಕೆ ವ್ಯಾಪ್ತಿಯಲ್ಲಿ 2.10 ಲಕ್ಷಕ್ಕೂ ಅಧಿಕ ಆಸ್ತಿಗಳಿದ್ದು, ಈ ಪೈಕಿ 78,700ಕ್ಕೂ ಹೆಚ್ಚು ಆಸ್ತಿಗಳಿಗೆ ಇ-ಖಾತಾ ವಿತರಿಸಲಾಗಿದೆ. ಉಳಿದ ಅರ್ಹ ಆಸ್ತಿಗಳಿಗೂ ತ್ವರಿತವಾಗಿ ವಿತರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.ಅ.28ರಂದು ನಡೆದ ಆಂದೋಲನದಲ್ಲಿ 730 ಅರ್ಜಿಗಳು ಸಲ್ಲಿಕೆಯಾಗಿದ್ದು, 590 ಅರ್ಹ ಫಲಾನುಭವಿಗಳಿಗೆ ಇ-ಖಾತಾ ನೀಡಲಾಗಿದೆ. ದಾಖಲೆ ಕೊರತೆಯಿಂದ ಯಾರೂ ವಂಚಿತರಾಗಬಾರದು ಎಂಬ ಉದ್ದೇಶದಿಂದ ನ.5, 6 ಮತ್ತು 7ರಂದು ಮತ್ತೆ ವಿಶೇಷ ಆಂದೋಲನ ಮುಂದುವರಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.



ಉದಯವಾಹಿನಿ ಚಿತ್ರ


ಈ ಸಂದರ್ಭದಲ್ಲಿ ಹಲವು ಫಲಾನುಭವಿಗಳಿಗೆ ಸಾಂಕೇತಿಕವಾಗಿ ಇ-ಖಾತಾ ಪ್ರತಿಗಳನ್ನು ವಿತರಿಸಲಾಯಿತು.ಕಾರ್ಯಕ್ರಮದಲ್ಲಿ ಶಾಸಕ ತನ್ವೀರ್ ಸೇಠ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆಯೂಬ್ ಖಾನ್,, ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ಜಿ.ಪಂ. ಸಿಇಒ ಯುಕೇಶ್ ಕುಮಾರ್, ಪಾಲಿಕೆ ಆಯುಕ್ತೆ ಎಂ.ಕೆ. ಸವಿತಾ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸ್ತನ ಕ್ಯಾನ್ಸರ್ ಮುಂಜಾಗೃತ ಕ್ರಮ ಮತ್ತು ಚಿಕಿತ್ಸೆಯಿಂದ ತಡೆಗಟ್ಟಲು ಸಾಧ್ಯ

• **ಉದಯವಾಹಿನಿ, ಚಾಮರಾಜನಗರ**

ಮಹಿಳೆಯರಲ್ಲಿ ಹೆಚ್ಚಾಗಿ ಸ್ತನ ಕ್ಯಾನ್ಸರ್ ಲಕ್ಷಣಗಳು ಕಾಣಿಸಿಕೊಳ್ಳುತ್ತಿದ್ದು, ಸ್ವಯಂ ಪರೀಕ್ಷೆ ಮಾಡಿಕೊಳ್ಳುವ ಜೊತೆಗೆ ವೈದ್ಯರ ಸಲಹೆ, ಚಿಕಿತ್ಸೆ ಹಾಗು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡು ಪ್ರಾಥಮಿಕ ಹಂತದಲ್ಲಿಯೇ ಕ್ಯಾನ್ಸರ್ ಗುಣಪಡಿಸಿಕೊಳ್ಳಲು ಸಾಧ್ಯವಿದೆ ಎಂದು ಸಿಮ್ಸ್‌ನ ಡೀನ್ ಹಾಗೂ ನಿರ್ದೇಶಕರಾದ ಡಾ. ದೇವಕಿ ತಿಳಿಸಿದರು. ನಗರದ ಹೊರ ವಲಯದಲ್ಲಿರುವ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಿಮ್ಸ್ ಮತ್ತು ಮೈಸೂರಿನ ಕ್ಲಿಯರ್ ಮಿಡಿ ಆಸ್ಪತ್ರೆಯ ಸಹಯೋಗದಲ್ಲಿ ನಡೆದ ಸ್ತನ ಕ್ಯಾನ್ಸರ್ ಕುರಿತು ಅರಿವು ಮತ್ತು ತಡೆಗಟ್ಟುವ ಚಿಕಿತ್ಸೆ ವಿಧಾನಗಳ ಕುರಿತು ನಡೆದ ಪ್ರಾತ್ಯಕ್ಷತೆ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಮಹಿಳೆಯರಯಲ್ಲಿ ಈ ಸ್ತನ ಕ್ಯಾನ್ಸರ್ ಲಕ್ಷಣಗಳು ಪತ್ತೆಯಾಗುತ್ತಿದೆ. ಅದರಲ್ಲೂ ಅತಿ ಬೋಜ್ಜು ಹೊಂದಿರುವವರು, ಹಾರಮೋನ್ಸ್ ಅಸಮತೋಲನ ಇದ್ದವರಲ್ಲಿ ಹಾಗೂ ಜಂಕ್ ಪುಡ್ ಸೇವಿಸುವವರಲ್ಲಿ ಹೆಚ್ಚಾಗಿ


ಉದಯವಾಹಿನಿ ಚಿತ್ರ

ಇಂತಹ ಸ್ತನ ಕ್ಯಾನ್ಸರ್ ಕಂಡು ಬರುವ ಸಾಧ್ಯತೆಗಳು ಹೆಚ್ಚಾಗಿದೆ. ಅಲ್ಲದೇ 45 ವರ್ಷದ ಬಳಿಕ ಮದುವೆಯಾಗುವವರು, ನವಜಾತು ಶಿಶುಗಳಿಗೆ ತಾಯಿ ಎದೆ ಹಾಲು ಕುಡಿಸದೇ ಇರುವ ಮಹಿಳೆಯಲ್ಲಿ ಸ್ತನ ಕ್ಯಾನ್ಸರ್ ಲಕ್ಷಣಗಳು ಹೆಚ್ಚಾಗಿ ಕಂಡು ಬರುತ್ತಿವೆ ಎಂದು ತಿಳಿಸಿದರು. ಹೀಗಾಗಿ ಇಂಥ ಲಕ್ಷಣಗಳು ಕಂಡು ಬರುವ ಮಹಿಳೆಯರು ಸ್ವಯಂ ಪ್ರೇರಣೆಯಿಂದ ಪರೀಕ್ಷಿಸಿಕೊಳ್ಳಬೇಕು. ಮುಜಾಗ್ರತಾ ಕ್ರಮವನ್ನು ಅನುಸರಿಸುವ ಜೊತೆಗೆ ತಜ್ಞ ವೈದ್ಯರನ್ನು ಸಂಪರ್ಕ ಮಾಡಬೇಕು. ಅವರ ಸಲಹೆ ಸೂಚನೆಗಳಂತೆ ವಿವಿಧ ಮಾದರಿ ಪರೀಕ್ಷೆಗಳನ್ನು ಮಾಡಿಸಿ, ಪ್ರಾಥಮಿಕ ಹಂತದಲ್ಲಿಯೇ ಸ್ತನ ಕ್ಯಾನ್ಸರ್ ಪತ್ತೆ ಮಾಡಿಕೊಂಡು ಸೂಕ್ತ ಚಿಕಿತ್ಸೆಯನ್ನು ಪಡೆದುಕೊಂಡು ಆರೋಗ್ಯವಂತ ಜೀವನ ನಡೆಸಲು ಮುಂದಾಗಬೇಕು ಎಂದರು.

71ನೇ ಕನ್ನಡ ರಾಜ್ಯೋತ್ಸವದ ಸಂಭ್ರಮ

• **ಉದಯವಾಹಿನಿ, ಮೈಸೂರು**

ಕನ್ನಡ ನಮ್ಮ ಮಾತೃಭಾಷೆ ಮಾತ್ರವಲ್ಲ, ಅದು ನಮ್ಮ ಇತಿಹಾಸ, ನಮ್ಮ ಸಂಸ್ಕೃತಿ ಮತ್ತು ನಮ್ಮ ಅಸ್ಮಿತೆಯಾಗಿದೆ. ಕನ್ನಡ ನಾಡಿನ ನೆಲ, ಜಲ, ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ನಗರಾಭಿವೃದ್ಧಿ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಕರೆ ನೀಡಿದರು. 71ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಸಂದೇಶ ಭಾಷಣ ಮಾಡಿದ ಅವರು, ನವೆಂಬರ್ 1 ಕನ್ನಡಿಗರ ಪಾಲಿಗೆ ಕೇವಲ ಹಬ್ಬವಲ್ಲ, ನಮ್ಮ ಭಾಷೆಯ ಮೇಲಿನ ಅಭಿಮಾನವನ್ನು ವ್ಯಕ್ತಪಡಿಸುವ ಪವಿತ್ರ ದಿನ. 1956ರ ನ.01ರಂದು ವಿಶಾಲ ಮೈಸೂರು ರಾಜ್ಯ ರಚನೆ ಮತ್ತು 1973ರ ನ.01 ರಂದು ಕರ್ನಾಟಕ ಎಂದು ಮರುನಾಮಕರಣದ ಹಿಂದೆ ಆಲೂರು ವೆಂಕಟರಾವ್ ಸೇರಿದಂತೆ ಮೈಸೂರು ಜಿಲ್ಲಾಧಿಕಾರಿ, ಮೈಸೂರು ನಗರ ಪೊಲೀಸ್ ಆಯುಕ್ತರು, ಡಿಸಿಪಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಪರ ಜಿಲ್ಲಾಧಿಕಾರಿ, ಮಹಾನಗರ ಪಾಲಿಕೆ ಆಯುಕ್ತರು ಸೇರಿದಂತೆ ಜಿಲ್ಲಾ ಮಟ್ಟದ ಎಲ್ಲಾ ಹಿರಿಯ ಅಧಿಕಾರಿಗಳು, ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ಕನ್ನಡಪರ ಸಂಘಟನೆಗಳ ಮುಖಂಡರು, ಸಾಹಿತಿಗಳು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಬ್ಬಿಗೆ 5,500 ದರ ನಿಗದಿಗೆ ಆಗ್ರಹಿಸಿ ರೈತರ ಪ್ರತಿಭಟನೆ

ಹಿಂದೆ ಕೃಷಿಯಿಂದ ಉತ್ತಮ ಆದಾಯ ಗಳಿಸುತ್ತಿದ್ದೆ. ಆಗ ಕೃಷಿ ಕಾರ್ಮಿಕರ ಕೂಲಿಯೂ ಕಡಿಮೆ ಇತ್ತು. ದಿನಕ್ಕೆ 150ರಿಂದ 175 ರೂ. ನೀಡಿದರೆ ಕಾರ್ಮಿಕರು ಸಿಗುತ್ತಿದ್ದರು.

• **ಉದಯವಾಹಿನಿ, ರಾಮನಗರ**

1 ಮೈಸೂರು ಹಳೆ ಹೆದ್ದಾರಿ ತಡೆದ ರೈತರು

2 ರಾಜ್ಯ, ಸರ್ಕಾರಗಳ ವಿರುದ್ಧ ಘೋಷಣೆ

3 ನೆಪ ಹೇಳುತ್ತಾ ದಿನಗಳನ್ನು ದೂಡುತ್ತಿದೆ

ಪ್ರತಿ ಟನ್ ಕಬ್ಬಿಗೆ 5,500 ದರ ನಿಗದಿ ಮತ್ತು ಎಫ್‌ಆರ್‌ಪಿ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಬ್ಬು ಬೆಳೆಗಾರರು ನಡೆಸುತ್ತಿರುವ ಹೋರಾಟ ಬೆಂಬಲಿಸಿ, ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಭಾಗದ ರೈತರು ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಶನಿವಾರ ಪ್ರತಿಭಟನೆ ನಡೆಸಿದರು.

ಬೆಳಿಗ್ಗೆ ಜಿಲ್ಲಾಧಿಕಾರಿ ಕಚೇರಿ ಎದುರು ಬೆಂಗಳೂರು ಮೈಸೂರು ಹಳೆ ಹೆದ್ದಾರಿ ತಡೆದ ರೈತರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದರು. ಕಬ್ಬು ಬೆಳೆಗಾರರ ನ್ಯಾಯಯುತವಾದ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕು ಎಂದು ಆಗ್ರಹಿಸಿದರು.

ತಮ್ಮ ಬೇಡಿಕೆ ಈಡೇರಿಕೆಗಾಗಿ ಸುಮಾರು ಒಂದು ತಿಂಗಳಿನಿಂದ ಬೆಳಗಾವಿ, ಬಾಗಲಕೋಟೆ, ವಿಜಯಪುರ ಜಿಲ್ಲೆಯ ರೈತರು ಸಾವಿರಾರು ಸಂಖ್ಯೆಯಲ್ಲಿ ಬೀದಿಗಿಳಿದು ಹೋರಾಟ ನಡೆಸುತ್ತಿದ್ದಾರೆ. ಆದರೆ, ರಾಜ್ಯ ಹಾಗೂ ಕೇಂದ್ರ ಸರ್ಕಾರ ರೈತರ ನ್ಯಾಯಯುತ


ಉದಯವಾಹಿನಿ ಚಿತ್ರ

ಸಾರ್ವಜನಿಕ, ಸಹಕಾರಿ ಕಾರ್ಖಾನೆಗಳಿಗೆ ಹಾಗೂ ರೈತರ ಹಿತಕ್ಕೆ ಮಾರಕವಾಗಿರುವ ರಂಗರಾಜನ್ ಶಿಫಾರಸ್ಸು ಆಧಾರಿತ ಕಬ್ಬು ಹಾಗೂ ಸಕ್ಕರೆ ನೀತಿ ರದ್ದುಪಡಿಸಿ, ರೈತಪರ ನೀತಿ ಜಾರಿಗೆ ತರಬೇಕು. – ಕೆ. ಮಲ್ಲಯ್ಯ, ರಾಜ್ಯ ಉಪಾಧ್ಯಕ್ಷ

ಹಕ್ಕೊತ್ತಾಯಗಳನ್ನು ಈಡೇರಿಸದೆ, ನೆಪ ಹೇಳುತ್ತಾ ದಿನಗಳನ್ನು ದೂಡುತ್ತಿದೆ ಎಂದು ಆಕ್ರೋಶ ಹೊರ ಹಾಕಿದರು. ರೈತರ ತಾಳ್ಮೆ ಪರೀಕ್ಷೆ ಮಾಡದೆ ಸರ್ಕಾರ ತಕ್ಷಣವೇ ಸಕ್ಕರೆ ಕಾರ್ಖಾನೆಗಳಿಂದರೈತರಿಗೆ ನೀಡಬೇಕಿರುವ ದರವನ್ನು ಪಾವತಿಸಲು ಕ್ರಮ ಕೈಗೊಳ್ಳಬೇಕು. ತಮಿಳುನಾಡು ಮಾದರಿಯಲ್ಲಿ ಪ್ರತಿ ಟನ್ ಕಬ್ಬಿಗೆ ಪ್ರೋತ್ಸಾಹಧನ ಘೋಷಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಎಂ.ಆರ್. ನಾಗರಾಜು, ಶ್ರೀನಿವಾಸ್, ಬಿ. ಮಂಜುನಾಥ್, ಕೆ.ಎನ್. ರಾಜು, ಅಶ್ವತ್ಥ, ರಾಧಾಕೃಷ್ಣ, ಮಂಜುನಾಥ್ ಲಕ್ಕಪ್ಪ, ರೇವಣ್ಣ, ಹನುಮಂತಯ್ಯ, ಸುಮಿತ್ರಮ್ಮ, ನೇತ್ರಾವತಿ, ಸುಮಾ ಹಾಗೂ ಇತರರು ಭಾಗವಹಿಸಿದ್ದರು. ನ್ಯಾಯಯುತ ಹಾಗೂ ಲಾಭದಾಯಕ ಬೆಲೆ (ಎಫ್‌ಆರ್‌ಪಿ) ನಿಗದಿ ಮಾಡಬೇಕು. ಅದಕ್ಕೆ ಶೇ 10.25 ಸಕ್ಕರೆ ಇಳುವರಿ ಅನ್ನು ಬೇಸ್ ಆಗಿ ಪರಿಗಣಿಸುವ ಬದಲು ಶೇ 9.5 ಅನ್ನು ಆಧಾರವಾಗಿ ಪರಿಗಣಿಸಬೇಕು. ರಾಜ್ಯ ಸಲಹಾ ಬೆಲೆ (ಎಸ್ ಎಪಿ) ನಿಗದಿ ಮಾಡಬೇಕು. ಎಫ್‌ಆರ್‌ಪಿ ಪಾವತಿಸಿದ ನಂತರ ಉಪ ಉತ್ಪನ್ನಗಳ ಲಾಭಾಂಶವನ್ನು ಪ್ರತ್ಯೇಕವಾಗಿ ಪರಿಗಣಿಸಿ ಕನಿಷ್ಟ ಶೇ 50ರಷ್ಟು ಲಾಭವನ್ನು ಕಬ್ಬು ಬೆಳೆಗಾರರಿಗೆ ವರ್ಗಾಯಿಸಬೇಕು' ಎಂದು ಬೈರಮಂಗಲ -ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿಗಳ ರೈತರ ಭೂ ಹಿತರಕ್ಷಣಾ ಸಂಘದ ಮುಖಂಡ ಪ್ರಕಾಶ್ ಆಗ್ರಹಿಸಿದರು.

ರೈತರ ಆಕ್ರೋಶ

ಸರ್ಕಾರದ ಈ ವಿಳಂಬ ನೀತಿಯಿಂದಾಗಿ, ಒಂದು ಕಡೆ ಗದ್ದೆಯಲ್ಲಿ ಕಬ್ಬು ಒಣಗುತ್ತಿದೆ. ಇನ್ನೊಂದು ಕಡೆ ರೈತರ ಆಕ್ರೋಶ ಮುಗಿಲು ಮುಟ್ಟುತ್ತಿದೆ. ಇಂತಹ ಪರಿಸ್ಥಿತಿ ರಾಜ್ಯದಲ್ಲಿ ಉದ್ಭವಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ರೈತ ವಿರೋಧಿ ನೀತಿಯೇ ಕಾರಣವಾಗಿದೆ ಎಂದು ದೂರಿದರು.

ಕಬ್ಬು ಬೆಳೆಗಾರರ ಹಕ್ಕೋತ್ತಾಯಗಳು?

★ರಾಜ್ಯ ಸರ್ಕಾರ 900 ಎಸ್‌ಎಪಿ ಘೋಷಿಸಲಿ.
★ಕಬ್ಬು ಸೇರಿದಂತೆ ಎಲ್ಲಾ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಚಿತಪಡಿಸಲಿ. ★ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಲಿ.
★ಕಬ್ಬಿನ ತೂಕಮಾಪನ, ಸಕ್ಕರೆ ಇಳುವರಿ ಹಾಗೂ ಪಾವತಿಯಲ್ಲಿ ಪಾರದರ್ಶಕತೆ ಇರಲಿ.
★ರೈತರ ಬಾಕಿ ಪಾವತಿಗಳನ್ನು ತ್ವರಿತವಾಗಿ ಬಿಡುಗಡೆ ಮಾಡಬೇಕು
★ರೈತರಿಗೆ ಲಾಭಾಂಶ ಕೊಡಿ'
★ರಾಜ್ಯ ಸರ್ಕಾರದ ಬೆಲೆ ಆಯೋಗ ತಿಳಿಸಿರುವ ಕಬ್ಬು ಬೆಳೆ ವೆಚ್ಚವನ್ನು ಆಧರಿಸಿ ಶೇ 50ರಷ್ಟು ದರ ಹೆಚ್ಚಿಸಿ

ಅಂತರಾಳದಿಂದ... EDITORIAL

ಬಲಪಂಥೀಯ ಅಶ್ವಮೇಧ ಕುದುರೆಗೆ ಕಡಿವಾಣ



ಭಾರತದಲ್ಲಿ ಈಗ ಕೇಂದ್ರ ಸರಕಾರದ ವಿರುದ್ಧ ದೇಶದಾದ್ಯಂತ ಆಗುತ್ತಿರುವ ಪ್ರತಿಭಟನೆಗಳನ್ನು ಸತ್ತೆಯನ್ನು ಬದಲಾಯಿಸುವ ಕುತಂತ್ರ ಎಂದು ಆಡಳಿತ ಪಕ್ಷದ ಪ್ರತಿನಿಧಿಗಳು ಆಪಾದಿಸಿದ್ದಾರೆ. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಪ್ರತಿಭಟನೆಗಳು ನಿರಂತರವಾಗಿ, ಅವುಗಳ ಕಾವು ಅಧಿಕಾರದಲ್ಲಿರುವವರಿಗೆ ತಲುಪಿ ಸುಧಾರಣೆಗೆ ದಾರಿ ಆಗಬಹುದು ಎಂದು ಆಶಾವಾದಿಗಳ ನಂಬಿಕೆ. ಆ ನಂಬಿಕೆ ಹುಸಿಯಾಗುವ ಸಾಧ್ಯತೆ ಸ್ಪಷ್ಟವಾದಾಗ ಪರ್ಯಾಯವಾದ ದಾರಿ ಆಡಳಿತವನ್ನು ಬದಲಾಯಿಸುವುದು.

ಆದರೆ ಅಲ್ಲಿನ ಆಡಳಿತ ವರ್ಗದ ವೈಖರಿಗೆ ಕಂಗಾಲಾದ ಜನತೆಯು ಪ್ರತಿರೋಧದ ದ್ಯೋತಕವಾಗಿ ಕಣಕ್ಕೆ ಇಳಿದ ಅನಾಮಧೇಯರೇ ಆಗಿದ್ದ ತಜ್ಞರು, ಕ್ರೀಡಾಳುಗಳು, ರೈತರು, ಕಲಾವಿದರು ಮುಂತಾದವರನ್ನು ಚುನಾಯಿಸಿದ್ದಾರೆ. ಚುನಾವಣೆಯ ಬಳಿಕ ಚಳವಳಿಯ ನಾಯಕರು 'ಇದು ಭಯದ ವಿರುದ್ಧ ಜನಸಾಮಾನ್ಯರು ಗಳಿಸಿದ ಜಯ' ಎಂದಿದ್ದಾರೆ. ಎರಡು ವರ್ಷಗಳ ಹಿಂದೆ ನೋವಿ ಸಾದ್ ರೈಲು ನಿಲ್ದಾಣದ ಮೇಲ್ಛಾವಣಿ ಕುಸಿದು ಬಿದ್ದು 16 ಮಂದಿ ನಾಗರಿಕರ ದಾರುಣ ಮೃತ್ಯುವಿನ ಬಳಿಕ ಜನರ ಆಕ್ರೋಶ ಹೊರಬಂತು. ಅವಧಿಗಿಂತ ಮೊದಲೇ ಚುನಾವಣೆ ಘೋಷಣೆ ಮಾಡಿದ ಅಧ್ಯಕ್ಷ ವೈಚೀಸ್ ಸೋಲುಂಡರು. ಎರಡು ವರ್ಷಗಳ ಹಿಂದೆ ಭಾರತದ ನೆರೆಯ ಮೂರು ರಾಷ್ಟ್ರಗಳಲ್ಲಿ ಆದ ರಾಜಕೀಯ ಪಲ್ಲಟಗಳೂ ಇಲ್ಲಿ ಪ್ರಸ್ತುತವಾಗುತ್ತವೆ.

2024ರಲ್ಲಿ ಬಾಂಗ್ಲಾದೇಶದ ಶೇಕ್ ಹಸೀನಾ ಅವರ ಸೋಲು ಮತ್ತು ಶ್ರೀಲಂಕಾದಲ್ಲಿ ಗೋತಬಯ ರಾಜಪಕ್ಷೆಯವರ ಆಳ್ವಿಕೆಯ ಅಂತ್ಯ ಹಾಗೂ 2025ರಲ್ಲಿ ನೇಪಾಳದಲ್ಲಿ ಯುವ ಮುಂದಾಳು ಬಾಲೇಂದ್ರ ಶಾ ಅವರ ವಿಜಯ-ಇವುಗಳು ಆಳುವ ವರ್ಗಗಳ ಸರ್ವಾಧಿಕಾರಿ ಹಾಗೂ ದಮನಕಾರಿ ಮನೋಸ್ಥಿತಿಯು ಮತದಾರರಿಗೆ ಸಮ್ಮತವಲ್ಲ ಎಂದು ತೋರಿಸಿದ್ದವು. ಎರಡು ಚಾರಿತ್ರಿಕ ಘಟನೆಗಳನ್ನೂ ಇಲ್ಲಿ ಸ್ಮರಿಸಬಹುದು. ಎರಡನೆಯ ಮಹಾಯುದ್ಧದಲ್ಲಿ ಮಿತ್ರಪಡೆಗಳ ನಾಯಕನಾಗಿ ಜಯಗಳಿಸಿದ ಇಂಗ್ಲೆಂಡ್‌ನ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ ಅವರು ಯುದ್ಧಾನಂತರದ ಚುನಾವಣೆಯಲ್ಲಿ ಸೋತರು. ಮತದಾರರ ಸಂದೇಶ ಸ್ಪಷ್ಟವಾಗಿತ್ತು ನೀವು ಯುದ್ಧದ ನೇತೃತ್ವಕ್ಕೆ ಅರ್ಹರು, ಆದರೆ ಶಾಂತಿಯ ಕಾಲಕ್ಕೆ ನಮಗೆ ಬೇರೆ ನಾಯಕರ ಅಗತ್ಯವಿದೆ.ಭಾರತದಲ್ಲಿ 1975-77ರ ತುರ್ತು ಪರಿಸ್ಥಿತಿಯ ನಂತರದ ಚುನಾವಣೆಯಲ್ಲಿ ಅತ್ಯಂತ ಬಲಶಾಲಿ ಪ್ರಧಾನಿ ಎನ್ನಿಸಿ ಕೊಂಡಿದ್ದ ಇಂದಿರಾ ಗಾಂಧಿ ಅವರನ್ನು ಮತದಾರರು ಸೋಲಿಸಿದರು.ಯಾವ ನಾಯಕರೂ ಸ್ಥಿರವಲ್ಲ ಮತ್ತು ಅವರು ಸರ್ವಕಾಲಕ್ಕೂ ಸೂಕ್ತರಾಗಿರಬೇಕಿಲ್ಲ ಎಂಬುದು ಇವುಗಳ ಪಾಠ. ಯೂರೋಪ್‌ನ ಪ್ರಮುಖ ಪ್ರಜಾಸತ್ತಾತ್ಮಕ ದೇಶಗಳಾದ ಫ್ರಾನ್ಸ್ ಮತ್ತು ಇಟಲಿಯಲ್ಲಿ ಆಳುವ ಸರಕಾರಗಳ ವಿರುದ್ಧ ಅನೇಕ ದಿನಗಳಿಂದ ಜನರು ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ಅವುಗಳು ಹಿಂಸಾತ್ಮಕವಾಗಿದ್ದು ಅಲ್ಲಿನ ಸರಕಾರಗಳು ಕಾನೂನಾತ್ಮಕ ಪ್ರಕ್ರಿಯೆಗಳನ್ನು ಕೈಗೊಂಡಿವೆ.

ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಅದು ಶಾಂತಿಯುತವಾಗಿ ನಡೆಯುತ್ತದೆ. ಈ ಬದಲಾವಣೆಯು ರಾಷ್ಟ್ರದ ನಾಗರಿಕತೆಯ ಪ್ರಬುದ್ಧತೆಯ ಸಂಕೇತ ಕೂಡ. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಜಗತ್ತಿನ ಬೇರೆಬೇರೆ ಕಡೆಗಳಲ್ಲಿ ಆದ ಬದಲಾವಣೆಗಳು ಉಲ್ಲೇಖನೀಯ ಮತ್ತು ಅವುಗಳಲ್ಲಿ ಅಡಕವಾದ ಸಂದೇಶ ಮನನೀಯ. ದಕ್ಷಿಣ ಅಮೆರಿಕದ ಅತಿ ದೊಡ್ಡ ರಾಷ್ಟ್ರ ಬ್ರೆಝಿಲ್‌ನಲ್ಲಿ ಅಕ್ಟೋಬರ್ 25ರಂದು ನಡೆದ ಎರಡನೇ ಸುತ್ತಿನ ಮತದಾನದಲ್ಲಿ ತನ್ನ ಪ್ರಬಲ ಪ್ರತಿಸ್ಪರ್ಧಿಯಾಗಿದ್ದ ಬಲಪಂಥೀಯ ಅಭ್ಯರ್ಥಿ ಫ್ಲಾವಿಯೊ ಬೋಲೊನಾರೊ ಅವರನ್ನು ಸೋಲಿಸಿ ಕಾರ್ಮಿಕ ಚಳವಳಿಯ ಮೂಲಕ ರಾಜಕೀಯಕ್ಕೆ ಕಾಲಿಟ್ಟ 81 ವರ್ಷ ಪ್ರಾಯದ ಲೂಯ್ ಇನಾಸಿಯೊ ಲುಲಾ ದ ಸಿಲ್ವಾ ಅವರು ಅಲ್ಲಿನ ಅಧ್ಯಕ್ಷರಾಗಿ ನಾಲ್ಕನೇ ಅವಧಿಗೆ ಆಯ್ಕೆಯಾಗಿದ್ದಾರೆ. ಇದೇ ಸಂದರ್ಭದಲ್ಲಿ ಮಧ್ಯ ಯೂರೋಪಿನ ಸರ್ಬಿಯಾದಲ್ಲಿ 14 ವರ್ಷಕಾಲ ಅಧಿಕಾರದಲ್ಲಿದ್ದ ಬಲಪಂಥೀಯ ಅಲೆಕ್ಸಾಂಡರ್ ವೈಚೀಸ್ ಅವರನ್ನು ಆಯ್ಕೆ ಮಾಡದೆ ಚುನಾವಣೆಗೆ ಇಳಿದ ಯುವಜನರ ತಂಡವು ಸೋಲಿಸಿದೆ.

ಏನಿದು ಪ್ಯಾರಾಥೈರಾಯ್ಡ್ ಸಮಸ್ಯೆ ಮೂಳೆ, ಸ್ನಾಯು, ನರಗಳು ಕಿಡ್ನಿ ಮೇಲೆ ಪರಿಣಾಮ: ವೈದ್ಯರ ಎಚ್ಚರಿಕೆ

ಹಲವು ಜನರು ಥೈರಾಯ್ಡ್ ಸಂಬಂಧಿಸಿದ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಸಂಶೋಧನೆವೊಂದು ತಿಳಿಸುವ ಪ್ರಕಾರ, ಪ್ರಪಂಚದಾದ್ಯಂತ ಸುಮಾರು 200 ಮಿಲಿಯನ್ ಜನರು ಥೈರಾಯ್ಡ್ ಕಾಯಿಲೆಯಿಂದ ಬಳಲುತ್ತಿದ್ದಾರೆ. ಸುಮಾರು ಶೇಕಡಾ 5ರಷ್ಟು ಜನಸಂಖ್ಯೆಯು ದೀರ್ಘಕಾಲದ ಥೈರಾಯ್ಡ್ ಸಮಸ್ಯೆಗಳಿಗೆ ತುತ್ತಾಗಿದ್ದಾರೆ. ಶೇಕಡಾ 5ರಷ್ಟು ಜನರಲ್ಲಿ ಈ ಸಮಸ್ಯೆ ಇರುವ ಕುರಿತು ಪತ್ತೆಯಾಗಿಲ್ಲ. ಜಾಗತಿಕವಾಗಿ ಅತ್ಯಂತ ಸಾಮಾನ್ಯವಾದ ಅಂತಃಸ್ರಾವಕ ಅಸ್ವಸ್ಥತೆಗಳಲ್ಲಿ ಈ ಥೈರಾಯ್ಡ್ ಸಂಬಂಧಿಸಿದ ಸಮಸ್ಯೆಗಳು ಕೂಡ ಸೇರಿವೆ. ಪುರುಷರಿಗಿಂತ ಮಹಿಳೆಯರ ಮೇಲೆ ಹೆಚ್ಚು ಪರಿಣಾಮ ಉಂಟಾಗುತ್ತಿದೆ.

ಪುರುಷರಿಗೆ ಹೋಲಿಸಿದರೆ ಮಹಿಳೆಯರಲ್ಲಿ ಈ ಪ್ರಮಾಣವು ಸುಮಾರು ಐದು ಪಟ್ಟು ಹೆಚ್ಚಿರುವುದು ಕಾಣಿಸುತ್ತದೆ. ಥೈರಾಯ್ಡ್ ಸಮಸ್ಯೆಗಳು ಎಲ್ಲಾ ವಯಸ್ಸಿನವರಲ್ಲಿಯೂ ಕಂಡುಬರುತ್ತವೆ. ಥೈರಾಯ್ಡ್ ಅಂದರೆ, ಸಾಮಾನ್ಯವಾಗಿ ತೂಕ ಹೆಚ್ಚಾಗುವುದು ಅಥವಾ ಕಡಿಮೆಯಾಗುವುದು, ಅಥವಾ ಹೃದಯ ಬಡಿತ ಹೆಚ್ಚಾಗುವುದು ಆಯಾಸ, ಕೂದಲು ಉದುರುವಿಕೆಯ ಸಮಸ್ಯೆಗಳ ಕುರಿತು ಯೋಚಿಸುತ್ತೇವೆ. ಕುತ್ತಿಗೆಯಲ್ಲಿರುವ ಚಿಟ್ಟೆಯ ಆಕಾರದ ಈ ಗ್ರಂಥಿಯು ದೇಹಕ್ಕೆ ಅಗತ್ಯವಿರುವಂತಹ ಹಾರ್ಮೋನುಗಳನ್ನು ಬಿಡುಗಡೆ ಮಾಡುತ್ತದೆ.

ಇಡೀ ದೇಹದ ಸರಿಯಾದ ಕಾರ್ಯನಿರ್ವಹಣೆಗೆ ಅತ್ಯಂತ ಮುಖ್ಯವಾಗಿವೆ. ಥೈರಾಯ್ಡ್‌ಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಕೇಳುತ್ತೇವೆ ಹಾಗೂ ಚರ್ಚಿಸುತ್ತೇವೆ. ಅನೇಕರಿಗೆ ಪ್ಯಾರಾಥೈರಾಯ್ಡ್ ಕುರಿತು ತಿಳಿವಳಿಕೆಯ ಕೊರತೆಯಿದೆ.

ಥೈರಾಯ್ಡ್ ಸಮಸ್ಯೆಗಳು ಸಾಮಾನ್ಯವಾಗಿದ್ದರೂ ಕುತ್ತಿಗೆಯಲ್ಲಿರುವ ಮತ್ತೊಂದು ಸಣ್ಣ ಗ್ರಂಥಿಯಾದ ಪ್ಯಾರಾಥೈರಾಯ್ಡ್ ಕುರಿತು ಅನೇಕರಿಕೆ ತಿಳಿವಳಿಕೆಯಿಲ್ಲ. ಹೆಸರುಗಳು ಒಂದೇ ರೀತಿಯಾಗಿ ರುವುದರಿಂದ ಬಹುತೇಕರು ಪ್ಯಾರಾಥೈರಾಯ್ಡ್ ಕೂಡ ಥೈರಾಯ್ಡ್‌ನ ಒಂದು ಭಾಗ ಎಂದು ತಪ್ಪಾಗಿ ತಿಳಿಯುತ್ತಾರೆ. ಇದು ವಿಭಿನ್ನ ಹಾಗೂ ಪ್ರತ್ಯೇಕ ಕಾರ್ಯಗಳನ್ನು ನಿರ್ವಹಿಸುತ್ತವೆ. ದೇಹದಲ್ಲಿ ಕ್ಯಾಲ್ಸಿಯಂ ಸಮತೋಲನ ಕಾಪಾಡಿಕೊಳ್ಳುವಲ್ಲಿ ಪ್ಯಾರಾಥೈರಾಯ್ಡ್ ಗ್ರಂಥಿಗಳು ನಿರ್ಣಾಯಕ ಪಾತ್ರವಹಿಸುತ್ತವೆ. ಕ್ಯಾಲ್ಸಿಯಂ ಕೇವಲ ಮೂಳೆಗಳು, ಹಲ್ಲುಗಳಿಗೆ ಮಾತ್ರವಲ್ಲದೆ, ಸ್ನಾಯುಗಳ ಕಾರ್ಯನಿರ್ವಹಣೆ, ನರ ಸಂಕೇತಗಳ ರವಾನೆ, ಹೃದಯ ಬಡಿತ ಸಹಜ ಸ್ಥಿತಿಯಲ್ಲಿ ಕಾಯ್ದುಕೊಳ್ಳಲು ತುಂಬಾ ಅತ್ಯಗತ್ಯವಾಗಿದೆ. ಈ ಸಣ್ಣ ಗ್ರಂಥಿಗಳ ಕಾರ್ಯನಿರ್ವಹಣೆಯಲ್ಲಿ ಯಾವುದೇ ತೊಂದರೆಯಾದರೆ ವಿವಿಧ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು.

ಏನಿದು ಪ್ಯಾರಾಥೈರಾಯ್ಡ್ ಗ್ರಂಥಿಗಳು ಇವುಗಳಿಗೆ ಸಂಬಂಧಿಸಿದ ಸಮಸ್ಯೆಯಾದರೆ ಕಾಣಿಸುವ ಲಕ್ಷಣಗಳು ಯಾವುವು ಎಂಬುದನ್ನು ಇಲ್ಲಿ ತಿಳಿಯೋಣ. ಪ್ಯಾರಾಥೈರಾಯ್ಡ್ ಗ್ರಂಥಿಗಳು ಥೈರಾಯ್ಡ್ ಗ್ರಂಥಿಯ ಹಿಂಭಾಗದಲ್ಲಿರುವ ನಾಲ್ಕು ಚಿಕ್ಕ ಗ್ರಂಥಿಗಳನ್ನು ಒಳಗೊಂಡಿರುತ್ತವೆ. ಇವು ಪ್ಯಾರಾಥೈರಾಯ್ಡ್ ಹಾರ್ಮೋನ್ ಎಂಬ ಹಾರ್ಮೋನ್ ಉತ್ಪಾದಿಸುತ್ತವೆ. ರಕ್ತದಲ್ಲಿ ಕ್ಯಾಲ್ಸಿಯಂನ ಸಮತೋಲಿತ ಮಟ್ಟ ಕಾಪಾಡಿಕೊಳ್ಳಲು ಹೆಚ್ಚು ಸಹಾಯ ಮಾಡುತ್ತದೆ. ಪಿಟಿಹೆಚ್ ಮೂಳೆಗಳು ರಕ್ತಪ್ರವಾಹಕ್ಕೆ ಸಣ್ಣ ಪ್ರಮಾಣದ ಕ್ಯಾಲ್ಸಿಯಂ, ಫಾಸ್ಫೇಟ್ ಬಿಡುಗಡೆ ಮಾಡುವಂತೆ ಸಂಕೇತಿಸುತ್ತದೆ.

ರಕ್ತದ ಕ್ಯಾಲ್ಸಿಯಂ ಮಟ್ಟವು ಸಾಮಾನ್ಯ ವ್ಯಾಪ್ತಿಯಲ್ಲಿಡಲು ಅನುವು ಮಾಡುಕೊತ್ತದೆ. ಇದು ಮೂತ್ರಪಿಂಡಗಳು ಮೂತ್ರದ ಮೂಲಕ ಕ್ಯಾಲ್ಸಿಯಂ ಅನ್ನು ಹೊರಹಾಕುವುದನ್ನು ತಡೆಯುತ್ತದೆ.

ಬದಲಿಗೆ ಇದನ್ನು ದೇಹದಲ್ಲಿ ಮತ್ತೆ ಹೀರಿಕೊಳ್ಳುತ್ತದೆ. ಪ್ಯಾರಾಥೈರಾಯ್ಡ್ ಗ್ರಂಥಿಗಳಲ್ಲಿ ಸಮಸ್ಯೆ ಈ ಹಾರ್ಮೋನುಗಳ ಸಮತೋಲನವು ತೊಂದರೆಗೊಳಗಾಗಿದ್ದರೆ, ದೇಹದಲ್ಲಿನ ಕ್ಯಾಲ್ಸಿಯಂ ಮಟ್ಟದ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ. ರಕ್ತದ ಕ್ಯಾಲ್ಸಿಯಂ ಮಟ್ಟವು ಸಾಮಾನ್ಯ ವ್ಯಾಪ್ತಿಯಲ್ಲಿಡಲು ಅನುವು ಮಾಡುಕೊತ್ತದೆ.



ಪರೀಕ್ಷಾ ಸಂಭ್ರಮ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381

26

ಉಸಿರಾಟದಲ್ಲಿ ತೊಂದರೆಯಾದಾಗ '4-7-8' ಸೂತ್ರ

ಭಂಗಿಯನ್ನು ನೇರಗೊಳಿಸಿ ಭುಜಗಳನ್ನು ಸಡಿಲಗೊಳಿಸಿ. ಮೂಗಿನಿಂದ ನಾಲ್ಕು ಸೆಕೆಂಡು ಎಣಿಸುತ್ತಾ ಆಳವಾಗಿ ಉಸಿರೆಳೆಯಿರಿ, ಏಳು ಸೆಕೆಂಡು ಒಳಗೆ ಹಿಡಿದಿಟ್ಟುಕೊಳ್ಳಿ, ಬಾಯಿಯಿಂದ ಎಂಟು ಸೆಕೆಂಡು ನಿಧಾನವಾಗಿ ಹೊರಬಿಡಿ. ಈ ಆವರ್ತನವನ್ನು ನಾಲ್ಕು ಬಾರಿ ಪುನರಾವರ್ತಿಸಿ, ಹೊರಬಿಡುವಾಗ ಹೊಟ್ಟೆ ಸಹಜವಾಗಿ ಒಳಸರಿಯುವುದನ್ನು ಗಮನಿಸಿ.



ಪರೀಕ್ಷಾ ಒತ್ತಡದಲ್ಲಿ ಹಲವರಿಗೆ ಉಸಿರು ಮೊಟಕಾಗಿ ಎದೆಗೂಡು ಬಿಗಿದ ಅನುಭವವಾಗುತ್ತದೆ. ಉಸಿರುಗಟ್ಟುವಿಕೆಯ ಭ್ರಮೆ ಮೂಡಿದಾಗ ಆತಂಕ ದ್ವಿಗುಣಗೊಂಡು ಲಯ ಮತ್ತಷ್ಟು ತಪ್ಪುತ್ತದೆ. ಇಂತಹ ಹೊತ್ತಿನಲ್ಲಿ ಒಂದು ನಿಮಿಷದಲ್ಲಿ ಸಮಾಧಾನ ನೀಡುವ ಸರಳ ತಂತ್ರವೆಂದರೆ 4-7-8 ಸೂತ್ರ.


ಈ ವಿಧಾನದ ಹಿಂದಿನ ವಿಜ್ಞಾನ ಸ್ಪಷ್ಟ. ನಾಲ್ಕು ಸೆಕೆಂಡಿನ ಆಘ್ರಾಣದಲ್ಲಿ ಮಿದುಳಿಗೆ ಆಮ್ಲಜನಕ ಪೂರೈಕೆಯಾಗುತ್ತದೆ, ಏಳು ಸೆಕೆಂಡಿನ ಧಾರಣೆಯಲ್ಲಿ ಸಹಾನುಭೂತಿ ನರಮಂಡಲ ಶಮನಗೊಳ್ಳುತ್ತದೆ, ಎಂಟು ಸೆಕೆಂಡಿನ ವಿಸರ್ಜನೆಯಲ್ಲಿ ಇಂಗಾಲದ ಡೈಆಕ್ಸೈಡ್ ಜೊತೆಗೆ ಆತಂಕವೂ ನಿರ್ಗಮಿಸುತ್ತದೆ. ಹೃದಯಬಡಿತ ಮಂದವಾಗುತ್ತದೆ.

ನೆನಪಿಡಿ, ಉಸಿರೇ ನಿಮ್ಮೊಳಗಿನ ಅಮೃತೌಷಧ. ಪರೀಕ್ಷಾ ಕೊಠಡಿಯಲ್ಲಿ ಯಾರಿಗೂ ಅರಿವಾಗದಂತೆ ಇದನ್ನು ಮಾಡಬಹುದು. ಉಸಿರು ಸರಿದರೆ ಯೋಚನೆ ಸರಿಯಾಗುತ್ತದೆ, ಯೋಚನೆ ಸರಿದರೆ ಉತ್ತರ ತಾನಾಗಿಯೇ ಸ್ಪಷ್ಟವಾಗಿ ಮೂಡುತ್ತದೆ.

ಮಧ್ಯಾಹ್ನದ 10ರಿಂದ 15 ನಿಮಿಷಗಳವರೆಗೆ ನಿದ್ರೆ ಮಾಡಿದರೆ ಮೆದುಳಿನ ಪುನಶ್ಚೇತನಕ್ಕೆ ಒಳ್ಳೆಯದೆ? ತಜ್ಞರು ತಿಳಿಸುವುದೇನು?

ಮಧ್ಯಾಹ್ನದ ಊಟ ಮಾಡಿದ ಅರ್ಧ ಗಂಟೆ ಬಳಿಕ ಸುಸ್ತು ಇಲ್ಲವೇ ಸೋಮಾರಿತನದ ಅನುಭವ ಬಹುತೇಕರಿಗೆ ಆವರಿಸುತ್ತದೆ. ಏಕಾಗ್ರತೆ ಕಡಿಮೆಯಾಗುತ್ತದೆ, ಕಣ್ಣುಗಳು ಭಾರವಾಗುತ್ತವೆ ಹಾಗೂ ಅತ್ಯಂತ ಸರಳವಾದ ಕೆಲಸಗಳನ್ನು ಮಾಡಲು ದೊಡ್ಡ ಶ್ರಮದಾಯಕ ಕೆಲಸದಂತೆ ಭಾಸವಾಗುತ್ತದೆ. ಇಂತಹ ಕ್ಷಣಗಳಲ್ಲಿ 10ರಿಂದ 15 ನಿಮಿಷಗಳವರೆಗೆ ನಿದ್ರೆ (ಮೈಕ್ರೋ ನ್ಯಾಪ್) ಮಾಡಿದರೆ, ಮೆದುಳು ಹಾಗೂ ದೇಹ ಎರಡನ್ನೂ ತ್ವರಿತವಾಗಿ ಪುನಶ್ಚೇತನಗೊಳಿಸಲು ಅತ್ಯುತ್ತಮ ಮಾರ್ಗವಾಗಿದೆ. ಮೈಕ್ರೋ ನ್ಯಾಪ್ ರಾತ್ರಿಯ ಮುಖ್ಯ ನಿದ್ದೆಗೆ ಎಂದಿಗೂ ಪರ್ಯಾಯವಾಗಲಾರದು ಎನ್ನುವುದನ್ನು ಗಮನಿಸಬೇಕಾಗುತ್ತದೆ. ದಿನದ ಯಾವ ಸಮಯದಲ್ಲಿ ಸುಸ್ತು, ಜಡತ್ವ ಉಂಟಾಗುತ್ತದೆಯೋ ಈ ಸಮಯದಲ್ಲಿ ಮೆದುಳು ಹಾಗೂ ದೇಹಕ್ಕೆ ಸ್ವಲ್ಪ ವಿಶ್ರಾಂತಿ ನೀಡಲು ಇದು ಸಹಾಯಕವಾಗುತ್ತದೆ.

ಕೆಲವು ನಿಮಿಷಗಳ ನಿದ್ರೆ ಮಾಡುವುದರಿಂದ ದೇಹದ ಎಚ್ಚರವನ್ನು ಹೆಚ್ಚಿಸುತ್ತದೆ. ಆಯಾಸ ಹೋಗಲಾಡಿಸುತ್ತದೆ, ಕೆಲಸದ ಮೇಲೆ ಮತ್ತೆ ಗಮನ ಕೇಂದ್ರೀಕರಿಸಲು ಸುಲಭವಾಗಿಸುತ್ತದೆ ಎಂದು ತಜ್ಞರು ತಿಳಿಸುತ್ತಾರೆ. ಮಧ್ಯಾಹ್ನದ



ಮೈಕ್ರೋ ನ್ಯಾಪ್ ಸಮಯದಲ್ಲಿ ಮೆದುಳಿನೊಳಗೆ ಕೆಲವು ಪ್ರಮುಖ ವೈಜ್ಞಾನಿಕ ಬದಲಾವಣೆಗಳು ನಡೆಯುತ್ತವೆ. ಈ ಕೆಲವೇ ನಿಮಿಷಗಳಲ್ಲಿ ಮೆದುಳು ನಿದ್ದೆಯ ಮೊದಲ ಹಂತವಾದ ಹಗುರವಾದ ನಿದ್ದೆಯ ಸ್ಥಿತಿಯನ್ನು ತಲುಪುತ್ತದೆ. ಇದು ದಿನವಿಡೀ ಎಚ್ಚರವಾಗಿರುವುದರಿಂದ ಮೆದುಳಿನಲ್ಲಿ ಸಂಗ್ರಹವಾದ ಸ್ಲೀಪ್ ಪ್ರೆಶರ್ (ನಿದ್ದೆಯ ಒತ್ತಡ) ಅನ್ನು ತಾತ್ಕಾಲಿಕವಾಗಿ ಕಡಿಮೆ ಮಾಡುತ್ತದೆ. ನಿದ್ದೆಯ ಅವಧಿ ತುಂಬಾ ಚಿಕ್ಕದಾಗಿರುವುದರಿಂದ ಮೆದುಳು ಗಾಢ ನಿದ್ದೆಯ ಹಂತಕ್ಕೆ ಪ್ರವೇಶಿಸುವ ಮೊದಲೇ ಇದು ಕೊನೆಗೊಳ್ಳುತ್ತದೆ.

ಪರಿಣಾಮವಾಗಿ ನಿದ್ರೆಯಿಂದ ಎದ್ದಾಗ ವ್ಯಕ್ತಿಗೆ ಮಂಪರು ಇಲ್ಲವೇ ಗೊಂದಲದ ಭಾವನೆ ಉಂಟಾಗುವುದಿಲ್ಲ. ಬದಲಾಗಿ ತಾಜಾತನ ಅನುಭವಿಸುತ್ತಾರೆ, ಸ್ಪಷ್ಟವಾಗಿ ಯೋಚಿಸುವ ಸಾಮರ್ಥ್ಯ ಹೊಂದಿರುತ್ತಾರೆ. ಸ್ವಲ್ಪ ಸಮಯದ ನಿದ್ರೆ ಮೆದುಳಿಗೆ ದಿನವಿಡೀ ಸಂಗ್ರಹಿಸಿದ ಮಾಹಿತಿ ಕ್ರೋಢೀಕರಿಸಲು, ವ್ಯವಸ್ಥಿತಗೊಳಿಸಲು ಅವಕಾಶ ನೀಡುತ್ತದೆ.

ಇದರ ಪರಿಣಾಮವಾಗಿ ಕೆಲಸಕ್ಕೆ ಮರಳಿದಾಗ ವ್ಯಕ್ತಿಯ ಸ್ಮರಣಶಕ್ತಿ, ಕಲಿಯುವ ಸಾಮರ್ಥ್ಯ, ಏಕಾಗ್ರತೆಯಲ್ಲಿ ಗಮನಾರ್ಹ ಸುಧಾರಣೆ ಕಂಡುಬರುತ್ತದೆ. ಚಿಕ್ಕ ನಿದ್ರೆಯಿಂದ ಸಂಪೂರ್ಣ ಪ್ರಯೋಜನ ಪಡೆಯಲು, ಸೂಕ್ತ ಯೋಜನೆ ಅತ್ಯಗತ್ಯವಾಗಿದೆ.

ಇಂತಹ ನಿದ್ರೆಯು ಸಾಮಾನ್ಯವಾಗಿ 10ರಿಂದ 20ನಿಮಿಷಗಳವರೆಗೆ ಇರಬೇಕು. ದೇಹಕ್ಕೆ ಎಚ್ಚರ ಹಾಗೂ ಶಕ್ತಿಯನ್ನು ಮರಳಿ ಪಡೆಯಲು ಈ ಅವಧಿ ಸಾಕಾಗುತ್ತದೆ. ಮಧ್ಯಾಹ್ನ 1ರಿಂದ 3ರ ನಡುವಿನ ಸಮಯವು ನಿದ್ರೆಗೆ ಅತ್ಯುತ್ತಮವಾಗಿದೆ.

ಕವನ

ರಾಜ್ಯೋತ್ಸವ
ಕನ್ನಡ ರಾಜ್ಯೋತ್ಸವ
ಮಾಡೋಣ
ಬನ್ನಿರಿ ಎಲ್ಲರೂ
ಆಚರಿಸೋಣ
ನಮ್ಮೆಲ್ಲರಿಗೂ
ಶುಭದಿನಾ
ಹಾಡುತ ನಲಿಯುತ
ಆನಂದಿಸೋಣ
ಎಲ್ಲರೂ ಒಂದೆಡೆ
ಕೂಡೋಣ
ಕನ್ನಡ ಧ್ವಜವನ್ನು
ಹಾರಿಸೋಣ
ಭೇದ ಭಾವ
ಮರೆಯೋಣ
ಒಂದಾಗಿ ಎಲ್ಲರೂ
ನಲಿಯೋಣ
ಕನ್ನಡ ಗೀತೆಯನ್ನು
ಹಾಡೋಣ
ಕನ್ನಡ ವಂದನೆ
ಸಲ್ಲಿಸೋಣ
ಎಲ್ಲರೂ ಒಂದಾಗಿ
ಬಾಳೋಣ
ತಾಯ್ನಾಡಿಗಾಗಿ
ದುಡಿಯೋಣ
ಕನ್ನಡ ರಾಜ್ಯೋತ್ಸವ
ಮಾಡೋಣ
ಬನ್ನಿರಿ ಎಲ್ಲರೂ
ಆಚರಿಸೋಣ

- ವಿ.ಎಂ.ಎಸ್. ಗೋಪಿ
ಲೇಖಕರು
ಬೆಂಗಳೂರು.





ರಾಮಾಯಣ

24. ರಾವಣನು ಪರಾಜಿತನಾಗಿ ಪಟ್ಟಣಕ್ಕೆ ಹಿಂದಿರು

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ಶೈಲೇಂದ್ರತನುಜೆಯೇ ಕೇಳು, ದಶಶಿರನ ಬಾಣಗಳುಗುಳುತ್ತಿದ್ದ ಬೆಂಕಿಯಿಂದ ಇಡೀ ವಾನರಕುಲವೆಲ್ಲ ಕುದಿಯುತ್ತಿರಲು, ತಡವಿಲ್ಲದೆ ಮರುತಸುತನು ಅತಿ ' ವೇಗದಿಂದ ಅಸುರೇಂದನೆಡೆಗೆ ಹೋಗಿ, ''ಹರ ಬ್ರಹ್ಮ ದೇವೇಂದ್ರ ಮುಂತಾದವರಿಂದ ನಿನಗೆ ಮೃತ್ಯುವುಂಟಾಗದಿದ್ದರೂ ನಿನ್ನ ಸಾವು ನರವಾನರರಿಂದ ಸಂಭವಿಸುತ್ತದೆ ಎಂದು ತಿಳಿಯದೆ ಹೋದೆಯಲ್ಲ, ನೀಚ. ಈಗ ನನ್ನ ಒಂದೇ ಬಾಣವು ನಿನ್ನನ್ನು ಕೊಂದು ಕೂಗುವುದು'' ಎಂದು ನುಡಿದ ಮರುತ್ತುತನ ಮಾತನ್ನು ಕೇಳಿ ದಶಶಿರನು ರೋಷದಿಂದ ಗರ್ಜಿಸುತ್ತ, ''ನಿನ್ನ ಮಾತೇನೋ ಚೆನ್ನಾಗಿದೆ. ಈಗ ನನ್ನ ಮುಷ್ಟಿಯಿಂದ ನಿನಗೆ ಬಾರಿಸಿ ನೆಲಕ್ಕೆ ಉರುಳಿಸುತ್ತೇನೆ'' ಎನ್ನುತ್ತ ರಥದಿಂದ ಕೆಳಕ್ಕೆ ದುಮುಕಿದ. ಅದನ್ನು ಕೇಳಿದ ಕಪಿನಾಯಕನು, ''ಮೊದಲು ನನ್ನ ಮುಷ್ಟಿಪ್ರಹಾರದಿಂದ ಉಳಿದುಕೊಂಡರೆ ಆನಂತರ ನಿನ್ನ ಶೌರ್ಯವನ್ನು ತೋರಿಸುವೆಯಂತೆ'' ಎಂದು ರಕ್ಕಸನನ್ನು ಜರೆಯುತ್ತ ಮೂದಲಿಸುತ್ತಿರಲು, ಅತಿರೋಷದಿಂದ ಬಂದು ಧರೆಯೇ ನಡುಗುವಂತೆ ತನ್ನ ಎಡ ಮುಷ್ಟಿಯಿಂದ ಪಂಕ್ತಿಕಂಧರನು ಹೊಡೆಯಲು, ಹನುಮನು ತತ್ತರಿಸಿ ಓಲಾಡತೊಡಗಿದರೂ, ಕ್ಷಣದಲ್ಲಿ ಸಾವರಿಸಿಕೊಂಡು ಕಿನಿಸಿನಿಂದ ರಾವಣನನ್ನು ನೋಡಿದ. ಆನಂತರ, ''ನೀನು ಅಸಮಬಲನಿರಬಹುದು, ಆದರೆ ಈಗ ನನ್ನ ಬಾಹುಬಲದ ರುಚಿಯನ್ನು ತೋರಿಸುತ್ತೇನೆ'' ಎಂದು ತನ್ನ ಹಿಡಿಯಿಂದ ಆ ದೈತ್ಯನ ಎದೆಯ ಮೇಲೆ ಗುದ್ದಿದ; ಅದರಿಂದ ನೆಲದ ಮೇಲೆ ಬಿದ್ದ ಅವನು ಮೂರ್ಛೆ ಹೋದ. ಇದನ್ನು ಕಂಡು ದಾನವರು ಅಂಜನಾಸುತನ ಬಲವನ್ನು ಕಂಡು ಅಚ್ಚರಿಗೊಂಡು ತಮ್ಮಲ್ಲೇ ಮೆಚ್ಚಿಕೊಂಡರು. ಆದರೆ ಅಷ್ಟರಲ್ಲಿ ಮೂರ್ಛೆ ತಿಳಿದೆದ್ದ ರಾವಣೇಂದನು ಮರುತಜನನ್ನು ಕುರಿತು, ''ನೀನು ವೀರ ವಿಕ್ರಾಂತ ಪೌರುಷವುಳ್ಳವನೆಂಬುದು ನಿಜ, ಆದರೆ ನನ್ನ ಬಾಹುಬಲಕ್ಕೆ ನಿನ್ನದು ಸಾಟಿಯಾಗಲಾರದು'' ಎಂದು ಹೀಯಾಳಿಸಿದ. ಆಗ ಕಪಿವೀರನು, ''ನೀನು ಬದುಕುಳಿದು ನನ್ನನ್ನು ಶೂರನೆಂದು ಹೊಗಳುತ್ತಿದ್ದೀಯೆ, ಆದರೆ ನನ್ನ ಕಡೆಯ ಮಹಾಪರಾಕ್ರಮಿಗಳಾದ ರಾಮಲಕ್ಷ್ಮಣ ಸುಗ್ರೀವ ಅಂಗದ ಮುಂತಾದ ನನಗಿಂತಲೂ ಬಲಶಾಲಿಗಳಾದ ವೀರರನ್ನು ಹೇಗೆ ಎದುರಿಸುತ್ತೀಯೆ. ಅವರಿಂದ ನಿನ್ನನ್ನು ಪಾರುಮಾಡಲು ನಾನೇ ನಿನ್ನನ್ನು ಮುಗಿಸಿಬಿಡುತ್ತೇನೆ'' ಎಂದು ಮಹಾಕ್ರೂರ ನುಡಿಗಳಿಂದ ಚುಚ್ಚಿದ. ಮರುತಸುತನು ಈ ಮಾತುಗಳನ್ನಾಡಲು ರೋಷದಿಂದ ಮೇಲೆದ್ದು ಅಸುರನು ಕಣ್ಣುಗಳಲ್ಲಿ ಕಿಡಿಗಳನ್ನು ಸೂಸುತ್ತ ತನ್ನ ಕೈಯನ್ನೆತ್ತಿ ತತ್ತರಿಸಿ ಮೂರ್ಛೆಯಿಂದ ನೆಲಕ್ಕೆ ಬೀಳುವಂತೆ ಗುದ್ದಿದ. ಈ ಘೋರತರವಾದ ಮುಷ್ಟಿಪ್ರಹಾರದಿಂದ ಪವನಸುತನು ಮೈಮರೆತು ಕೆಳಕ್ಕೆ ಬಿದ್ದ ಇದನ್ನು ನೋಡಿದ ರಾವಣನು, ಈ ವೀರನು ಎಚ್ಚರಗೊಂಡ ಬಳಿಕ ಇವನನ್ನು ಭೂಮಿಗೆ ಬಲಿ ಕೊಡುತ್ತೇನೆ'' ಎಂದು ನಿಶ್ಚೈಸಿ ತನ್ನ ರಥವನ್ನೇರಿ ವೇಗದಿಂದ ನೀಲನಿದ್ದ ಕಡೆಗೆ ಧಾವಿಸಿದ ಸರ್ಪಸಮನಾಗಿ ಭಯಂಕರವಾದ ಮರ್ಮಭೇದಕ ಶರಗಳಿಂದ ಈ ಕಪಿಕುಲ ಸೇನಾನಿಯನ್ನು ಬಗ್ಗು ಬಡಿಯಲು ರಾವಣನು ನುಗ್ಗಿ ಬರಲು, ಕೋಪಾನಲನೇತ್ರನಾದ ನೀಲನು ಒಂದು ದೊಡ್ಡ ಬೆಟ್ಟವನ್ನು ಹಿಡಿದು ತಂದು ಬೊಬ್ಬಿಡುತ್ತ ಅಸುರನಾಯಕನ ಮೇಲೆ ಬೀಸಿ ಒಗೆಯಲು, ರಾವಣನು ನಗುತ್ತ ಅದನ್ನು ಇಕ್ಕಡಿಗೈದ. ಅಷ್ಟರಲ್ಲಿ ಎಚ್ಚರಗೊಂಡ ಹನುಮನು ಎದುರಿನಲ್ಲಿ ದಾನವಜನಪತಿಯನ್ನು ಕಾಣದೆ ಎಡಬಲಗಳಲ್ಲಿ ನೋಡಿ ದೂರಕ್ಕೆ ನೋಟವನ್ನು ಬೀರಿದಾಗ, ಅಲ್ಲಿ ದಾನವೇಶ್ವರನು ನೀಲನೊಂದಿಗೆ ಸೆಣಸುತ್ತಿದ್ದುದನ್ನು ಕಂಡು ಕೋಪಾವಿಷ್ಟನಾದ. ನನ್ನ ಜೊತೆ ಹೋರಾಡುವುದನ್ನು ಬಿಟ್ಟು ಬೇಕಾದಂತೆ ಓಡಾಡುವ ಮೂರ ಇವನು' ಎಂದು ರಾವಣನ್ನು ಕೆಣಕಲು 'ಅವನಿದ್ದ ಜಾಗಕ್ಕೆ ಹೋದ. ಮಹಾಪರಾಕ್ರಮಿಯಾದ ರಾವಣನನ ಹೋರಾಟವನ್ನು ನೋಡುತ್ತ ಮರುತ್ತುಸನು ಬರುತ್ತಿರಲು, ಇತ್ತ ದಾನವೇಂದ್ರನು ನೀಲನೊಡನೆ ತನ್ನ ಪೌರುಷವನ್ನು ತೋರುತ್ತಿದ್ದ. ವಾನರಯೂಥನು ಶೈಲವೊಂದನ್ನು ತಂದು ಎಸೆಯಲು ಅದನ್ನು ಬಾಣಗಳಿಂದ ಕತ್ತರಿಸಿದ, ಅದರಿಂದ ಕೋಪಗೊಂಡ ನೀಲನು ಒಂದು ದೊಡ್ಡಮರವನ್ನು ಕಿತ್ತು ಎತ್ತಿ ಹೊಡೆದ. ತನ್ನ ಕಡೆ ಬರುತ್ತಿರುವ ಮರವನ್ನು ತನ್ನೊಂದು ಬಾಣದಿಂದ ತುಂಡು ತುಂಡು ಮಾಡಿ ಅವನ ಮೇಲೆ ಅನೇಕ ಬಾಣಗಳನ್ನು ಸುರಿಸಿದ. ಇದರಿಂದ ಕೋಪಗೊಂಡ ಅಗ್ನಿಸುತನು ಮರಮೊರಡಿಗಳ ರಾಶಿಯನ್ನೇ ಸುರಿಸಿ ರಾವಣನು ಅಲ್ಲಿ ನಿಲ್ಲದ ಹಾಗೆ ಮಾಡಿದ.

ಮುಂದುವರೆಯುವುದು

ಕನ್ನಡಿಗರ ಉದ್ಯೋಗದ ಕನಸಿಗೆ ಡಿಜಿಟಲ್ ಆಸರೆ: 'ಕನ್ನಡ ರೆಫರಲ್ ಕಮ್ಯುನಿಟಿ' ಅಧಿಕೃತ ಆಪ್ ಹಾಗೂ ವೆಬ್‌ಸೈಟ್‌ಗೆ ಚಾಲನೆ.

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಉದ್ಯೋಗ ಹುಡುಕುತ್ತಿರುವ ಯುವಜನತೆಗೆ ಕಾರ್ಪೊರೇಟ್ ವಲಯದಲ್ಲಿ ಸುಲಭವಾಗಿ ಅವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ ನವೆಂಬರ್ 1ರ ಕನ್ನಡ ರಾಜ್ಯೋತ್ಸವದಂದು ಮಹತ್ವದ ಮೈಲಿಗಲ್ಲೊಂದನ್ನು ಸ್ಥಾಪಿಸಲಾಗಿದೆ.

ಕನ್ನಡ ರೆಫರಲ್ ಕಮ್ಯುನಿಟಿ ಅಧಿಕೃತ ವೆಬ್‌ಸೈಟ್ ಮತ್ತು ಮೊಬೈಲ್ ಅಪ್ಲಿಕೇಶನ್ ಅನ್ನು ಇಂದು ಬೆಂಗಳೂರಿನ ಹೆಚ್.ಎಸ್.ಆರ್ ಲೇಔಟ್‌ನಲ್ಲಿ ನಡೆದ ಬೃಹತ್ ಆಫ್‌ಲೈನ್ ಸಮಾವೇಶದಲ್ಲಿ ಲೋಕಾರ್ಪಣೆಗೊಳಿಸಲಾಯಿತು.ಈ ನೂತನ ಡಿಜಿಟಲ್ ವೇದಿಕೆಯು ಮಾಹಿತಿ ತಂತ್ರಜ್ಞಾನ ಮತ್ತು ಐಟಿಯೇತರ ಕ್ಷೇತ್ರಗಳಲ್ಲಿ ಕೆಲಸ ಹುಡುಕುತ್ತಿರುವ ಕನ್ನಡದ ಅರ್ಹ ಅಭ್ಯರ್ಥಿಗಳನ್ನು, ಈಗಾಗಲೇ ವಿವಿಧ



ಪ್ರತಿಷ್ಠಿತ ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕನ್ನಡಿಗರೊಂದಿಗೆ ನೇರವಾಗಿ ಬೆಸೆಯುತ್ತದೆ. ಉದ್ಯೋಗದಲ್ಲಿರುವ ವೃತ್ತಿಪರರು ತಮ್ಮ ಸಂಸ್ಥೆಯಲ್ಲಿರುವ ಖಾಲಿ ಹುದ್ದೆಗಳನ್ನು ಈ ಪ್ಲಾಟ್‌ಫಾರ್ಮ್‌ನಲ್ಲಿ ಪೋಸ್ಟ್ ಮಾಡುವ ಮೂಲಕ ಕನ್ನಡದ ಪ್ರತಿಭೆಗಳಿಗೆ ಆಂತರಿಕ ಕಂಪನಿ ರೆಫರಲ್ ನೀಡಲು ಇದು ನೆರವಾಗಲಿದೆ.

ಈ ವೇದಿಕೆಯ ಪ್ರಮುಖ ವೈಶಿಷ್ಟ್ಯಗಳು:

ನೇರ ಕಾರ್ಪೊರೇಟ್ ರೆಫರಲ್: ಮಲ್ಟಿನ್ಯಾಷನಲ್ ಕಂಪನಿಗಳಲ್ಲಿರುವ ಕನ್ನಡಿಗರಿಂದ ನೇರ ಉದ್ಯೋಗ ರೆಫರಲ್ ಪಡೆಯುವ ಸೌಲಭ್ಯ. ಸುಧಾರಿತ ಫಿಲ್ಟರಿಂಗ್ ವ್ಯವಸ್ಥೆ: ಕೌಶಲ್ಯ, ಅನುಭವ ಮತ್ತು ಕೆಲಸದ ಸ್ಥಳಕ್ಕೆ ತಕ್ಕಂತೆ ಸುಲಭವಾಗಿ ಉದ್ಯೋಗ ಹುಡುಕುವ ತಂತ್ರಜ್ಞಾನ.

ಲೀಗಲ್ ಕಮ್ಯುನಿಟಿ ವಿಂಗ್: ಕಾರ್ಪೊರೇಟ್ ವಲಯದ ಉದ್ಯೋಗಿಗಳಿಗೆ ಉದ್ಯೋಗ ಹಕ್ಕುಗಳು ಮತ್ತು ಕಾರ್ಮಿಕ ಕಾನೂನುಗಳ ಕುರಿತು ಜಾಗೃತಿ ಹಾಗೂ ಉಚಿತ ಮಾರ್ಗದರ್ಶನ ನೀಡುವ ಪ್ರತ್ಯೇಕ ವಿಭಾಗ.

ವೃತ್ತಿಪರ ನೆಟ್‌ವರ್ಕಿಂಗ್: ಉದ್ಯೋಗಾಕಾಂಕ್ಷಿಗಳಿಗೆ ರೆಸ್ಯೂಮೆ ಬಿಲ್ಡಿಂಗ್ ಹಾಗೂ ಇಂಟರ್ವ್ಯೂ ಎದುರಿಸಲು ನುರಿತ ತಜ್ಞರಿಂದ ನಿರಂತರ ತರಬೇತಿ ಮತ್ತು ಮಾರ್ಗದರ್ಶನ.ನಮ್ಮ ಕನ್ನಡದ ಯುವಕರಲ್ಲಿ ಅದ್ಭುತ ಪ್ರತಿಭೆಯಿದೆ, ಆದರೆ ಕಾರ್ಪೊರೇಟ್ ಜಗತ್ತಿನ ಒಳಗಿರುವ ಸೂಕ್ತ ಸಂಪರ್ಕಗಳು ಇಲ್ಲದ ಕಾರಣ ಅನೇಕರು ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ.

ಜಾಗತಿಕ ಕಂಪನಿಗಳಲ್ಲಿ ಉನ್ನತ ಹುದ್ದೆಗಳಲ್ಲಿರುವ ಸಾವಿರಾರು ಕನ್ನಡಿಗರು ನಮ್ಮ ಯುವಕರಿಗೆ ಸಹಾಯ ಮಾಡಲು ಸಿದ್ಧರಿದ್ದಾರೆ. ಅವರಿಬ್ಬರನ್ನೂ ಬೆಸೆಯುವ ಡಿಜಿಟಲ್ ಸೇತುವೆಯೇ ಈ ಕನ್ನಡ ರೆಫರಲ್ ಕಮ್ಯುನಿಟಿ. ಈ ಅಧಿಕೃತ ವೆಬ್‌ಸೈಟ್ ಮತ್ತು ಆಪ್ ಮೂಲಕ ಲಕ್ಷಾಂತರ ಕನ್ನಡಿಗರು ಮುಂದಿನ ದಿನಗಳಲ್ಲಿ ಉದ್ಯೋಗ ಪಡೆದು ಆರ್ಥಿಕವಾಗಿ ಸಬಲರಾಗಬಹುದುಶಂಕರ್ ಎಸ್ ಎನ್, ನಿತಿನ್ ಎನ್ ಜೆ, ಗುರುಪ್ರಸಾದ್, ಚಂದನ್ ಗೌಡ ಮುಂತಾದ ಗಣ್ಯರು ಈ ವೆಬ್ ಸೈಟ್ ಬಿಡುಗಡೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಖಾಲಿ ಹೊಟ್ಟೆಯಲ್ಲಿ ಅಲೋವೆರಾ ಜ್ಯೂಸ್ ಕುಡಿಯಬಹುದೇ? ಪ್ರಯೋಜನ

ಬೆಳಿಗ್ಗೆ ಎದ್ದ ತಕ್ಷಣ ಖಾಲಿ ಹೊಟ್ಟೆಯಲ್ಲಿ ಅಲೋವೆರಾ ಜ್ಯೂಸ್ ಕುಡಿಯುವುದರಿಂದ ಆರೋಗ್ಯಕ್ಕೆ ಹಲವು ಪ್ರಯೋಜನಗಳಿವೆ ಎಂದು ಅನೇಕರು ನಂಬುತ್ತಾರೆ. ಲೋಳೆರಸದಲ್ಲಿ ಕೆಲವು ಉಪಯುಕ್ತ ಸಂಯುಕ್ತಗಳಿದ್ದು, ಇದನ್ನು ನಿಯಮಿತವಾಗಿ ಕುಡಿಯುವುದರಿಂದ ಅನೇಕ ರೀತಿಯ ಆರೋಗ್ಯ ಸಮಸ್ಯೆಗಳಿಂದ ಪರಿಹಾರ ಕಂಡುಕೊಳ್ಳಬಹುದು.

ತೂಕ ಇಳಿಸುವುದು, ಚರ್ಮದ ಕಾಂತಿ ಹೆಚ್ಚಿಸುವುದು ಮತ್ತು ಜೀರ್ಣಕ್ರಿಯೆ ಸುಧಾರಿಸಲು ಇಚ್ಛಿಸುವವರು ವೈದ್ಯರ ಸಲಹೆ ಪಡೆದು ಇದರ ರಸದ ಸೇವನೆ ಮಾಡಬಹುದು. ಹಾಗಾದರೆ ಇದನ್ನು ಕುಡಿಯುವುದರಿಂದ ಸಿಗುವ ಪ್ರಯೋಜನಗಳೇನು, ಯಾವ ರೀತಿ ಮುನ್ನೆಚ್ಚರಿಕೆ ವಹಿಸಬೇಕು ಎಂಬುದನ್ನು ಸ್ಟೋರಿ ಮೂಲಕ ತಿಳಿದುಕೊಳ್ಳಿ. ಅಲೋವೆರಾದಲ್ಲಿ ಉತ್ಕರ್ಷಣ ನಿರೋಧಕ ಗುಣಗಳನ್ನು ಹೊಂದಿರುವ ಕೆಲವು ಸಂಯುಕ್ತಗಳಿವೆ.

ಇವುಗಳ ಆರೋಗ್ಯ ಪ್ರಯೋಜನಗಳ ಕುರಿತು ಸಂಶೋಧನೆಗಳು ನಡೆಯುತ್ತಿವೆ. ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಅಲೋವೆರಾ ಜ್ಯೂಸ್ ಕುಡಿಯುವುದರಿಂದ ಇದು ಮಲವಿಸರ್ಜನೆಗೆ ಸಹಾಯ ಮಾಡಬಹುದು.

ಇದರ ರಸದಲ್ಲಿ ಅಲೋಯಿನ್ ಎಂಬ ಪದಾರ್ಥವಿರಬಹುದು. ಇದು ಅತಿಸಾರ ಮತ್ತು ಹೊಟ್ಟೆನೋವಿಗೆ ಕಾರಣವಾಗಬಹುದು. ಆದ್ದರಿಂದ ಮಲಬದ್ಧತೆ ನಿವಾರಣೆಗಾಗಿ ವೈದ್ಯರ ಸಲಹೆಯಿಲ್ಲದೆ ಬಳಸುವುದು ಸೂಕ್ತವಲ್ಲ.

ಅಲೋವೆರಾ ಜ್ಯೂಸ್ ಕುಡಿಯುವುದರಿಂದ ದೇಹದಲ್ಲಿನ ಕೊಬ್ಬು ಕರಗುತ್ತದೆ ಅಥವಾ ರಕ್ತ ಶುದ್ಧಿಯಾಗುತ್ತದೆ ಎಂಬ ಹೇಳಿಕೆಗಳಿಗೆ ಬಲವಾದ ವೈಜ್ಞಾನಿಕ ಪುರಾವೆಗಳಿಲ್ಲ.

ತೂಕ ನಿಯಂತ್ರಣಕ್ಕೆ ಸಮತೋಲಿತ ಆಹಾರ, ನಿಯಮಿತ ವ್ಯಾಯಾಮ ಮತ್ತು ಸಾಕಷ್ಟು ನಿದ್ರೆ ಮುಖ್ಯವಾಗಿವೆ. ಈ ಜ್ಯೂಸ್ ಕುಡಿಯುವುದರಿಂದ ಕೆಲವರಿಗೆ ಹೊಟ್ಟೆನೋವು, ಹೊಟ್ಟೆಯಲ್ಲಿ ಸೆಳೆತ ಮತ್ತು ಅತಿಸಾರ ಉಂಟಾಗಬಹುದು. ಅಲೋಯಿನ್ ಹೊಂದಿರುವ ರಸವನ್ನು ಹೆಚ್ಚಿನ ಪ್ರಮಾಣದಲ್ಲಿ ಸೇವಿಸಿದರೆ ದೇಹದಲ್ಲಿ ನೀರು ಮತ್ತು ಅಗತ್ಯ ಲವಣಗಳ




ಕೊರತೆ ಉಂಟಾಗುವ ಅಪಾಯವಿದೆ. ಇದು ರಕ್ತದಲ್ಲಿನ ಸಕ್ಕರೆಯ ಮಟ್ಟದ ಮೇಲೂ ಪರಿಣಾಮ ಬೀರಬಹುದು. ಮಧುಮೇಹಕ್ಕೆ ಔಷಧಿ ತೆಗೆದುಕೊಳ್ಳುವವರು, ಮೂತ್ರವರ್ಧಕ ಔಷಧಿಗಳನ್ನು ಬಳಸುವವರು ಹಾಗೂ ಮೂತ್ರಪಿಂಡ ಅಥವಾ ಕರುಳಿನ ಸಮಸ್ಯೆ ಇರುವವರು ವೈದ್ಯರ ಸಲಹೆಯಿಲ್ಲದೆ ಇದನ್ನು ಸೇವಿಸಬಾರದು.

ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರು ಇದನ್ನು ಕುಡಿಯುವುದನ್ನು ತಪ್ಪಿಸುವುದು ಉತ್ತಮ. ಮನೆಯಲ್ಲಿರುವ ಅಲೋವೆರಾವನ್ನು ಕತ್ತರಿಸಿ ನೇರವಾಗಿ ರಸ ಕುಡಿಯುವುದಕ್ಕಿಂತ, ಅಲೋಯಿನ್ ತೆಗೆದುಹಾಕಿರುವುದಾಗಿ ಸ್ಪಷ್ಟವಾಗಿ ನಮೂದಿಸಿರುವ ಮತ್ತು ಗುಣಮಟ್ಟದ ಮಾನದಂಡಗಳನ್ನು ಪಾಲಿಸುವ ಉತ್ಪನ್ನಗಳನ್ನು ಆಯ್ಕೆ ಮಾಡುವುದು ಉತ್ತಮ. ಮನೆಯಲ್ಲಿ ತಯಾರಿಸುವಾಗ ಹಳದಿ ಬಣ್ಣದ ರಸವನ್ನು ಸಂಪೂರ್ಣವಾಗಿ ತೆಗೆದುಹಾಕುವುದು ಮುಖ್ಯ. ಆದರೂ, ತೊಳೆದ ಮಾತ್ರಕ್ಕೆ ಹಾನಿಕಾರಕ ಪದಾರ್ಥಗಳು ಸಂಪೂರ್ಣವಾಗಿ ನಿವಾರಣೆಯಾಗುತ್ತವೆ ಎಂದು ಹೇಳಲಾಗುವುದಿಲ್ಲ.

ಮ್ಯಾಕ್ಯುಲರ್ ಡಿಜೆನರೇಶನ್ ಕಣ್ಣಿನ ಕಾಯಿಲೆ ಅಪಾಯ ಹೆಚ್ಚಾಗುವುದೇಕೆ? ಈ ವಿಟಮಿನ್ ಕೊರತೆಯಾದರೆ ತೊಂದರೆ: ವೈದ್ಯರ ಎಚ್ಚರಿಕೆ

ದೇಹದ ಆರೋಗ್ಯವನ್ನು ಕಾಪಾಡಲು ಪ್ರತಿದಿನ ವಿವಿಧ ರೀತಿಯ ವಿಟಮಿನ್‌ಗಳು ಖನಿಜಗಳ ಅಗತ್ಯವಿರುತ್ತದೆ. ಇದರಲ್ಲಿ ವಿಟಮಿನ್ ಡಿ ಪ್ರಮುಖ ಸ್ಥಾನದಲ್ಲಿ ಬರುತ್ತದೆ. ಒಟ್ಟಾರೆ ಆರೋಗ್ಯ ಕಾಪಾಡುವಲ್ಲಿ ಕೂಡ ನಿರ್ಣಾಯಕ ಪಾತ್ರವಹಿಸುತ್ತಾರೆ. ಸಾಮಾನ್ಯವಾಗಿ ವಿಟಮಿನ್ ಡಿ ಎಂದರೆ ಮೂಳೆಗಳನ್ನು ಬಲಪಡಿಸುವುದು ಹಾಗೂ ರೋಗನಿರೋಧಕ ಶಕ್ತಿ ಹೆಚ್ಚಿಸುವುದಕ್ಕೆ ಸಂಬಂಧಿಸಿದೆ. ಉತ್ತಮ ಕಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳಲು ವಿಟಮಿನ್ ಡಿ ಅತ್ಯಗತ್ಯವಾಗಿದೆ. ದೇಹದಲ್ಲಿ ವಿಟಮಿನ್ ಡಿ ಕೊರತೆಯು ಕಣ್ಣಿಗೆ ಸಂಬಂಧಿಸಿದ ಸಮಸ್ಯೆಗಳು ಉಂಟಾಗುವ ಅಪಾಯ ಹೆಚ್ಚಿಸುತ್ತದೆ ಎಂದು ಹಲವು ಅಧ್ಯಯನಗಳು ತಿಳಿಸುತ್ತವೆ. ಪ್ರಮುಖವಾಗಿ ಕಣ್ಣಿಗೆ ಸಂಬಂಧಿಸಿದಂತೆ ಮ್ಯಾಕ್ಯುಲರ್ ಡಿಜೆನರೇಶನ್‌ನಂತಹ ಗಂಭೀರ ಸಮಸ್ಯೆಗಳ ಅಪಾಯ ಹೆಚ್ಚಿಸಬಹುದು.

ಕಣ್ಣುಗಳಿಗೆ ವಿಟಮಿನ್ ಡಿ ಏಕೆ ಮುಖ್ಯವಾಗಿದೆ, ಇದರ ಕೊರತೆಯಿಂದ ಉಂಟಾಗಬಹುದಾದ ಪರಿಣಾಮಗಳೇನು ಎಂಬುದನ್ನು ಮಾಹಿತಿಯನ್ನು



ತಿಳಿಯೋಣ. ವಿಟಮಿನ್ ಡಿ ದೇಹದಲ್ಲಿ ಹಲವಾರು ಕಾರ್ಯಗಳನ್ನು ನಿರ್ವಹಿಸುತ್ತದೆ. ಕ್ಯಾಲ್ಸಿಯಂ ಹೀರಿಕೊಳ್ಳುವಿಕೆಗೆ ಸಹಾಯ ಮಾಡುವುದರಿಂದ ಹಿಡಿದು, ಮೂಳೆಗಳನ್ನು ಬಲಪಡಿಸುವುದು ಹಾಗೂ ರೋಗನಿರೋಧಕ ವ್ಯವಸ್ಥೆ ಬೆಂಬಲಿಸುವವರೆಗೆ ಕೆಲಸ ಮಾಡುತ್ತದೆ. ವಿಟಮಿನ್ ಡಿಯ ವಿಶೇಷತೆಯೆಂದರೆ ಸೂರ್ಯನ ಬೆಳಕಿಗೆ ಒಡ್ಡಿಕೊಂಡರೆ ಚರ್ಮವು ಇದನ್ನು ನೈಸರ್ಗಿಕವಾಗಿ ಉತ್ಪಾದಿಸಬಲ್ಲದು. ಜೊತೆಗೆ ಕೆಲವು ನಿರ್ದಿಷ್ಟ ಆಹಾರ ಮೂಲಗಳ ಮೂಲಕ ಇಲ್ಲವೇ ವೈದ್ಯರ ಸಲಹೆಯ ಮೇರೆಗೆ ತೆಗೆದುಕೊಳ್ಳುವ ಪೂರಕಗಳ ಮೂಲಕವೂ ಪಡೆಯಬಹುದು.

ವೈದ್ಯರು ತಿಳಿಸುವ ಪ್ರಕಾರ, ಕಣ್ಣಿನ ಆರೋಗ್ಯ ಕಾಪಾಡಿಕೊಳ್ಳಲು ವಿಟಮಿನ್ ಡಿ ಅತ್ಯಂತ ಅವಶ್ಯವಾಗಿದೆ.

ಇದು ದೇಹದಲ್ಲಿನ ಉರಿಯೂತ ನಿಯಂತ್ರಿಸಲು ಸಹಾಯ ಮಾಡುತ್ತದೆ. ಆಕ್ಸಿಡೇಟಿವ್ ಒತ್ತಡದಿಂದ ಕೋಶಗಳಿಗೆ ಹಾನಿಯಾಗದಂತೆ ರಕ್ಷಣೆ ಮಾಡುತ್ತದೆ. ರೆಟಿನಾ ಹಾಗೂ ಕೋಶಗಳನ್ನು ಆರೋಗ್ಯವಾಗಿಡಲು ತುಂಬಾ ಅವಶ್ಯವಿರುವ ಪೋಷಕಾಂಶವಾಗಿದೆ. ಮ್ಯಾಕ್ಯುಲರ್ ಡಿಜೆನರೇಶನ್ ಎನ್ನುವುದು ಕಣ್ಣಿನ ಒಂದು ಸ್ಥಿತಿಯಾಗಿದೆ. ರೆಟಿನಾದ ಮಧ್ಯಭಾಗವಾದ 'ಮ್ಯಾಕ್ಯುಲಾ' ಅನ್ನು

ಉದಯ ವಾಹಿನಿ
ಪ್ರಾದೇಶಿಕ
ಸೋಮವಾರ 02 ನವೆಂಬರ್ 2026

ನಗರದಲ್ಲಿ 71 ನೇ ಕರ್ನಾಟಕ ರಾಜ್ಯೋತ್ಸವ ಸಂಭ್ರಮದಿಂದ ಆಚರಣೆ

ನಾಡಿನ ನೆಲ,ಜಲ,ಭಾಷೆ ಹಾಗೂ ಸಂಸ್ಕೃತಿಯ ಅಸ್ತಿತ್ವ ಉಳಿಸಿ ಬೆಳೆಸಿ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್

• **ಉದಯವಾಹಿನಿ, ಯಾದಗಿರಿ:**

ಕರ್ನಾಟಕ ರಾಜ್ಯ ಶಾಂತಿ, ಸೌಹಾರ್ದ ಹಾಗೂ ನೆಮ್ಮದಿಯಿಂದ ಬೆಳಗಬೇಕು.ಈ ನಾಡಿನ ನೆಲ,ಜಲ,ಭಾಷೆ ಹಾಗೂ ಸಂಸ್ಕೃತಿಯ ಅಸ್ತಿತ್ವವನ್ನು ಉಳಿಸಿ ಬೆಳೆಸಬೇಕೆಂದು ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಖಾತೆ ಸಚಿವರಾದ ಶ್ರೀ ಶರಣಪ್ರಕಾಶ್ ಪಾಟೀಲ್ ಕರೆ ನೀಡಿದರು.ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು 71 ನೇ ಕರ್ನಾಟಕ ರಾಜ್ಯೋತ್ಸವ ದಿನಾಚರಣೆ ಅಂಗವಾಗಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ವಿವಿಧ ಕವಾಯತು ಪಡೆಗಳಿಂದ ಗೌರವ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

ನಮ್ಮ ನಾಡಿನ ನೆಲ,ಜಲ, ಸಂಸ್ಕೃತಿ ಹಾಗೂ ಕನ್ನಡ ಭಾಷೆಯ ಉಳಿವಿಗಾಗಿ ಶ್ರಮಿಸಿ, ಸಾಂಸ್ಕೃತಿಕ ಕೊಡುಗೆ ನೀಡಿದ ಮಹಾನ್ ಚೇತನರಿಗೆ ನಮಿಸುವುದಾಗಿ ತಿಳಿಸಿದ ಅವರು, ಕರ್ನಾಟಕದ ಏಕೀಕರಣ,ನೆಲ,ಜಲ,ಭಾಷೆ ಸಂರಕ್ಷಣೆಗೆ ಕೊಡುಗೆ ನೀಡಿರುವವರನ್ನು ಈ ಶುಭ ಸಂದರ್ಭದಲ್ಲಿ ಸ್ಮರಿಸುವದಾಗಿ ತಿಳಿಸಿದರು.

ಕನ್ನಡ ಪ್ರದೇಶಗಳನ್ನು ಒಗ್ಗೂಡಿಸಿ ಏಕೀಕೃತ ಕರ್ನಾಟಕ ರಚನೆಯ ಹೋರಾಟದ ಫಲವಾಗಿ 1956 ರ ನವೆಂಬರ್ 1 ರಂದು ಏಕೀಕೃತ ಮೈಸೂರು ರಾಜ್ಯ ರಚನೆ ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ.ರಾಜ್ಯ ಸರ್ಕಾರ ಪಂಚ ಗ್ಯಾರಂಟಿ ಹಾಗೂ ಜನಪರ ಯೋಜನೆಗಳನ್ನು ಜಾರಿಗೊಳಿಸಿ ಇವುಗಳ ಲಾಭ ಜನರ ಮನೆಬಾಗಿಲಿಗೆ ತಲುಪಿಸುತ್ತಿದೆ. ಜಿಲ್ಲೆಯಲ್ಲಿ ಗೃಹ ಜ್ಯೋತಿ ಯೋಜನೆಯಡಿ 108.23 ಕೋ.ರೂ ಗಳ ಸಹಾಯಧನ ಒದಗಿಸಿದೆ. 1.52 ಲ. ಫಲಾನುಭವಿಗಳ ಮರುಪರಿಶೀಲನೆ ಕಾರ್ಯ ಪೂರ್ಣಗೊಳಿಸಲಾಗಿದೆ. ಅನ್ನಭಾಗ್ಯ ಯೋಜನೆಯಡಿ 257.33 ಕೋ.ರೂ ಗಳನ್ನು ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಗಳ ಖಾತೆಗೆ ಜಮೆ ಮಾಡಲಾಗಿದೆ. ಶಕ್ತಿ ಯೋಜನೆಯಡಿ 9.16 ಕೋ.ಜನ ಮಹಿಳಾ ಪ್ರಯಾಣಿಕರು ಯಾದಗಿರಿ ವಿಭಾಗದ ವಾಹನಗಳಲ್ಲಿ ಪ್ರಯಾಣಿಸಿದ್ದು,ಪ್ರಯಾಣದ ಮೊತ್ತ 332.26ಕೋ.ರೂ ಗಳಷ್ಟಾಗಿದೆ. ಗೃಹ ಲಕ್ಷ್ಮೀ ಯೋಜನೆಯಡಿ 1589.38 ಕೋ.ರೂ ವೆಚ್ಚ ಭರಿಸಲಾಗಿದೆ. ಯುವನಿಧಿ ಯೋಜನೆಯಡಿ 40.17 ಕೋ.ರೂ ಪದವಿ ಹಾಗೂ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಜಮೆ ಮಾಡಲಾಗಿದೆ ಎಂದು ಹೇಳಿದರು.

ಕನ್ನಡ ಭಾಷೆಯ ಉಳಿವಿಗಾಗಿ ಶ್ರಮಿಸಿ,

ರಾಜ್ಯ ಸರ್ಕಾರ ಪ್ರಾದೇಶಿಕ ಅಸಮಾನತೆ ನಿವಾರಣೆಗೆ ಸಂವಿಧಾನದ 371(ಜೆ) ಕಲಂ ರನ್ವಯ ವಿಶೇಷ ಸ್ಥಾನಮಾನ ನೀಡಿ, ಈವರೆಗೆ ಲಕ್ಷಾಂತರ ನಿರುದ್ಯೋಗಿಗಳಿಗೆ ಉದ್ಯೋಗ ಅವಕಾಶ ಕಲ್ಪಿಸಿದೆ. ಪ್ರತಿ ಜಿಲ್ಲೆಯಲ್ಲಿ ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆ, ಟ್ರಾಮಾ ಸೆಂಟರ್, ಕ್ಯಾನ್ಸರ್ ಆಸ್ಪತ್ರೆ ವೈದ್ಯಕೀಯ ಕಾಲೇಜು ಗಳನ್ನು ಸ್ಥಾಪಿಸಲಾಗುತ್ತಿದೆ. ರಾಷ್ಟ್ರದಲ್ಲಿಯೇ ರಾಜ್ಯದ ವೈದ್ಯಕೀಯ ವ್ಯವಸ್ಥೆ ಮುಂಚೂಣಿಯಲ್ಲಿದೆ.

ಕಾರ್ಯಕ್ರಮದಲ್ಲಿ ಸಚಿವರು ನೂತನ ಗ್ರಾಮಾನುಭವ ಕಾರ್ಯಕ್ರಮ ಕ್ಕೆ ಚಾಲನೆ ನೀಡಿದರು. ನಗರ ಶಾಸಕ ಶ್ರೀ ಚೆನ್ನಾರೆಡ್ಡಿ ಪಾಟೀಲ್ ತುನ್ನೂರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್, ಸ್ಯಾಮ್ಸನ್ ಮಾಳಿಕೇರಿ, ಜಿಲ್ಲಾಧಿಕಾರಿ ಶ್ರೀ ರಾಹುಲ್ ತುಕಾರಾಮ ಪಾಂಡ್ವೆ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ಪೃಥ್ವಿಕ್ ಶಂಕರ್,ಅಪರ್ ಜಿಲ್ಲಾಧಿಕಾರಿ ಶ್ರೀ ರಮೇಶ್ ಕೋಲಾರ, ಶ್ರೀ ಸಿದ್ದಪ್ಪ ಹೊಟ್ಟಿ,ಇತರರು ಉಪಸ್ಥಿತರಿದ್ದರು. ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು, ಸರ್ಕಾರದ ವಿವಿಧ ಇಲಾಖೆಗಳ ಸ್ತಬ್ದ ಚಿತ್ರಗಳು ಗಮನ ಸೆಳೆದವು.ಅತ್ಯುತ್ತಮ ಗಣೇಶ ಸ್ಥಾಪಿಸಿದ್ದ ಮಂಡಳಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.


ಉದಯವಾಹಿನಿ ಚಿತ್ರ

ಹಿಂದುಳಿದ ವರ್ಗಗಳ ಧೀಮಂತ ನಾಯಕ ಮಾಜಿ ಮುಖ್ಯಮಂತ್ರಿ ದಿ.ಡಿ.ದೇವರಾಜ್ ಅರಸು ಅವರು 1973ರ ನವೆಂಬರ್ 1 ರಂದು ಈ ರಾಜ್ಯಕ್ಕೆ ಕರ್ನಾಟಕವೆಂದು ಮರು ನಾಮಕರಣ ಮಾಡಿದ್ದು, ಅಂದಿನಿಂದ ರಾಜ್ಯ ಹಲವು ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸುತ್ತಿದೆ ಎಂದು ಹೇಳಿದರು.
-ಜೀವನೋಪಾಯ ಖಾತೆ ಸಚಿವ ಶ್ರೀ ಶರಣಪ್ರಕಾಶ್ ಪಾಟೀಲ್

★ಯುವ ಉದ್ಯೋಗ ಸೇತು ಕಾರ್ಯಕ್ರಮ ಕ್ಕೆ ಚಾಲನೆ★

ಯುವಜನಾಂಗಕ್ಕೆ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗವಕಾಶ ಕಲ್ಪಿಸಲು ಶೀಘ್ರವೇ ಬೆಂಗಳೂರಲ್ಲಿ ಸ್ಕಿಲ್ ಸಮಿಟ್ ದಲ್ಲಿ ಈ ಯೋಜನೆಗೆ ಚಾಲನೆ ನೀಡಲಾಗುತ್ತದೆ. ರಾಜ್ಯದ ಯುವಕರು ಇದರ ಸದುಪಯೋಗ ಪಡೆಯಲು ಅವರು ತಿಳಿಸಿದರು.

★ಗುಣಮಟ್ಟದ ಶಿಕ್ಷಣ ಕ್ಕೆ ಒತ್ತು★

ಶೈಕ್ಷಣಿಕ ವ್ಯವಸ್ಥೆ ಸುಧಾರಣೆಗೆ ಸರ್ಕಾರ ಹಲವು ಕ್ರಮ ಕೈಗೊಂಡಿದೆ. ಎಲ್ ಕೆ ಜಿ ಯಿಂದ ಪಿ.ಯು ವರೆಗೆ ಇಂಗ್ಲಿಷ್ ಮಾಧ್ಯಮ ಕಲಿಕೆಗೆ ಅವಕಾಶ ಕಲ್ಪಿಸುತ್ತಿದೆ. ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು 8000 ಕೋ.ರೂ ವೆಚ್ಚದ ಯೋಜನೆ ರೂಪಿಸಲು ಮಾನ್ಯ ಮುಖ್ಯಮಂತ್ರಿಗಳು ಸದಾಶಯ ಹೊಂದಿದ್ದಾರೆ ಎಂದು ಹೇಳಿದರು.

ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಗೊಂಡ-ಕುರುಬ ಸಮಾಜಕ್ಕೆ ಆದ್ಯತೆ ನೀಡಿ

• **ಉದಯವಾಹಿನಿ,ಚಿಂಚೋಳಿ**

ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ತಾಲ್ಲೂಕಿನ ಕುರುಬ ಗೊಂಡ ಸಮಾಜದ ಮುಖಂಡರಿಗೆ ಬಿಜೆಪಿ ಕಾಂಗ್ರೆಸ್ ಜೆಡಿಎಸ್ ಪಕ್ಷಗಳಿಂದ ಕನಿಷ್ಠ ಜಿಪಂ. ಕ್ಷೇತ್ರ ಒಂದು ತಾಪಂ. 03 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಅವಕಾಶ ನೀಡಬೇಕು ಎಂದು ಕರ್ನಾಟಕ ಪ್ರದೇಶ ಗೊಂಡ ಕುರುಬರ ಸಂಘದ ಅಧ್ಯಕ್ಷ ಹಣಮಂತ ಪೂಜಾರಿ ಒತ್ತಾಯಿಸಿದರು.ಪಟ್ಟಣದ ಬೀರಲಿಂಗೇಶ್ವರ ಮಂದಿರದಲ್ಲಿ ಕರ್ನಾಟಕ ಪ್ರದೇಶ ಗೊಂಡ ಕುರುಬರ ಸಂಘದ ವತಿಯಿಂದ ಕುರುಬ ಗೊಂಡ ಸಮುದಾಯಕ್ಕೆ ರಾಜಕೀಯ ಪಕ್ಷಗಳು ಮುಂಬರುವ ತಾಪಂ.ಜಿಪಂ. ಚುನಾವಣೆಯಲ್ಲಿ ಹೆಚ್ಚಿನ ಆದ್ಯತೆ ನೀಡುಲು ಒತ್ತಾಯಿಸಿ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು,ತಾಲ್ಲೂಕಿನಲ್ಲಿ ಕುರುಬ ಗೊಂಡ ಸಮಾಜದವರು ಬಹುಸಂಖ್ಯಾತರಿದ್ದು ಬಿಜೆಪಿ ಜೆಡಿಎಸ್ ಕಾಂಗ್ರೆಸ್ ಪಕ್ಷಗಳಲ್ಲಿ ಹೆಚ್ಚಿನ ಆದ್ಯತೆ ಜಿಪಂ.01ತಾಪಂ.03ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಅವಕಾಶ ನೀಡುವ ಜೊತೆ ಗೆಲ್ಲಿಸಿಕೊಂಡು ಬರುವ ದಿಶೆಯಲ್ಲಿ ಆಯಾ ಪಕ್ಷಗಳು ಮಾಡಬೇಕು.

ಸಮಾಜದಿಂದ ಹಮ್ಮಿಕೊಂಡಿದ್ದ ಸಭೆಯಲ್ಲಿ ಬಿಜೆಪಿ ಜೆಡಿಎಸ್ ಕಾಂಗ್ರೆಸ್ ಪಕ್ಷದ ಎಲ್ಲಾ ಮುಂಚೂಣಿ ರಾಜಕೀಯ ಮುಖಂಡರು ಭಾಗವಹಿಸಿ ನಿರ್ಣಯ ಹಮ್ಮಿಕೊಂಡಿದ್ದು ಕುರುಬ ಗೊಂಡ ಸಮುದಾಯಕ್ಕೆ ತಾಪಂ.ಜಿಪಂ.ಚುನಾವಣೆಯಲ್ಲಿ ಸ್ಪರ್ಧಿಸಲು ಯಾವ ಪಕ್ಷದಿಂದ ಟಿಕೆಟ್ ನೀಡುತ್ತೋರೆಯೋ ಅಂಥಹ ಅಭ್ಯರ್ಥಿಗಳಿಗೆ ಬೆಂಬಲ ನೀಡಲಾಗುವುದು.

ಈಗಾಗಲೇ ನಮ್ಮ ಸಮುದಾಯ ಆರ್ಥಿಕ,ಶೈಕ್ಷಣಿಕ,ರಾಜಕೀಯ,ಸಮಾಜಿಕವಾಗಿ ಹಿಂದುಳಿದೆ ಹಾಗಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಟಿಕೆಟ್ ನೀಡಿ ಗೆಲ್ಲಿಸಬೇಕು ಸಮುದಾಯಕ್ಕೆ ಶಕ್ತಿ ತುಂಬಬೇಕು ಎಂದು ಅಧ್ಯಕ್ಷ ಹಣಮಂತ ಪೂಜಾರಿ ಒತ್ತಾಯಿಸಿದರು.

ರವೀಂದ್ರ ಪೂಜಾರಿ ದಸ್ತಾಪೂರ,ರಾಜು ಮರಪಳ್ಳಿ,ಅಭಿಷೇಕ್ ಮಲ್ಕನೋರ್,ರಂಗಣ್ಣ ಪೂಜಾರಿ,ಮೊಗಲಪ್ಪ ಕರಕಟ್ಟಿ,ಜಗನ್ನಾಥ ಪೂಜಾರಿ,ರಾಮಚಂದ್ರ ಪೂಜಾರಿ,ರಾಜಪ್ಪ ಪೂಜಾರಿ ಕನಕಪುರ,ಮಹದೇವ ಇದಲಾಯಿ,ಮಲ್ಲಪ್ಪ ಪೂಜಾರಿ ಪೋಲಕಪಳ್ಳಿ,ಶರಣು ಬೀರಾಪೂರ,ಅನೇಕರಿದ್ದರು.


ಉದಯವಾಹಿನಿ ಚಿತ್ರ

ಅಕ್ರಮವಾಗಿ ಅಕ್ಕಿ ಸಾಗಣೆ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲು

• **ಉದಯವಾಹಿನಿ, ಯಾದಗಿರಿ:**

ಗುರುಮಿಠಕಲ್ ತಾಲ್ಲೂಕಿನ ದಂತಾಪೂರ ಗ್ರಾಮದ ಬಳಿ ಅಕ್ರಮವಾಗಿ ಅಕ್ಕಿ ಸಾಗಣೆ ಮಾಡುತ್ತಿದ್ದ ವಾಹನವನ್ನು ಅಧಿಕಾರಿಗಳು ಜಪ್ತಿ ಮಾಡಿದ್ದು, ಚಾಲಕನ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಪಕ್ಕದ ತೆಲಂಗಾಣ ರಾಜ್ಯದ ನಾರಾಯಣಪೇಟೆಗೆ ಅಕ್ರಮವಾಗಿ ಅಕ್ಕಿ ಸಾಗಿಸಲಾಗುತ್ತಿದೆ ಎಂಬ ಖಚಿತ ಮಾಹಿತಿಯ ಮೇರೆಗೆ ಆಹಾರ ನಿರೀಕ್ಷಕರು ಮತ್ತು ಪೊಲೀಸ್ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು.

ಗುರುಮಿಠಕಲ್-ನಾರಾಯಣಪೇಟೆ ಮುಖ್ಯರಸ್ತೆಯ ಪಕ್ಕದ ದಂತಾಪೂರ ಗ್ರಾಮದ ಸೀಮಾಂತರದಲ್ಲಿ ಬರುವ ಮಡೆಪಲ್ಲಿ ಕ್ರಾಸ್ ಬಳಿ ಗೂಡ್ಸ್ ಕ್ಯಾರಿಯರ್ ವಾಹನವನ್ನು ತಡೆದು ತಪಾಸಣೆ ನಡೆಸಿದಾಗ, ಯಾವುದೇ ದಾಖಲೆಗಳಿಲ್ಲದೆ 8.00 ಕ್ವಿಂಟಾಲ್ ಅಕ್ಕಿ ಸಾಗಿಸುತ್ತಿರುವುದು ಪತ್ತೆಯಾಗಿದೆ. ತಕ್ಷಣ ಅಕ್ಕಿಯನ್ನು ವಶಪಡಿಸಿಕೊಂಡ ಅಧಿಕಾರಿಗಳು, ವಾಹನ ಚಾಲಕನ ವಿರುದ್ಧ ಗುರುಮಿಠಕಲ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಅಗತ್ಯ ವಸ್ತುಗಳ ಕಾಯಿದೆ 1955 ರ ಕಲಂ 3 ಮತ್ತು 7 ರಡಿ ಪ್ರಕರಣವನ್ನು ದಾಖಲಿಸಲಾಗಿದ್ದು, ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಯಾದಗಿರಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

ಹಳ್ಳಿಗಳ ಅಭಿವೃದ್ಧಿಯಿಂದಲೇ ಗ್ರಾಮ ಸ್ವರಾಜ್ಯ ಸಾಕಾರ

• **ಉದಯವಾಹಿನಿ, ವಿಜಯಪುರ, :**

ಹಳ್ಳಿಗಳು ಸಮಗ್ರವಾಗಿ ಅಭಿವೃದ್ಧಿಯಾದಾಗ ಮಾತ್ರ ಮಹಾತ್ಮ ಗಾಂಧೀಜಿಯವರ ಕನಸಿನ ಗ್ರಾಮ ಸ್ವರಾಜ್ಯ ಸಾಕಾರಗೊಳ್ಳಲು ಸಾಧ್ಯ ಎಂದು ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಹೇಳಿದರು. ಬಬಲೇಶ್ವರ ತಾಲ್ಲೂಕಿನ ನಿಡೋಣಿಯಲ್ಲಿ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅನುದಾನದಡಿ ರೂ.65 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಆಯುಷ್ಮಾನ್ ಆರೋಗ್ಯ ಮಂದಿರ ಕಟ್ಟಡದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಗ್ರಾಮೀಣ ಭಾಗದ ಜನರಿಗೆ ಸ್ಥಳೀಯವಾಗಿಯೇ ಉತ್ತಮ ಆರೋಗ್ಯ ಸೇವೆ ದೊರೆಯಲು ಇಂತಹ ಆರೋಗ್ಯ ಮಂದಿರಗಳು ಸಹಕಾರಿಯಾಗಲಿವೆ. ಗ್ರಾಮಗಳಲ್ಲಿ ಕೇವಲ ದೇವಸ್ಥಾನಗಳ ನಿರ್ಮಾಣಕ್ಕೆ ಸೀಮಿತವಾಗದೆ, ಆಸ್ಪತ್ರೆಗಳು, ಗ್ರಂಥಾಲಯಗಳು ಹಾಗೂ ಸಾರ್ವಜನಿಕ ಸೌಲಭ್ಯಗಳ ನಿರ್ಮಾಣಕ್ಕೂ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.

ನಿಡೋಣಿಯಲ್ಲಿ ಅಚ್ಚುಕಟ್ಟಾದ ಪಂಚಾಯಿತಿ ಕಟ್ಟಡ ಹಾಗೂ ವಿಶಾಲವಾದ ಗ್ರಂಥಾಲಯ ಉದ್ಘಾಟಿಸಿರುವುದು ಸಂತಸ ತಂದಿದೆ. ಗ್ರಾಮಸ್ಥರಲ್ಲಿ ಓದುವ ಆಸಕ್ತಿ ಕಂಡು ಸಂತೋಷವಾಗಿದೆ. ಗ್ರಂಥಾಲಯದ ಜೊತೆಗೆ ಮಹಿಳೆಯರಿಗೆ ಹೊಲಿಗೆ ತರಬೇತಿ ನೀಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದ್ದು, ಇಂತಹ ಜನಪರ ಚಟುವಟಿಕೆಗಳಿಗೆ ಸದಾ ಬೆಂಬಲ ನೀಡುವುದಾಗಿ ಸಚಿವರು ಭರವಸೆ ನೀಡಿದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ. ಮಲ್ಲನಗೌಡ ಬಿರಾದಾರ ಮಾತನಾಡಿ, ಬಬಲೇಶ್ವರ ತಾಲ್ಲೂಕಿನಲ್ಲಿ ಜನರ ಆರೋಗ್ಯದ ದೃಷ್ಟಿಯಿಂದ ಸಚಿವ ಎಂ.ಬಿ. ಪಾಟೀಲ ಅವರು ಸುಮಾರು ರೂ.25 ಕೋಟಿ ಅನುದಾನ ಒದಗಿಸಿದ್ದು, ವಿವಿಧ ಆರೋಗ್ಯ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

ಮನೆಯಿಂದಲೇ ಮಕ್ಕಳಲ್ಲಿ ಕನ್ನಡ ಪ್ರೀತಿ ಬಿತ್ತಬೇಕು: ನಾಗರತ್ನ ಕರೆ

• **ಉದಯವಾಹಿನಿ, ಗುರುಮಠಕಲ್:**

ನಾವು ಕೇವಲ ನವೆಂಬರ್ 1ರಂದು ಮಾತ್ರ ಕನ್ನಡ ಭಾಷೆಯ ಬಗ್ಗೆ ಭಾಷಣ ಮಾಡುವುದಲ್ಲ, ಪ್ರತಿದಿನವೂ ನಮ್ಮ ಓದು, ಬರವಣಿಗೆ, ಮಾತು ಹಾಗೂ ವ್ಯವಹಾರದಲ್ಲಿ ಕನ್ನಡವನ್ನು ಬಳಸಬೇಕು. ನಮ್ಮ ಭಾಷೆ, ಸಂಸ್ಕೃತಿ ಮತ್ತು ಕಲೆಗಳನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸುವ ಕೆಲಸವನ್ನು ಮೊದಲು ಮನೆಯಿಂದಲೇ ಆರಂಭಿಸಿ, ಮಕ್ಕಳ ಮನಸ್ಸಿನಲ್ಲಿ ಕನ್ನಡ ಪ್ರೀತಿಯನ್ನು ಬಿತ್ತುವ ಕೆಲಸವಾಗಬೇಕು ಎಂದು ಯಲ್ಹೇರಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಾಗರತ್ನ ಹೇಳಿದರು.

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಯಲ್ಹೇರಿಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ, 2026-27ನೇ ಸಾಲಿನ ಜಿಲ್ಲಾ ಮಟ್ಟದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳ ಥ್ರೋಬಾಲ್ ಕ್ರೀಡಾಕೂಟದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ವಿಭಾಗ ಮಟ್ಟಕ್ಕೆ ಆಯ್ಕೆಯಾದ ಯಲ್ಹೇರಿ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ತಾಲ್ಲೂಕು ಪಂಚಾಯಿತಿ ಗುರುಮಠಕಲ್ ಹಾಗೂ ಗ್ರಾಮ ಪಂಚಾಯಿತಿ ಯಲ್ಹೇರಿ ವತಿಯಿಂದ ಅಭಿನಂದನಾ ಪ್ರಮಾಣ ಪತ್ರ ವಿತರಿಸಿ ಅವರು ಮಾತನಾಡಿದರು.

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಪ್ರತಿಯೊಬ್ಬ ವಿದ್ಯಾರ್ಥಿಯೂ ಹೋರಾಟದ ಮನೋಭಾವ ಬೆಳೆಸಿಕೊಳ್ಳಬೇಕು. ಆಗ ಮಾತ್ರ ಜೀವನದಲ್ಲಿ ಏನನ್ನಾದರೂ ಸಾಧಿಸಲು ಸಾಧ್ಯವಾಗುತ್ತದೆ. ಪ್ರಸ್ತುತ ಇಂಗ್ಲಿಷ್ ಭಾಷೆಯ ವ್ಯಾಮೋಹದಿಂದಾಗಿ ಇಂದಿನ ಪೀಳಿಗೆಯ ಮಕ್ಕಳಲ್ಲಿ ಕನ್ನಡ ಭಾಷೆಯ ಬಳಕೆ ಕಡಿಮೆಯಾಗುತ್ತಿದೆ. ಪ್ರತಿಯೊಬ್ಬ ಪಾಲಕರು ತಮ್ಮ ಮಕ್ಕಳಲ್ಲಿ ಕನ್ನಡ ಭಾಷೆಯ ಬಗ್ಗೆ ಪ್ರೀತಿ ಹುಟ್ಟಿಸಬೇಕು. ಕನ್ನಡ ಭಾಷೆಯನ್ನು ಬೆಳೆಸಬೇಕು ಹಾಗೂ ಕನ್ನಡದ ಉಳಿವಿಗಾಗಿ ಪ್ರತಿಯೊಬ್ಬರೂ ಪಣತೊಡಬೇಕು ಎಂದು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಹೇಳಿದರು.


ಉದಯವಾಹಿನಿ ಚಿತ್ರ

ಸುಸ್ಥಿರ ಕಲಬುರಗಿ ಅಭಿವೃದ್ಧಿಗೆ ಮಾಸ್ಟರ್ ಪ್ಲ್ಯಾನ್ ಸಿದ್ಧ

• **ಉದಯವಾಹಿನಿ, ಕಲಬುರಗಿ,:**

ಕಲಬುರಗಿ ನಗರವನ್ನು ಕೇವಲ ಸ್ಮಾರ್ಟ್ ನಗರವನ್ನಾಗಿ ಮಾಡುವುದಷ್ಟೇ ಅಲ್ಲದೆ, ಸುಸ್ಥಿರ ಹಾಗೂ ಸಮಗ್ರ ಅಭಿವೃದ್ಧಿ ಹೊಂದಿದ ನಗರವನ್ನಾಗಿ ರೂಪಿಸುವ ಸಂಕಲ್ಪ ನಮ್ಮದಾಗಿದ್ದು, ಇದಕ್ಕಾಗಿ ಮಾಸ್ಟರ್ ಪ್ಲಾನ್ ಸಿದ್ಧಪಡಿಸಲಾಗಿದೆ ಎಂದು ಗೃಹ, ಐಟಿ-ಬಿಟಿ, ಇ-ಆಡಳಿತ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ರವಿವಾರ ಕಲಬುರಗಿ ನಗರದ ಗಂಜ್ ಪ್ರದೇಶದಲ್ಲಿರುವ ನಗರೇಶ್ವರ ಶಾಲಾ ಆವರಣದಲ್ಲಿ ಆಯೋಜಿಸಲಾಗಿದ್ದ 71ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ವಿದೇಶಿ ಬಂಡವಾಳ ಆಕರ್ಷಣೆ, ಬೃಹತ್ ಪ್ರಮಾಣದ ಉದ್ಯೋಗ ಸೃಷ್ಟಿ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಿ ನವ ಕರ್ನಾಟಕ ನಿರ್ಮಾಣಕ್ಕೆ ನವ ಕಲಬುರಗಿ ನಿರ್ಮಾಣ ಮಾಡಲಾಗುವುದು ಎಂದರು.

ಕಳೆದ ವರ್ಷ ಇದೇ ವೇದಿಕೆಯಲ್ಲಿಯೆ ನೀಲಿ ಮತ್ತು ಹಸಿರು ಅಭಿವೃದ್ಧಿ ಮಾಡುವುದಾಗಿ ಘೋಷಣೆ ಮಾಡಿದ್ದೆ. ಅದರಂತೆ ನೀಲಿ ನಕ್ಷೆ ಇದೀಗ ಸಿದ್ದಪಡಿಸಲಾಗಿದೆ. ಇತ್ತೀಚೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ನವೀಕರಣಗೊಂಡ ಅಪ್ಪ ಕೆರೆ ಲೋಕಾರ್ಪಣೆಗೊಳಿಸಿದ್ದಾರೆ.

ಯುವಜನತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ನೆರವಾಗುವ ನಿಟ್ಟಿನಲ್ಲಿ ಈಗಾಗಲೇ 'ಪ್ರಬುದ್ಧ ಅಕಾಡೆಮಿ' ಸ್ಥಾಪಿಸಲಾಗಿದೆ. ಇದರ ಜೊತೆಗೆ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು 'ಕಲಬುರಗಿ ನೆಕ್ಸ್ಟ್ ಫೌಂಡೇಶನ್' ರೂಪಿಸಿದ್ದು, ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸುವ ಇಂತಹ ಸಂಸ್ಥೆ ಬೇರೆಲ್ಲಿಯೂ ಕಾಣಲು ಸಿಗದು. ಅಭಿವೃದ್ಧಿ ಪಯಣದಲ್ಲಿ ಸರ್ಕಾರದೊಂದಿಗೆ ಎಲ್ಲಾ ಜನಪ್ರತಿನಿಧಿಗಳು, ಪತ್ರಕರ್ತರು, ಸಾರ್ವಜನಿಕರು ಸಾತ್ ನೀಡಬೇಕಾಗುತ್ತದೆ ಎಂದರು.


ಉದಯವಾಹಿನಿ ಚಿತ್ರ

ನಗರದ ಸೌಂದರ್ಯ ಹೆಚ್ಚಿಸಲು ಗಮನ ಹರಿಸಿದ್ದೇವೆ ಎಂದ ಅವರು, ಮುಂದಿನ ಒಂದೆರಡು ವರ್ಷದಲ್ಲಿ ನಮ್ಮ ಯೋಜನೆಗಳು ಕಾರ್ಯಗತಕ್ಕೆ ಬರಲಿವೆ ಎಂದರು.

ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯಲ್ಲಿ ಕನ್ನಡ ಧ್ವಜಾರೋಹಣ

• **ಉದಯವಾಹಿನಿ, ಬಳ್ಳಾರಿ:**

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯಲ್ಲಿ ಕನ್ನಡ ತಾಯಿ ಭುವನೇಶ್ವರಿಯ ಭಾವ ಚಿತ್ರಕ್ಕೆ ಹೂ ಮಾಲೆಯನ್ನು ಹಾಕಿ, ಪುಷ್ಪಾರ್ಚನೆ ಸಲ್ಲಿಸಿ ಕನ್ನಡ ಧ್ವಜಾರೋಹಣೆಯನ್ನು ನೆರವೇರಿಸಿ 71ನೇ ಕನ್ನಡ ರಾಜ್ಯೋತ್ಸವವನ್ನು ಭಾನುವಾರ ಆಚರಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಅವ್ವಾರು ಮಂಜುನಾಥ್ ಅವರು, ಕನ್ನಡ ಧ್ವಜಾರೋಹಣ ನೆರವೇರಿಸಿ, ದಕ್ಷಿಣ ಭಾರತದಲ್ಲಿಯ ಕನ್ನಡ ಭಾಷಿಕರು ಮತ್ತು ಕನ್ನಡ ಪ್ರಾಂತಗಳನ್ನು ಒಗ್ಗೂಡಿದ ದಿನ. ಮೈಸೂರು ಪ್ರಾಂತವನ್ನು 'ಕರ್ನಾಟಕ' ಎಂದು ನಾಮಕರಣ ಮಾಡಿದ ಈ ದಿನವನ್ನು ಕನ್ನಡ ರಾಜ್ಯೋತ್ಸವವನ್ನಾಗಿ ನಾಡಿನಾದ್ಯಂತ ಅದ್ದೂರಿಯಾಗಿ ಆಚರಿಸಲಾಗುತ್ತದೆ ಎಂದರು. ಗೌರವ ಕಾರ್ಯದರ್ಶಿ ಕೆ.ಸಿ. ಸುರೇಶಬಾಬು ಅವರು, 1956ರ ನವೆಂಬರ್ 1 ರಂದು ಕನ್ನಡ ಭಾಷೆ ಮಾತನಾಡುವ ಪ್ರದೇಶಗಳನ್ನು ಒಗ್ಗೂಡಿಸಿ ಮೈಸೂರು ರಾಜ್ಯವನ್ನು ರಚಿಸಲಾಯಿತು. 1973ರ ನವೆಂಬರ್ 1 ರಂದು ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಮರುನಾಮಕರಣ ಮಾಡಲಾಯಿತು. ನಮ್ಮ ನಾಡು, ನಮ್ಮ ನುಡಿ, ನಮ್ಮ ಸಂಸ್ಕೃತಿಗಳ ರಕ್ಷಣೆ ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ ಎಂದರು. ಹಿರಿಯ ಉಪಾಧ್ಯಕ್ಷ ಎಸ್. ದೊಡ್ಡನಗೌಡ, ಉಪಾಧ್ಯಾಕ್ಷರಾದ ಸೊಂತ ಗಿರಿಧರ, ಪಿ ಪಾಲಣ್ಣ, ಜಂಟಿ ಕಾರ್ಯದರ್ಶಿಗಳಾದ, ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ವಿಶೇಷ ಆಹ್ವಾನಿತರು, ವಿಶೇಷ ಸಮನ್ವಯ ಸಮಿತಿ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

ಇನ್ಮುಂದೆ ಪ್ರತಿ ವರ್ಷ ಸೆಪ್ಟಂಬರ್ 18 'ತುಳು ದಿನ' ಆಚರಣೆ

ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಚಿವ ಯು.ಟಿ. ಖಾದರ್ ಅವರು ಸೆ.18 ರಂದು 'ತುಳು ದಿನ'ವನ್ನಾಗಿ ಆಚರಣೆ ಮಾಡುವುದಾಗಿ ಘೋಷಣೆ ಮಾಡಿದ್ದಾರೆ.

• **ಉದಯವಾಹಿನಿ, ಮಂಗಳೂರು:**

ಕರಾವಳಿಯ ಕಡಲನಗರಿ ಮಂಗಳೂರಿನಲ್ಲಿ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ತುಳು ಭಾಷೆಯನ್ನು ರಾಜ್ಯದ ಹೆಚ್ಚುವರಿ ಆಡಳಿತ ಭಾಷೆಯನ್ನಾಗಿ ಅಂಗೀಕರಿಸಿ ಮಹತ್ವದ ನಿರ್ಧಾರ ಕೈಗೊಂಡಿರುವ ಸೆಪ್ಟೆಂಬರ್ 18 ದಿನಾಂಕವನ್ನೇ ಇನ್ನು ಮುಂದೆ ಪ್ರತಿ ವರ್ಷ 'ತುಳು ದಿನ' (ತುಳು ದಿವಸ) ಎಂದು ಅಧಿಕೃತವಾಗಿ ಆಚರಿಸಲು ಸರ್ಕಾರ ತೀರ್ಮಾನಿಸಿದೆ ಎಂದು ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಯು.ಟಿ. ಖಾದರ್ ಘೋಷಿಸಿದರು.

1 ಕನ್ನಡ ತಾಯಿಯಾದರೆ, ತುಳು ಮಗಳು
2 ಅಧಿಕೃತ ಆಡಳಿತ ಭಾಷೆಯನ್ನಾಗಿ ಮಾನ್ಯತೆ
3 ತುಳು ದಿನ ಆಚರಿಸಲು ಸರ್ಕಾರ ನಿರ್ಧರಿಸಿದೆ

ಕನ್ನಡ ತಾಯಿಯಾದರೆ, ತುಳು ಮಗಳು: ಕರಾವಳಿಯ ಜನರ ಬಹುಕಾಲದ ಬೇಡಿಕೆಯಾಗಿದ್ದ ತುಳು ಭಾಷೆಯನ್ನು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಹೆಚ್ಚುವರಿ ಅಧಿಕೃತ ಆಡಳಿತ ಭಾಷೆಯನ್ನಾಗಿ ಮಾನ್ಯತೆ ನೀಡಿ ಮಂಗಳೂರಿನಲ್ಲಿ ನಡೆದ ವಿಶೇಷ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ಕನ್ನಡ ನಮಗೆ ತಾಯಿಯಾದರೆ ತುಳು ಮಗಳಿದ್ದಂತೆ. ಸಚಿವ ಸಂಪುಟದಲ್ಲಿ ಈ ಐತಿಹಾಸಿಕ ನಿರ್ಧಾರ ಕೈಗೊಂಡ ಸೆಪ್ಟೆಂಬರ್ 18 ರ ಸವಿನೆನಪಿನಲ್ಲಿ ಪ್ರತಿ ವರ್ಷ ಜಿಲ್ಲೆಯಾದ್ಯಂತ ಅಧಿಕೃತವಾಗಿ 'ತುಳು ದಿನ' ಆಚರಿಸಲು ಸರ್ಕಾರ ನಿರ್ಧರಿಸಿದೆ ಎಂದು ಸಚಿವರು ತಿಳಿಸಿದ್ದಾರೆ.

ಕನ್ನಡವೆಂದರೆ ನಮ್ಮ ಅಸ್ಮಿತೆ, ಮಣ್ಣಿನ ಕಂಪು ಮಾತ್ರವಲ್ಲ, ನಮ್ಮ ಬದುಕಿನ ಪ್ರತಿ ಹೆಜ್ಜೆಯಲ್ಲೂ ಬೆಸೆದುಕೊಂಡಿರುವ ಆತ್ಮೀಯತೆಯ ನಂಟು. ಕಾವೇರಿಯ ಹರಿವು, ಸಹ್ಯಾದ್ರಿಯ ಗರಿಮೆ, ಕರಾವಳಿಯ ಕಡಲಲೆಗಳ ಸಂವಾದವೇ ಕನ್ನಡ. ಪಂಪನ ಕಾವ್ಯ, ಬಸವಣ್ಣನ ವಚನ ಕ್ರಾಂತಿ, ಅಕ್ಕಮಹಾದೇವಿಯ ಆತ್ಮಜ್ಞಾನ, ಕನಕದಾಸರ ಭಕ್ತಿ, ಕುವೆಂಪು ಅವರ ವಿಶ್ವಮಾನವ ಸಂದೇಶಗಳು ಸಂಕುಚಿತ ಗಡಿಗಳನ್ನು ಮೀರಿ ವಿಶಾಲ ಮಾನವೀಯತೆಯ ನೆಲೆಗೆ ಕರೆದೊಯ್ಯುತ್ತವೆ ಎಂದರು.

ಕೃತಕ ಬುದ್ಧಿಮತ್ತೆ ಮತ್ತು ಡಿಜಿಟಲ್ ಯುಗದಲ್ಲಿ ಕನ್ನಡವು ತಂತ್ರಜ್ಞಾನ ಬಳಸುವ ಭಾಷೆಯಾಗುವುದರ ಜೊತೆಗೆ, ತಂತ್ರಜ್ಞಾನದ ಬೆಳವಣಿಗೆಗೆ ಕೊಡುಗೆ ನೀಡುವ ಭಾಷೆಯಾಗಬೇಕು. ಕನ್ನಡದಲ್ಲಿ ಸಮಸ್ಯೆ ಹೇಳಿಕೊಳ್ಳುವ ರೈತನಿಗೆ ಸುಲಭವಾಗಿ ಸೇವೆ ಸಿಗಬೇಕು, ಕಲಿಯುವ ಯುವಜನತೆಗೆ ಉದ್ಯೋಗಾವಕಾಶಗಳು ದೊರೆಯಬೇಕು ಎಂದು ಆಶಯ ವ್ಯಕ್ತಪಡಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಗೆ 32,611 ಕೋಟಿ ಯೋಜನೆಗಳು: ಮಂಗಳೂರು ಸಂಪುಟ ಸಭೆಯಲ್ಲಿ ಕರಾವಳಿ ಮತ್ತು ಗ್ರಾಮೀಣ ಭಾಗಗಳ ಸಮಗ್ರ ಅಭಿವೃದ್ಧಿಗಾಗಿ ಒಟ್ಟು 32,611 ಕೋಟಿ ವೆಚ್ಚದ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಪುತ್ತೂರು ತಾಲ್ಲೂಕಿನ ಬನ್ನೂರು ಗ್ರಾಮದ ಸೇಡಿಯಾಪು ಬಳಿ 549.79 ಕೋಟಿ ವೆಚ್ಚದಲ್ಲಿ ನೂತನ ಸರ್ಕಾರಿ ವೈದ್ಯಕೀಯ ಕಾಲೇಜು, ಬೋಧನಾ ಆಸ್ಪತ್ರೆ ಹಾಗೂ ಹಾಸ್ಟೆಲ್ ನಿರ್ಮಾಣಕ್ಕೆ ಅನುಮೋದನೆ ದೊರೆತಿದೆ. ಮಹಾನಗರ ಪಾಲಿಕೆ ವ್ಯಾಪ್ತಿಯ ರಸ್ತೆಗಳ ಕಾಂಕ್ರೀಟೀಕರಣ ಹಾಗೂ ಸಮಗ್ರ ಮೂಲಸೌಕರ್ಯ ಅಭಿವೃದ್ಧಿಗೆ 400 ಕೋಟಿ ವಿಶೇಷ ಅನುದಾನ ನೀಡಲಾಗಿದೆ ಎಂದರು. ಜಿಲ್ಲೆಯಲ್ಲಿ ಗೃಹಲಕ್ಷ್ಮಿ ಯೋಜನೆಯಡಿ 3.82 ಲಕ್ಷ ಮಹಿಳೆಯರಿಗೆ 2,001 ಕೋಟಿ, ಗೃಹಜ್ಯೋತಿಯಡಿ 5.52 ಲಕ್ಷ ಮನೆಗಳಿಗೆ 1,238 ಕೋಟಿ ಸಬ್ಸಿಡಿ, ಶಕ್ತಿ ಯೋಜನೆಯಡಿ 14 ಕೋಟಿ ಮಹಿಳಾ ಪ್ರಯಾಣಿಕರಿಗೆ 511 ಕೋಟಿ ಮೌಲ್ಯದ ಉಚಿತ ಪ್ರಯಾಣ ಹಾಗೂ ಯುವನಿಧಿ ಯೋಜನೆಯಡಿ 7,542 ಯುವಕರಿಗೆ 21


ಉದಯವಾಹಿನಿ ಚಿತ್ರ

ನಮ್ಮ ಕನ್ನಡಾಭಿಮಾನವು ಇತರ ಭಾಷಿಗರನ್ನು ದೂರವಿಡುವ ಶಕ್ತಿಯಾಗದೆ, ಎಲ್ಲರನ್ನೂ ಪ್ರೀತಿ-ವಿಶ್ವಾಸದಿಂದ ಬೆಸೆಯುವ ಸೇತುವೆಯಾಗಬೇಕು. ಕರ್ನಾಟಕವು ಸರ್ವಜನಾಂಗದ ಶಾಂತಿಯ ತೋಟವಾಗಿದ್ದು, ಈ ಸೌಹಾರ್ದತೆ ಮತ್ತು ಸಾಮರಸ್ಯವೇ ನಮ್ಮ ನಾಡಿನ ನಿಜವಾದ ಶಕ್ತಿ ಎಂದರು.
-ಸಚಿವ ಯು.ಟಿ. ಖಾದರ್

ನಗರದ ನೆಹರು ಮೈದಾನದಲ್ಲಿ ಭಾನುವಾರ ಜರುಗಿದ ಜಿಲ್ಲಾಮಟ್ಟದ 71ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ, ಆಕರ್ಷಕ ಪಥಸಂಚಲನದ ಗೌರವ ವಂದನೆ ಸ್ವೀಕರಿಸಿ ಅವರು ರಾಜ್ಯೋತ್ಸವ ಸಂದೇಶ ನೀಡಿದರು.

ಮಿನಿ ನ್ಯೂಸ್

ಬೆಲೆ ನಿಗದಿಗೆ ಆಗ್ರಹಿಸಿ ಕರ್ನಾಟಕ ಬಂದ್‌ಗೆ ರೈತ ಸಂಘಟನೆಗಳ ಕರೆ

• **ಉದಯವಾಹಿನಿ, ವಿಜಯಪುರ, :**

ಕಬ್ಬಿನ ಬೆಲೆ ನಿಗದಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ರೈತರು ನಿಡಗುಂದಿ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ, ಕರ್ನಾಟಕ ಬಂದ್‌ಗೆ ಕರೆ ನೀಡಿದರು.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪಾದಯಾತ್ರೆ ನಡೆಸಿದ ರೈತರು, ಕಬ್ಬಿಗೆ ಸಮರ್ಪಕ ಬೆಲೆ ನಿಗದಿ ಮಾಡಬೇಕು ಎಂದು ಆಗ್ರಹಿಸಿದರು. ರೈತರ ಹೋರಾಟಕ್ಕೆ ಸಾರ್ವಜನಿಕರು ಬೆಂಬಲ ಸೂಚಿಸುವಂತೆ ಮನವಿ ಮಾಡಿದ ಅವರು, ಸ್ವಯಂಪ್ರೇರಿತವಾಗಿ ಅಂಗಡಿ-ಮುಂಗಟ್ಟುಗಳನ್ನು ಬಂದ್ ಮಾಡಿ ಹೋರಾಟಕ್ಕೆ ಸಾಥ್ ನೀಡುವಂತೆ ಕೋರಿದರು.

ನಂತರ ರಾಷ್ಟ್ರೀಯ ಹೆದ್ದಾರಿ-50ರ ಯಲಗೂರು ಕ್ರಾಸ್ ಬಳಿ ರೈತರು ಪ್ರತಿಭಟನೆ ನಡೆಸಿದರು. ಪ್ರತಿ ಟನ್ ಕಬ್ಬಿಗೆ 5,500 ಬೆಲೆ ನಿಗದಿ ಮಾಡಬೇಕು ಎಂದು ಒತ್ತಾಯಿಸಿದರು.ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ರೈತರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸದೆ ರೈತರೊಂದಿಗೆ ಚೆಲ್ಲಾಟವಾಡುತ್ತಿವೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಕಬ್ಬಿನ ಬೆಲೆ ನಿಗದಿ ಮಾಡುವಲ್ಲಿ ಸರ್ಕಾರಗಳು ವಿಳಂಬ ಮಾಡದೆ ರೈತರ ಬೇಡಿಕೆಗೆ ಸ್ಪಂದಿಸಬೇಕು ಎಂದು ಆಗ್ರಹಿಸಿದರು. ರೈತರ ಬೇಡಿಕೆಗಳನ್ನು ಈಡೇರಿಸದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು. ಕಬ್ಬಿನ ಬೆಲೆ ನಿಗದಿಯಾಗುವವರೆಗೂ ಹೋರಾಟ ಮುಂದುವರಿಸುವುದಾಗಿ ರೈತ ಮುಖಂಡರು ಎಚ್ಚರಿಕೆ ನೀಡಿದರು.

ಕಬ್ಬಿನ ಬೆಲೆ ನಿಗದಿಗೆ ಆಗ್ರಹಿಸಿ ರೈತರ ರಸ್ತೆ ತಡೆ

• **ಉದಯವಾಹಿನಿ, ನಾಲತವಾಡ, :**

ಕಬ್ಬು ಬೆಳೆಗಾರರಿಗೆ ನ್ಯಾಯಯುತ ಬೆಲೆ ನಿಗದಿಪಡಿಸುವುದು ಸೇರಿದಂತೆ ರೈತರ ವಿವಿಧ ಸಮಸ್ಯೆಗಳಿಗೆ ಸರ್ಕಾರ ತಕ್ಷಣ ಸ್ಪಂದಿಸಬೇಕು ಎಂದು ಆಗ್ರಹಿಸಿ ವೀರೇಶನಗರ, ನಾಗಬೇನಾಳ ಹಾಗೂ ಆರೇಶಂಕರ ನಾಗಬೇನಾಳ ತಾಂಡಾದ ರೈತರು ವೀರೇಶನಗರದಲ್ಲಿ ಮುದ್ದೇಬಿಹಾಳ-ಲಿಂಗಸುಗೂರು ಮುಖ್ಯರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಕಬ್ಬಿನ ಬೆಲೆ ನಿಗದಿಪಡಿಸುವಲ್ಲಿ ಸರ್ಕಾರ ವಿಳಂಬ ಮಾಡುತ್ತಿರುವುದಕ್ಕೆ ರೈತರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಬೆಳೆ ಬೆಳೆಯಲು ರೈತರು ಮಾಡಿರುವ ಖರ್ಚು ಹಾಗೂ ಪಟ್ಟಿರುವ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಬೇಕು. ಸರ್ಕಾರ ಕೂಡಲೇ ಕಬ್ಬಿನ ಬೆಲೆ ನಿಗದಿಪಡಿಸಿ ರೈತರ ಹಿತ ಕಾಪಾಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಈ ಸಂದರ್ಭದಲ್ಲಿ ರೈತ ಮುಖಂಡ ಮೌನೇಶ ನಾಗಬೇನಾಳ ಮಾತನಾಡಿ, ರೈತರು ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ದೊರೆಯದಿದ್ದರೆ ಕೃಷಿಕರ ಬದುಕು ಸಂಕಷ್ಟಕ್ಕೆ ಸಿಲುಕಲಿದೆ. ರೈತರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಸರ್ಕಾರ ತಕ್ಷಣ ಪರಿಹಾರ ಕಲ್ಪಿಸಬೇಕು. ರೈತರ ಬೇಡಿಕೆಗಳನ್ನು ನಿರ್ಲಕ್ಷಿಸುತ್ತಿರುವ ಸರ್ಕಾರಕ್ಕೆ ನಾಚಿಕೆಯಾಗಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಬ್ಬು ಬೆಳೆಗಾರರ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಕೂಡಲೇ ಮಧ್ಯಪ್ರವೇಶಿಸಬೇಕು. ಕಬ್ಬಿನ ಬೆಲೆ ನಿಗದಿಪಡಿಸುವಲ್ಲಿ ಇನ್ನೂ ವಿಳಂಬ ಮಾಡಿದರೆ ರೈತರು ತಮ್ಮ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು.

ಎಚ್ಚರಿಕೆ ವಹಿಸುವಂತೆ ಮಂಗಳೂರು ನಗರ ಪೊಲೀಸರು ಸೂಚನೆ

• **ಉದಯವಾಹಿನಿ, ಮಂಗಳೂರು-**

ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಇ-ಚಲನ್ ದಂಡ ಪಾವತಿಸುವಂತೆ ಸೈಬರ್ ವಂಚಕರು ಸಾರ್ವಜನಿಕರ ಮೊಬೈಲ್ ಫೋನ್‌ಗಳಿಗೆ SMS/Whatsapp ಮೂಲಕ ನಕಲಿ ಲಿಂಕ್‌ಗಳು ಹಾಗೂ APK ಫೈಲ್‌ಗಳನ್ನು ಕಳುಹಿಸಿ, ಸೈಬರ್ ವಂಚನೆ ನಡೆಸುತ್ತಿರುವ ಬಗ್ಗೆ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗುತ್ತಿವೆ. ಹೀಗಾಗಿ ಸಾರ್ವಜನಿಕರು ಎಚ್ಚರಿಕೆ ವಹಿಸುವಂತೆ ಮಂಗಳೂರು ನಗರ ಪೊಲೀಸ್ ಆಯುಕ್ತರು ಸೂಚನೆ ನೀಡಿದ್ದಾರೆ.

ಈ ರೀತಿಯ ಸೈಬರ್ ವಂಚನೆಗೆ ಸಂಬಂಧಿಸಿದಂತೆ ಮಂಗಳೂರು ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ 2026ನೇ ಸಾಲಿನಲ್ಲಿ ಈವರೆಗೆ ಒಟ್ಟು 8 ಪ್ರಕರಣಗಳು ದಾಖಲಾಗಿದ್ದು, ಈ ವಂಚನೆಯಿಂದ ಸಾರ್ವಜನಿಕರು ಒಟ್ಟು ಸುಮಾರು ರೂ. 44 ಲಕ್ಷ ಹಣವನ್ನು ಕಳೆದುಕೊಂಡಿರುತ್ತಾರೆ. ಆದ್ದರಿಂದ, ಸಾರ್ವಜನಿಕರು ಇಂತಹ ವಂಚನೆಗಳ ಬಗ್ಗೆ ಹೆಚ್ಚಿನ ಜಾಗರೂಕತೆ ವಹಿಸಬೇಕು. ತಮ್ಮ ವಾಹನದ ಮೇಲೆ ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ದಾಖಲಾಗಿದೆಯೇ ಎಂಬುದನ್ನು ಅಧಿಕೃತ ಇ-ಚಲನ್ ವೆಬ್ ಸೈಟ್‌ನಲ್ಲಿ ಅಥವಾ ಖುದ್ದಾಗಿ ಹತ್ತಿರದ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪರಿಶೀಲಿಸಿದ ನಂತರವೇ ದಂಡದ ಮೊತ್ತವನ್ನು ಪಾವತಿಸಬೇಕು. ಸೈಬರ್ ವಂಚನೆಯಿಂದ ಸುರಕ್ಷಿತವಾಗಿರಲು ಸಾರ್ವಜನಿಕರು ಈ ಕೆಳಕಂಡ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವಂತೆ ಕೋರಲಾಗಿದೆ.

ನಾಲ್ವರು ಅಂತಾರಾಜ್ಯ ಆರೋಪಿಗಳ ಬಂಧನ 32 ಲಕ್ಷ ಮೌಲ್ಯದ ಸ್ವತ್ತು ಜಪ್ತಿ

• **ಉದಯವಾಹಿನಿ, ಬೀದರ್:**


ಉದಯವಾಹಿನಿ ಚಿತ್ರ

ಜಿಲ್ಲೆಯ ಭಾಲ್ಕಿ ಪಟ್ಟಣದ ಹಿರೇಮಠ ಸಂಸ್ಥಾನ ಸಂಕೀರ್ಣದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಎಟಿಎಂನಲ್ಲಿ 23.86 ಲಕ್ಷ ಕಳವು ಮಾಡಿದ್ದ ಪ್ರಕರಣವನ್ನು ಭೇದಿಸಿರುವ ಜಿಲ್ಲಾ ಪೊಲೀಸರು, ಹರಿಯಾಣ ಮತ್ತು ರಾಜಸ್ಥಾನ ಮೂಲದ ನಾಲ್ವರು ಅಂತಾರಾಜ್ಯ ಆರೋಪಿಗಳನ್ನು ಬಂಧಿಸಿದ್ದಾರೆ. ಆರೋಪಿಗಳಿಂದ 12 ಲಕ್ಷ ನಗದು, 20 ಲಕ್ಷ ಮೌಲ್ಯದ ಕ್ರೆಟಾ ಕಾರು ಸೇರಿದಂತೆ ಒಟ್ಟು 32 ಲಕ್ಷ ಮೌಲ್ಯದ ಸ್ವತ್ತು ಹಾಗೂ ಕೃತ್ಯಕ್ಕೆ ಬಳಸಿದ ವಿವಿಧ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ ತಿಳಿಸಿದ್ದಾರೆ. ತನಿಖೆಯ ಸಂದರ್ಭದಲ್ಲಿ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಿದ ಪೊಲೀಸರು, ಆರೋಪಿಗಳು ತೆಲಂಗಾಣದ ಹೈದರಾಬಾದ್ ಕಡೆಗೆ ತೆರಳಿರುವ ಸುಳಿವು ಪತ್ತೆ ಹಚ್ಚಿದ್ದರು.

ಈ ಹಿನ್ನೆಲೆಯಲ್ಲಿ ಹೈದರಾಬಾದ್‌ನಲ್ಲಿ ಶೋಧ ಕಾರ್ಯಾಚರಣೆ ನಡೆಸಿದ ವಿಶೇಷ ತಂಡಗಳು ಅಕ್ಟೋಬರ್ 30ರಂದು ಮಧ್ಯಾಹ್ನ 3.30ರ ಸುಮಾರಿಗೆ ಶಾಹೀನ್‌ನಗರ ಪ್ರದೇಶದಲ್ಲಿ ಅನುಮಾನಾಸ್ಪದವಾಗಿ ಕಂಡುಬಂದ ನಾಲ್ವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದವು.

ಪೊಲೀಸರ ಪ್ರಕಾರ, ವಿಚಾರಣೆಯ ವೇಳೆ ಆರೋಪಿಗಳು ಭಾಲ್ಕಿಯ ಎಟಿಎಂ ಹಣ ಕಳವು ಪ್ರಕರಣದಲ್ಲಿ ಭಾಗಿಯಾಗಿರುವುದನ್ನು ಒಪ್ಪಿಕೊಂಡಿದ್ದಾರೆ. **ನಾಲ್ಕು ವಿಶೇಷ ತಂಡಗಳ ಕಾರ್ಯಾಚರಣೆ:** ಭಾಲ್ಕಿ ಡಿವೈಎಸ್‌ಪಿ ಬಲ್ಲಪ್ಪ ನಂದಗಾಂವಿ, ಹುಮನಾಬಾದ್ ಡಿವೈಎಸ್‌ಪಿ ಮಡೋಳಪ್ಪ, ಬೀದರ್ ಡಿವೈಎಸ್‌ಪಿ ಡಿ.ಎಚ್. ಮುಲ್ಲಾ ಹಾಗೂ ಸೆನ್ ಪೊಲೀಸ್ ಠಾಣೆಯ ಡಿವೈಎಸ್‌ಪಿ ಎಸ್.ಎನ್. ಸನದಿ ನೇತೃತ್ವದಲ್ಲಿ ವಿಶೇಷ ತಂಡಗಳನ್ನು ರಚಿಸಲಾಗಿತ್ತು.

ದಿನ ಭವಿಷ್ಯ

ರಾಹುಕಾಲ	ಬೆಳಿಗ್ಗೆ	07:30 ರಿಂದ 09:00
ಗುಳಿಕ ಕಾಲ	ಮಧ್ಯಾಹ್ನ	01:30 ರಿಂದ 03:00
ಯಮಗಂಡ ಕಾಲ	ಬೆಳಿಗ್ಗೆ	10:30 ರಿಂದ 12:00

ಮೇಷ ಸಂತಸದ ಪ್ರಯಾಣ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಸಂತೋಷ ತರುತ್ತದೆ. ಸಂಶಯಾಸ್ಪದ ಹಣಕಾಸು ವ್ಯವಹಾರಗಳಲ್ಲಿ ಸಿಲುಕಿಕೊಳ್ಳದಂತೆ ಎಚ್ಚರಿಕೆ ವಹಿಸಿ. ನಿಮ್ಮ ಕುಟುಂಬದ ಸದಸ್ಯರ ಭಾವನೆಗಳನ್ನು ನೋಯಿಸುವುದನ್ನು ತಪ್ಪಿಸುವ ಮೂಲಕ ನಿಮ್ಮ ಕೋಪವನ್ನು ನಿಯಂತ್ರಿಸಿ.

ವೃಷಭ ನಿಮ್ಮ ಅಪಾರ ವಿಶ್ವಾಸ ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ದೊಡ್ಡ ಯೋಜನೆಗಳನ್ನು ಮತ್ತು ಕಲ್ಪನೆಗಳಿರುವ ಯಾರಾದರೂ ನಿಮ್ಮ ಗಮನ ಸೆಳೆಯುತ್ತಾರೆ – ಯಾವುದೇ ಹೂಡಿಕೆಗಳನ್ನು ಮಾಡುವ ಮೊದಲು ವ್ಯಕ್ತಿಯ ವಿಶ್ವಾಸಾರ್ಹತೆ ಪ್ರಾಮಾಣಿಕತೆಯನ್ನು ದೃಢೀಕರಿಸಿ.

ಮಿಥುನ ಆರೋಗ್ಯದ ಬಗ್ಗೆ ಸ್ವಲ್ಪ ಕಾಳಜಿ ವಹಿಸಬೇಕು. ವಿವಾಹಿತ ಜನರು ಇಂದು ತಮ್ಮ ಮಕ್ಕಳ ಶಿಕ್ಷಣದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಕೌಟುಂಬಿಕ ಜವಾಬ್ದಾರಿಗಳು ಹೆಚ್ಚಾಗುತ್ತವೆ ಮನಸ್ಸಿನ ಮೇಲೆ ಒತ್ತಡ ತರುತ್ತವೆ. ಒಬ್ಬ ಸುಂದರ ನಗುವಿನಿಂದ ನಿಮ್ಮ ಪ್ರೇಮಿಯ ದಿನವನ್ನು ಪ್ರಕಾಶಮಾನವಾಗಿಸಿ.

ಕಟಕ ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ಎಲ್ಲಾ ಬದ್ಧತೆಗಳು ಮತ್ತು ಆರ್ಥಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು. ನೀವು ನಿಮ್ಮ ದೈನಂದಿನ ಕಾರ್ಯಕ್ರಮಗಳಿಂದ ಬಿಡುವು ಮಾಡಿಕೊಂಡು ನಿಮ್ಮ ಸ್ನೇಹಿತರೊಂದಿಗೆ ಇಂದು ಹೊರಗೆ ಹೋಗಬೇಕು.

ಸಿಂಹ ಅನಂತ ಚೈತನ್ಯ ಉತ್ಸಾಹ ನಿಮ್ಮನ್ನು ಆವರಿಸುತ್ತದೆ ಮತ್ತು ನೀವು ಯಾವುದೇ ಅವಕಾಶವನ್ನು ನಿಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತೀರಿ. ಹೊಸ ಆರ್ಥಿಕ ಒಪ್ಪಂದ ಕುದುರಿಸಲಾಗುತ್ತದೆ ಹೊಸ ಹಣ ಬರುತ್ತದೆ. ನೀವು ನಿಮ್ಮ ಆಕರ್ಷಣೆಯನ್ನು ನಿಮ್ಮ ಬುದ್ಧಿವಂತಿಕೆಯನ್ನು ಬಳಸಿದಲ್ಲಿ ಜನರು ನಿಮ್ಮ ಮಾತುಗಳನ್ನು ಕೇಳುತ್ತಾರೆ.

ಕನ್ಯಾ ವಿಶೇಷವಾಗಿ ಹೊರಗಿಟ್ಟ ಆಹಾರ ತಿನ್ನುವಾಗ ವಿಶೇಷ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ಆದರೆ ಅನಗತ್ಯ ಒತ್ತಡ ಕೇವಲ ನಿಮಗೆ ಮಾನಸಿಕ ಉದ್ವೇಗ ಉಂಟುಮಾಡುತ್ತದೆ. ನೀವು ಕಮಿಷನ್‌ಗಳಿಂದ ಡಿವಿಡೆಂಡ್‌ಗಳಿಂದ– ರಾಯಧನಗಳಿಂದ ಪ್ರಯೋಜನ ಪಡೆಯುತ್ತೀರಿ. ಒಂದು ಒಳ್ಳೆಯ ಸುದ್ದಿ ಪಡೆಯುವ ಸಾಧ್ಯತೆಯಿದೆ.

ತುಲಾ ಧ್ಯಾನ ಯೋಗವನ್ನು ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳಿಗಾಗಿ ಆಚರಿಸಬೇಕು. ವ್ಯಾಪಾರ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ನಿಮ್ಮ ಕುಟುಂಬ ಸಾಮಾಜಿಕ ಚಟುವಟಿಕೆ ಎಲ್ಲರನ್ನೂ ಆರಾಮವಾಗಿ ಆಹ್ಲಾದಕರ ಮನಸ್ಥಿತಿಯಲ್ಲಿಡುತ್ತದೆ. ನಿಮ್ಮ ಕಣ್ಣೀರನ್ನು ಒಬ್ಬ ವಿಶೇಷ ಸ್ನೇಹಿತ ಒರೆಸಬಹುದು.

ವೃಶ್ಚಿಕ ನಿಮ್ಮ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ನೀವು ಇಂದು ಆನಂದಿಸಬಹುದು. ನಿಮ್ಮ ತಾಯಿಯ ಬದಿಯಿಂದ ಇಂದು ಹಣಕಾಸಿನ ಲಾಭವನ್ನು ಪಡೆಯುವ ಪೂರ್ಣ ಸಾಧ್ಯತೆ ಇದೆ.ನಿಮ್ಮ ಮಾಮ ಅಥವಾ ತಾತ ನಿಮಗೆ ಆರ್ಥಿಕ ಬೆಂಬಲ ಮಾಡಬಹುದು.

ಧನಸ್ಸು ಸರ್ವತೋಮುಖ ಅಭಿವೃದ್ಧಿ ಸಾಧ್ಯವಿದ್ದಾಗ ಮಾತ್ರ ಮಾನಸಿಕ ಮತ್ತು ನೈತಿಕ ಶಿಕ್ಷಣದ ಜೊತೆ ದೈಹಿಕ ಶಿಕ್ಷಣವನ್ನೂ ತೆಗೆದುಕೊಳ್ಳಿ. ಆರೋಗ್ಯಕರ ಮನಸ್ಸು ಯಾವಾಗಲೂ ಆರೋಗ್ಯಕರ ದೇಹದಲ್ಲಿ ಪರ್ಯವಸಾನವಾಗುತ್ತದೆಂದು ನೆನಪಿಡಿ. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ.

ಮಕರ ಕುಟುಂಬ ಸದಸ್ಯರೊಂದಿಗಿನ ಸಂತಸದ ಪ್ರಯಾಣ ನಿಮಗೆ ಸಮಾಧಾನ ನೀಡುತ್ತದೆ. ಹಿಂದೆ ತಮ್ಮ ಹಣವನ್ನು ಹೂಡಿಕೆ ಮಾಡಿದ ಜನರು ಇಂದು ಆ ಹಣದಿಂದ ಲಾಭ ಪಡೆಯುವ ಸಾಧ್ಯತೆಯಿದೆ. ನಿಮ್ಮ ಮಗುವಿನ ಒಂದು ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಆಮಂತ್ರಣ ಸಂತೋಷದ ಮೂಲವಾಗಬಹುದು.

ಕುಂಭ ಅನಗತ್ಯ ಆಲೋಚನೆಗಳು ನಿಮ್ಮ ಮನಸ್ಸನ್ನು ಆವರಿಸಬಹುದು. ಖಾಲಿ ಮೆದುಳು ದೆವ್ವಗಳ ಕಾರ್ಖಾನೆಯಾದ್ದರಿಂದ ದೈಹಿಕ ವ್ಯಾಯಾಮದಲ್ಲಿ ನಿಮ್ಮನ್ನು ತೊಡಗಿಸಿ ಕೊಳ್ಳಲು ಪ್ರಯತ್ನಿಸಿ. ದೀರ್ಘಕಾಲದ ದೃಷ್ಟಿಕೋನದಿಂದ ಹೂಡಿಕೆ ಮಾಡಬೇಕು. ನಿರೀಕ್ಷೆಗಳನ್ನು ಪೂರೈಸುವುದು ನಿಮ್ಮ ಕನಸನ್ನು ನನಸಾಗಿಸಬಹುದು.

ಮೀನ ಸಂತಸದ ಪ್ರಯಾಣ ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಸಂತೋಷ ತರುತ್ತದೆ. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ. ಕುಟುಂಬದ ಸದಸ್ಯರೊಂದಿಗೆ ಕೆಲವು ವಿಶ್ರಾಂತಿಯ ಕ್ಷಣಗಳನ್ನು ಕಳೆಯಿರಿ. ಇವತ್ತು ಡೇಟ್‌ಗೆ ಹೋದಲ್ಲಿ ವಿವಾದಾತ್ಮಕ ವಿಷಯಗಳನ್ನು ಕೆದಕುವುದನ್ನು ತಪ್ಪಿಸಿ.

ಮಕ್ಕಳ ಜೊತೆ ತಾಯಿ ಆತ್ಮಹತ್ಯೆ ; ದುರಂತ
ನೋಡಿ ರೈಲಿಗೆ ತಲೆಕೊಟ್ಟು ವ್ಯಕ್ತಿ ಸಾವು!

• **ಉದಯವಾಹಿನಿ, ರಾಯಚೂರು:**


ಉದಯವಾಹಿನಿ ಚಿತ್ರ

ಒಂದೇ ಕುಟುಂಬದ ನಾಲ್ವರು ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಹೃದಯವಿದ್ರಾವಕ ಘಟನೆ ರಾಯಚೂರಿನ ಜಲಾಲನಗರದಲ್ಲಿ ನಡೆದಿದೆ.

ಜಲಾಲನಗರ ನಿವಾಸಿ ವಿಷ್ಣು, ಪತ್ನಿ ಅರುಣಾ(40),ಮಕ್ಕಳಾದಶ್ಲೋಕ (10) ಮತ್ತು ಖುಷಿ (4) ಮೃತಪಟ್ಟವರು.ಪತಿ, ಪತ್ನಿ ಮತ್ತು ಇಬ್ಬರು ಮಕ್ಕಳು ಸಾವನ್ನಪ್ಪಿದ್ದಾರೆ. ಪತ್ನಿ ಮತ್ತು ಮಕ್ಕಳು ಮನೆಯಲ್ಲಿ ಶವವಾಗಿ ಪತ್ತೆಯಾದರೆ, ಪತಿ ವಿಷ್ಣು ರೈಲ್ವೆ ಹಳಿಯಲ್ಲಿ ಶವವಾಗಿ ಪತ್ತೆಯಾಗಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ತಾಯಿ ಹಾಗೂ ಇಬ್ಬರು ಮಕ್ಕಳ ಸಾವಿನ ಬಳಿಕ ಪತಿ ರೈಲ್ವೆ ಹಳಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ತಿಳಿದುಬಂದಿದೆ. ಕೌಟುಂಬಿಕ ಕಲಹದ ಹಿನ್ನೆಲೆ ಘಟನೆಗೆ ಕಾರಣ ಎನ್ನಲಾಗುತ್ತಿದೆ. ಅನೇಕ ದಿನಗಳಿಂದ ಕೌಟುಂಬಿಕ ಕಲಹ ನಡೆಯುತ್ತಿದ್ದು, ರವಿವಾರ ಗಂಡ ಹೆಂಡತಿಯ ನಡುವೆ ಜಗಳ ನಡೆದಿದೆ.

ಈ ವೇಳೆ ಬಳಿಕ ಗಂಡ ವಿಷ್ಣುರೆಡ್ಡಿ ಮನೆ ಬಿಟ್ಟು ಸಾಯುತ್ತೇನೆ ಎಂದು ಹೋಗಿದ್ದಾರೆ. ಸ್ವಲ್ಪ ಹೊತ್ತಲ್ಲೇ ಪತ್ನಿ ಅರುಣಾ, ಮಕ್ಕಳಾದ ಶ್ಲೋಕ ಹಾಗೂ ಖುಷಿಗೆ ವಿಷ ನೀಡಿ ತಾನೂ ಸೇವನೆ ಮಾಡಿದ್ದಾರೆ ಎನ್ನಲಾಗಿದೆ.ಘಟನೆಯ ಸ್ವಲ್ಪ ಹೊತ್ತಿನ ಬಳಿಕ ಗಂಡ ವಿಷ್ಣುರೆಡ್ಡಿಗೆ ಮೊಬೈಲ್ ಕರೆ ಮಾಡಿ ಸಂಬಂಧಿಕರೊಬ್ಬರು ವಿಷಯ ತಿಳಿಸಿದ್ದಾರೆ. ಹೆಂಡತಿ ಮಕ್ಕಳು ಸಾವಿನ ಆಘಾತದಿಂದ ರಾಯಚೂರು ತಾಲ್ಲೂಕಿನ ಚಿಕ್ಕಸುಗೂರು ಬಳಿಯ ರೈಲ್ವೆ ಹಳಿಗೆ ಬಿದ್ದು ವಿಷ್ಣು ರೆಡ್ಡಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ರಾಜಕೀಯದಲ್ಲಿ ಮಹಿಳೆಯರನ್ನು
'ಕರಿಬೇವು' ಸೊಪ್ಪಂತೆ ಬಳಸಿ ಬಿಸಾಡಲಾಗುತ್ತೆ

• **ಉದಯವಾಹಿನಿ, ಹಾಸನ:**


ಉದಯವಾಹಿನಿ ಚಿತ್ರ

ಸರ್ಕಾರದಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ನೀಡದಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಮಾಜಿ ಸಚಿವೆ ಸಿ. ಮೋಟಮ್ಮ, ರಾಜಕೀಯದಲ್ಲಿ ಮಹಿಳೆಯರನ್ನು ಪ್ರಮುಖ ನಿರ್ಧಾರ ತೆಗೆದುಕೊಳ್ಳುವ ಹುದ್ದೆಗಳಲ್ಲಿ ಕೂರಿಸುವ ಬದಲು, ಕೇವಲ 'ಕರಿಬೇವು ಸೊಪ್ಪಿನಂತೆ' (ರುಚಿಗಾಗಿ ಬಳಸಿಕೊಂಡು ನಂತರ ಬಿಸಾಡುವಂತೆ) ಪರಿಗಣಿಸಲಾಗುತ್ತಿದೆ ಎಂದು ಟೀಕಿಸಿದರು. ಹಾಸನದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಮಹಿಳೆಯರಿಗೆ ಶೇ. 50ರಷ್ಟು ಮೀಸಲಾತಿ ನೀಡುವ ಬಗ್ಗೆ ಚರ್ಚೆಗಳು ನಡೆಯುತ್ತಿರುವುದು ಮತ್ತು ಸಂಸತ್ತಿನಲ್ಲಿ ಶೇ. 33ರಷ್ಟು ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸುತ್ತಿರುವ ಈ ಸಂದರ್ಭದಲ್ಲೇ, ರಾಜ್ಯ ಸಚಿವ ಸಂಪುಟದಲ್ಲಿ ಮಹಿಳೆಯರಿಗೆ ಸ್ಥಾನ ನೀಡದಿರುವುದು ವಿಷಾದನೀಯ ಎಂದು ಹೇಳಿದರು.

ರಾಜಕೀಯದಲ್ಲಿ ಮಹಿಳೆಯರನ್ನು ಕೇವಲ ಹೆಸರಿಗಷ್ಟೇ ಬಳಸಿಕೊಳ್ಳಲಾಗುತ್ತಿದೆ ಮತ್ತು ಅವರನ್ನು ಅಧಿಕಾರ ಹಾಗೂ ನಿರ್ಧಾರ ತೆಗೆದುಕೊಳ್ಳುವ ಸ್ಥಾನಗಳಿಂದ ದೂರವಿಡಲಾಗಿದೆ. ಈ ಮನಸ್ಥಿತಿ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಇದೆ. ರಾಜಕೀಯದಲ್ಲಿ ಮಹಿಳೆಯರನ್ನು ಕರಿಬೇವು ಸೊಪ್ಪಿನಂತೆ ಬಳಸಿಕೊಳ್ಳಬಾರದು, ಎಂದು ಅವರು ಹೇಳಿದರು.

ತಮ್ಮ ಸಚಿವ ಅವಧಿಯನ್ನು ನೆನಪಿಸಿಕೊಂಡ ಅವರು, ಮಾಜಿ ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಅವರು ನನಗೆ ಸಚಿವ ಸ್ಥಾನ ನೀಡಿದ್ದರು, ಆಗ ನಾನು ಸಮರ್ಥ ಆಡಳಿತದ ಮೂಲಕ ನನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿದೆ. ಅವಕಾಶ ನೀಡಿದರೆ, ಮಹಿಳೆಯರು ತಮ್ಮ ಆಡಳಿತಾತ್ಮಕ ಚಾಕಚಕ್ಯತೆಯನ್ನು ಸಾಬೀತುಪಡಿಸಬಲ್ಲರು. ಮಹಿಳಾ ನಾಯಕರು ಈ ವಿಷಯದ ಬಗ್ಗೆ ಧ್ವನಿ ಎತ್ತಬೇಕು, ಎಂದು ಹೇಳಿದರು.

ಭದ್ರಾ ಮೇಲ್ದಂಡೆ ಯೋಜನೆ ಚಿತ್ರದುರ್ಗ ಶಾಖಾ ಕಾಲುವೆಗೆ ಹೆಚ್ಚುವರಿ 1 ಟಿಎಂಸಿ ಬಿಡುಗಡೆಗೆ ಕ್ರಮ.

• **ಉದಯವಾಹಿನಿ ಚಿತ್ರದುರ್ಗ:**

ಇಲ್ಲಿನ ಶ್ರೀ ಮುರುಘರಾಜೇಂದ್ರ ಕ್ರೀಡಾಂಗಣದಲ್ಲಿ ಶುಕ್ರವಾರ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ 71ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ, ರಾಜ್ಯೋತ್ಸವ ಸಂದೇಶ ನೀಡಿ ಮಾತನಾಡಿದ ಅವರು

ಜಿಲ್ಲೆಯಲ್ಲಿ ಮಳೆ ಕೊರತೆಯಿಂದಾಗಿ ತೆಂಗು, ಅಡಿಕೆ ತೋಟಗಳು ಒಣಗಿ ರೈತರು ತೀವ್ರ ಆತಂಕದಲ್ಲಿದ್ದಾರೆ. ಭದ್ರಾ ಮೇಲ್ದಂಡೆ ಯೋಜನೆಯಡಿ ಚಿತ್ರದುರ್ಗ ಶಾಖಾ ಕಾಲುವೆ ಮೂಲಕ ಹರಿಸಲಾದ 3 ಟಿಎಂಸಿ ನೀರು ಹೊಸದುರ್ಗ, ಹೊಳಲ್ಕೆರೆ, ಹಿರಿಯೂರು ಹಾಗೂ ಚಳ್ಳಕೆರೆ ತಾಲ್ಲೂಕಿನ ಕೆಲವು ಕೆರೆಗಳನ್ನು ತಲುಪಿದೆ. ಆದರೆ ಚಳ್ಳಕೆರೆ ಹಾಗೂ ಹಿರಿಯೂರು ತಾಲ್ಲೂಕಿನ ಕೊನೆಯ ಭಾಗದ ಕೆರೆಗಳಿಗೆ ಇನ್ನೂ ನೀರು ತಲುಪಬೇಕಿದೆ. ಈ ಹಿನ್ನಲೆಯಲ್ಲಿ ತಕ್ಷಣವೇ 1 ಟಿಎಂಸಿ ಹೆಚ್ಚುವರಿ ನೀರು ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಜಲಸಂಪನ್ಮೂಲ ಸಚಿವ ಚಲುವರಾಯಸ್ವಾಮಿ ಅವರಿಗೆ ಮನವಿ ಸಲ್ಲಿಸಿ, ಅನುಮೋದನೆ ಪಡೆಯಲಾಗಿದೆ. ಶೀಘ್ರವೇ ನೀರು ಹರಿಯುವ ವಿಶ್ವಾಸವಿದೆ ಎಂದು ತಿಳಿಸಿದರು.

ಚಿತ್ರದುರ್ಗ ಜಿಲ್ಲೆಯ 35 ಸಾಧಕರಿಗೆ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ:

71ನೇ ಕನ್ನಡ ರಾಜ್ಯೋತ್ಸವ ಸಂಧರ್ಭದಲ್ಲಿ ಚಿತ್ರದುರ್ಗ ಜಿಲ್ಲಾಡಳಿತ ಹಾಗೂ



ಉದಯವಾಹಿನಿ ಚಿತ್ರ

ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 37 ಸಾಧಕರಿಗೆ ಸನ್ಮಾನಿಸಲಾಯಿತು.

ಚಿತ್ರದುರ್ಗ ನಗರದ ಸರ್ಕಾರಿ ಕೋಟೆ ಪ್ರೌಢಶಾಲೆ ಹಾಗೂ ಸರ್ಕಾರಿ ಪದವಿಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ವಿದ್ಯಾರ್ಥಿಗಳು, ಮಹಾರಾಣಿ ಶಾಲಾ ವಿದ್ಯಾರ್ಥಿಗಳು ಹಾಗೂ ಗಾರ್ಡಿಯನ್ ಏಂಜಲ್ಸ್ ಶಾಲಾ ವಿದ್ಯಾರ್ಥಿಗಳು ಕನ್ನಡ ನಾಡು-ನುಡಿ ಸಂಸ್ಕೃತಿ ಹಾಗೂ ಮಹತ್ವ ಸಾರುವಂತಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.ಕನ್ನಡ ರಾಜ್ಯೋತ್ಸವದ ಅಂಗವಾಗಿ ನಗರದ ಹೊಳಲ್ಕೆರೆ ರಸ್ತೆಯ ನೀಲಕಂಠೇಶ್ವರ ದೇವಸ್ಥಾನದಿಂದ ಶ್ರೀ ಭುವನೇಶ್ವರಿ ಭಾವಚಿತ್ರ ಹಾಗೂ ಕಲಾತಂಡಗಳು ಹಾಗೂ ಸ್ತಬದ್ಧಚಿತ್ರಗಳೊಂದಿಗೆ ಶ್ರೀ ಮುರುಘರಾಜೇಂದ್ರ ಕ್ರೀಡಾಂಗಣದವರೆಗೆ ಮೆರವಣಿಗೆ ನಡೆಸಲಾಯಿತು.

> ಚಿತ್ರದುರ್ಗ ಸೇರಿದಂತೆ ನಾಲ್ಕು ಜಿಲ್ಲೆಗಳ ವ್ಯಾಪ್ತಿಗೆ ಒಳಪಡುವ ಭದ್ರಾ ಮೇಲ್ದಂಡೆ ಯೋಜನೆಯನ್ನು ಅನುಷ್ಠಾನಗೊಳಿಸಿ, ಮಧ್ಯ ಕರ್ನಾಟಕದ ಬರಪೀಡಿತ ಪ್ರದೇಶಗಳಿಗೆ ನೀರು ತಲುಪಿಸಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು ಹೇಳಿದರು. - ಜಿಲ್ಲಾ ಉಸ್ತುವಾರಿ ಸಚಿವ ಟಿ.ರಘುಮೂರ್ತಿ

ಕಾರ್ಯಕ್ರಮದಲ್ಲಿ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಪಿ.ರಘು, ಜಿಲ್ಲಾ ಗ್ಯಾರಂಟಿ ಯೋಜನಾ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಡಿ.ಎನ್.ಮೈಲಾರಪ್ಪ, ಜಿಲ್ಲಾಧಿಕಾರಿ ಎಸ್.ರಮ್ಯಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆಕಾಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಉಪವಿಗಾಧಿಕಾರಿ ಡಾ.ಕೆ.ಜೆ.ಕಾಂತರಾಜ್, ತಹಶೀಲ್ದಾರ್ ಬೀಬೀ ಫಾತೀಮಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ಎಂ.ಗುರುನಾಥ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

ಪ್ರತಿ ಟನ್ ಕಬ್ಬಿಗೆ 3,500 ದರ ನೀಡಲು ಕಾರ್ಖಾನೆಗಳು ಸಿದ್ಧ

ರೈತರ ಬೇಡಿಕೆ ಹಾಗೂ ಕಾರ್ಖಾನೆಗಳ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದೆ ಎಂದು ಹೇಳಿದರು.

• **ಉದಯವಾಹಿನಿ ಬೆಳಗಾವಿ:**

ಜಿಲ್ಲೆಯಲ್ಲಿ ಪ್ರತಿ ಟನ್ ಕಬ್ಬಿಗೆ 3,500 ರೂ. ಪಾವತಿಸಲು ಕಾರ್ಖಾನೆ ಮಾಲೀಕರು ಸಿದ್ಧರಿದ್ದಾರೆ. ಆದರೆ, ರಾಜ್ಯದ ಇತರೆ ಜಿಲ್ಲೆಗಳಲ್ಲಿ ಇದಕ್ಕಿಂತ ಕಡಿಮೆ ದರ ನೀಡಲಾಗುತ್ತಿದೆ. ರೈತರ ಬೇಡಿಕೆ ಹಾಗೂ ಕಾರ್ಖಾನೆಗಳ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

1 : ಆರ್ಥಿಕ ಸಾಮರ್ಥ್ಯ ಕಾರ್ಖಾನೆಗಳಿಗೆ ಇರಬೇಕು
2 : ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವುದಿಲ್ಲ
3 : ಹೆಚ್ಚಿನ ದರ ನೀಡಲು ಕಾರ್ಖಾನೆಗಳ ಸಿದ್ಧ

ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ 71ನೇ ಕನ್ನಡ ರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿದ ಬಳಿಕ ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ಕಬ್ಬು ಬೆಳೆಗಾರರ ಸಮಸ್ಯೆ ಕುರಿತು ಕಳೆದ ವಾರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಸಭೆ ನಡೆಸಲಾಗಿತ್ತು.

ಬೆಳಗಾವಿಗೆ ಬಂದಾಗ ವಿಧಾನಸಭೆಯಲ್ಲಿಯೂ ಈ ಕುರಿತು ಸುದೀರ್ಘವಾಗಿ ಚರ್ಚಿಸಲಾಗಿದೆ. ಆದರೆ, ರೈತರು


ಉದಯವಾಹಿನಿ ಚಿತ್ರ

ಮತ್ತು ಸಕ್ಕರೆ ಕಾರ್ಖಾನೆಗಳ ಮಾಲೀಕರ ನಡುವೆ ದರ ನಿಗದಿ ವಿಚಾರದಲ್ಲಿ ಇನ್ನೂ ಗೊಂದಲ ಮುಂದುವರಿದಿದೆ ಎಂದರು.

ಕಬ್ಬು ಬೆಳೆಗಾರರ ಬೇಡಿಕೆಗಳನ್ನು ಈಡೇರಿಸುವ ಆರ್ಥಿಕ ಸಾಮರ್ಥ್ಯ ಕಾರ್ಖಾನೆಗಳಿಗೆ ಇರಬೇಕು. ಈ ಸಮಸ್ಯೆ ಸಂಪೂರ್ಣವಾಗಿ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವುದಿಲ್ಲ, ಸಕ್ಕರೆಯ ಕನಿಷ್ಠ ಮಾರಾಟ ಬೆಲೆ ಹೆಚ್ಚಳ ಮಾಡುವ ಅಧಿಕಾರ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿದೆ. ಕೇಂದ್ರ ಸರ್ಕಾರ ಎಂಎಸ್‌ಪಿ ಹೆಚ್ಚಳ ಮಾಡಿದರೆ ಸಕ್ಕರೆ ಕಾರ್ಖಾನೆಗಳಿಗೆ ಆರ್ಥಿಕವಾಗಿ ಅನುಕೂಲವಾಗಲಿದೆ. ಇದರಿಂದ ರೈತರಿಗೆ ಪ್ರತಿ ಟನ್ ಕಬ್ಬಿಗೆ ಹೆಚ್ಚಿನ ದರ ನೀಡಲು ಕಾರ್ಖಾನೆಗಳ ಮಾಲೀಕರು ಸಿದ್ಧರಿದ್ದಾರೆ. ಹೀಗಾಗಿ ಕೇಂದ್ರ

> ರೈತರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವುದು ಮುಖ್ಯ. ಕಬ್ಬಿನ ದರ ನಿಗದಿ, ಕಾರ್ಖಾನೆಗಳ ಆರ್ಥಿಕ ಸಾಮರ್ಥ್ಯ ಹಾಗೂ ಸಕ್ಕರೆಯ ಮಾರುಕಟ್ಟೆ ಬೆಲೆ ಇವೆಲ್ಲವನ್ನೂ ಪರಿಗಣಿಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದೆ ಎಂದು ಹೇಳಿದರು. -ಸತೀಶ್ ಜಾರಕಿಹೊಳಿ

ಸರ್ಕಾರ ಈ ವಿಚಾರದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಅಭಿಪ್ರಾಯ ಪಟ್ಟರು. ಕಬ್ಬಿನ ತೂಕದಲ್ಲಿ ಮೋಸವಾಗುತ್ತಿದೆ ಎಂಬ ರೈತರ ಆರೋಪಕ್ಕೆ ಪ್ರತಿಕ್ರಿಯಿಸಿದ ಸತೀಶ್ ಜಾರಕಿಹೊಳಿ, ಪ್ರತಿ 10 ಕಿಲೋಮೀಟರ್‌ಗೆ. ಒಂದರಂತೆ ಖಾಸಗಿ ತೂಕದ ಯಂತ್ರಗಳ ವ್ಯವಸ್ಥೆಯಿದೆ. ರೈತರು ತಮ್ಮ ಕಬ್ಬನ್ನು ತಾವೇ ತೂಕ ಮಾಡಿಸಿಕೊಂಡು ಕಾರ್ಖಾನೆಗಳಿಗೆ ಪೂರೈಸುವ ಅವಕಾಶವಿದೆ. ಈವರೆಗೆ ತೂಕದಲ್ಲಿ ಮೋಸವಾಗಿರುವ ಕುರಿತು ಯಾವುದೇ ರೈತರು ಅಧಿಕೃತವಾಗಿ ದೂರು ನೀಡಿಲ್ಲ. ಒಂದು ವೇಳೆ ರೈತರು ದೂರು ಸಲ್ಲಿಸಿದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಪರಿಶೀಲನೆ ನಡೆಸುವಂತೆ ಸೂಚಿಸಲಾಗುವುದು ಎಂದರು.

ಹಾಲು ಉತ್ಪಾದಕರಿಗೆ ಆರ್ಥಿಕವಾಗಿ ಅನುಕೂಲ ಕಲ್ಪಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಹಾಲಿನ ದರವನ್ನು ಹೆಚ್ಚಳ ಮಾಡಿದೆ.

> ಪ್ರತಿ ವರ್ಷದಂತೆ ಚಳಿಗಾಲ ಅಧಿವೇಶನ ಬೆಳಗಾವಿಯಲ್ಲಿ ನಡೆಯಲಿದೆ. ಇಡೀ ಕರ್ನಾಟಕದ ಬಗ್ಗೆ ಬೆಳಕು ಚೆಲ್ಲಬಹುದು. ಆಡಳಿತ, ಈ ಭಾಗದ ಸಮಸ್ಯೆಗಳು, ಅಭಿವೃದ್ಧಿ ಬಗ್ಗೆ ಚರ್ಚಿಸಬಹುದು. ಡಿ.15ರ ಬಳಿಕ ಜಿ.ಪಂ, ತಾ.ಪಂ ಚುನಾವಣೆಗೆ ಅಧಿಸೂಚನೆ ಹೊರಡಿಸುತ್ತಾರೆ ಎಂದು ಹೇಳಿದರು.

ರೈತರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡೇ ಈ ನಿರ್ಧಾರ ಕೈಗೊಳ್ಳಲಾಗಿದೆ. ಹಾಲಿನ ದರ ಹೆಚ್ಚಳದಿಂದ ರೈತರಿಗೆ ಹೆಚ್ಚಿನ ಹಣ ದೊರೆಯಲಿದೆ. ಹಾಲು ಉತ್ಪಾದಕರಿಗೆ ಅನುಕೂಲವಾಗಬೇಕು ಎಂಬ ಉದ್ದೇಶದಿಂದ ಸರ್ಕಾರ ಈ ಕ್ರಮ ಕೈಗೊಂಡಿದೆ. ಹೈನುಗಾರಿಕೆಯನ್ನು ಅವಲಂಬಿಸಿರುವ ರೈತ ಕುಟುಂಬಗಳ ಆದಾಯ ಹೆಚ್ಚಳಕ್ಕೆ ಇದು ನೆರವಾಗಲಿದೆ ಎಂದು ಸಚಿವರು ಸಮರ್ಥಿಸಿಕೊಂಡರು. 71ನೇ ರಾಜ್ಯೋತ್ಸವ ನಿಮಿತ್ತ ಜಿಲ್ಲಾ ಕ್ರೀಡಾಂಗಣದಲ್ಲಿ ಧ್ವಜಾರೋಹಣ ನೆರವೇರಿಸಿದ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರು, ಗೌರವ ವಂದನೆ ಸ್ವೀಕರಿಸಿದರು. ಆಕರ್ಷಕ ಪಥಸಂಚಲನ ನಡೆಯಿತು. ಪತ್ರಕರ್ತರು, ಕನ್ನಡಪರ ಹೋರಾಟಗಾರರು ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಿದ್ದರಾಮಯ್ಯ-ಡಿಕೆಶಿ ನಡುವೆ ಭಿನ್ನಾಭಿಪ್ರಾಯ ಮೂಡಿಸುವ ಪ್ರಯತ್ನ ಫಲಿಸದು

• **ಉದಯವಾಹಿನಿ ಬಳ್ಳಾರಿ:**

ಬಳ್ಳಾರಿಯಲ್ಲಿ ಕನ್ನಡ ರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸುವ ನನ್ನ ಕನಸು ನನಸಾಗಿದೆ ಎಂದು ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದರು.ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ಟಿಂಗ್ ಆಪರೇಷನ್‌ಗೆ ಸಂಬಂಧಿಸಿದಂತೆ ದೂರು ನೀಡಲು ಸಿದ್ದರಾಮಯ್ಯ ಅವರು ದೆಹಲಿಗೆ ತೆರಳಿಲ್ಲ. ದೆಹಲಿಯಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಭಾಗವಹಿಸಲು ಹೋಗಿದ್ದಾರೆ.

ಕನ್ನಡ ರಾಜ್ಯೋತ್ಸವದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸೇರಿದಂತೆ ರಾಜ್ಯದ ಯಾವ ಸಚಿವರೂ ದೆಹಲಿಗೆ ತೆರಳುತ್ತಿಲ್ಲ. ಹೀಗಾಗಿ ಸಿದ್ದರಾಮಯ್ಯ ಅವರು ಪ್ರತಿಭಟನೆಯಲ್ಲಿ ಭಾಗವಹಿಸಲು ಹೋಗುತ್ತಿದ್ದಾರೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಕರೆ ಮಾಡಿದ ಹಿನ್ನೆಲೆಯಲ್ಲಿ ಅವರು ತೆರಳಿದ್ದಾರೆ ಎಂದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಸ್ಟಿಂಗ್ ಆಪರೇಷನ್ ಮಾಡಿಸಿರುವ ಆರೋಪದ ಕುರಿತು ಪ್ರತಿಕ್ರಿಯಿಸಿದ ಜಮೀರ್, ಡಿಕೆಶಿ ಮುಖ್ಯಮಂತ್ರಿ ಆಗಿರುವುದನ್ನು ಕೆಲವರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವೆ ಭಿನ್ನಾಭಿಪ್ರಾಯ ಮೂಡಿಸುವ ಪ್ರಯತ್ನ


ಉದಯವಾಹಿನಿ ಚಿತ್ರ

ನಡೆಯುತ್ತಿದೆ. ಆದರೆ, ಅಂತಹ ಪ್ರಯತ್ನಗಳು ಯಾವುದೇ ಕಾರಣಕ್ಕೂ ಯಶಸ್ವಿಯಾಗುವುದಿಲ್ಲ ಎಂದು ಹೇಳಿದರು. ಸ್ಟಿಂಗ್ ಆಪರೇಷನ್ ಮಾಡಿರುವುದು ನಾನೇ ಎಂದು ಖಾಸಗಿ ವಾಹಿನಿ ಮುಖ್ಯಸ್ಥರೇ ಹೇಳಿದ್ದಾರೆ. ಆದರೆ, ಅದರಲ್ಲಿ ಯಾವುದೇ ಸತ್ಯಾಂಶ ಇಲ್ಲ ಎಂದೂ ಅವರೇ ಒಪ್ಪಿಕೊಂಡಿದ್ದಾರೆ.

ಯಾವುದೋ ವಿಷಯ ಇದೆ ಎಂದು ಸ್ಟಿಂಗ್ ಮಾಡಿದ್ದು, ಕೊನೆಗೆ ಯಾವುದೇ ವಿಚಾರ ಇಲ್ಲ ಎಂಬುದು ತಿಳಿದುಬಂದಿದೆ. ಅವರೆಲ್ಲ ಬ್ಲ್ಯಾಕ್‌ಮೇಲರ್‌ಗಳು ಎಂಬ ಕಾರಣಕ್ಕೆ ಆ ವಿಚಾರವನ್ನು ಕೈಬಿಟ್ಟಿದ್ದೇನೆ ಎಂದು ಅವರು ಹೇಳಿದ್ದಾರೆ.ಈ ಹಿನ್ನೆಲೆಯಲ್ಲಿ ಪಕ್ಷವು ತೀರ್ಮಾನ ಕೈಗೊಂಡು ಕೃಪಾ ಆಳ್ವ ಅವರನ್ನು ಅಮಾನತುಗೊಳಿಸಿದೆ ಎಂದು ತಿಳಿಸಿದರು.

151 ಮಾರ್ಕ್ಸ್ ಪಡೆದಿದ್ದ ಶಂಕರ ಬನ್ನೂರ ಕಳ್ಳಾಟ ಬಯಲು, ಪೊಲೀಸ್ ವಶಕ್ಕೆ

• **ಉದಯವಾಹಿನಿ ಹಾನಗಲ್ :**

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ಗ್ರಾಮ ಆಡಳಿತ ಅಧಿಕಾರಿ ನೇಮಕಾತಿ ಪರೀಕ್ಷೆಯಲ್ಲಿ 151.25 ಅಂಕ ಗಳಿಸಿ ಇಡೀ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದ ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ಎಲೆವೇಟೆಯ ನಿವಾಸಿ ಶಂಕರ ಬನ್ನೂರ ಎಂಬ ಅಭ್ಯರ್ಥಿಯ ಅಕ್ರಮ ಸಿಸಿಟಿವಿ ತನಿಖೆಯಿಂದ ಬಯಲಾಗಿದ್ದು, ಆತನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಹಾವೇರಿ ಜಿಲ್ಲೆಯ ಶಿಗ್ಗಾಂವಿಯ ಪರೀಕ್ಷಾ ಕೇಂದ್ರದಲ್ಲಿ ಅಕ್ಟೋಬರ್ 4 ರಂದು ನಡೆದಿದ್ದ VAO ಪರೀಕ್ಷೆಯ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಶಂಕರ ಬನ್ನೂರನ ಕಳ್ಳಾಟ ಬಯಲಾಗಿದೆ. ಪರೀಕ್ಷಾ ಕೇಂದ್ರದ ಒಳಗೆ ಹೋಗುವಾಗ ಕೇವಲ ಆಧಾರ್ ಕಾರ್ಡ್ ಮಾತ್ರ ಪರಿಶೀಲಿಸಿದ್ದರಿಂದ, ಈತ ತನ್ನ ಮೊಬೈಲ್ ಫೋನನ್ನು ಕೊಠಡಿಯೊಳಗೆ ತೆಗೆದುಕೊಂಡು ಹೋಗಿದ್ದನು. ಕೊನೆಯ ಸಾಲಿನಲ್ಲಿ ತನಗೆ ನಿಗದಿಯಾಗಿದ್ದ ಸೀಟಿನಲ್ಲಿ ಕುಳಿತು, ಇನ್ವಿಜಿಲೇಟರ್‌ಗಳ (ಪರೀಕ್ಷಾ ಮೇಲ್ವಿಚಾರಕರು) ಕಣ್ಣು ತಪ್ಪಿಸಿ ರಹಸ್ಯವಾಗಿ ಮೊಬೈಲ್ ಮೂಲಕ ಪ್ರಶ್ನೆ ಪತ್ರಿಕೆಯನ್ನು ಸ್ಕ್ಯಾನ್ ಮಾಡಿ 'ಗೂಗಲ್ ಲೆನ್ಸ್' ಆ್ಯಪ್ ಬಳಸಿ ಉತ್ತರಗಳನ್ನು ಹುಡುಕಿ OMR ಶೀಟ್‌ನಲ್ಲಿ ಗುರುತು ಮಾಡಿದ್ದನು. ಈ ಸಂಪೂರ್ಣ ದೃಶ್ಯ



ಉದಯವಾಹಿನಿ ಚಿತ್ರ

ಪರೀಕ್ಷಾ ಕೊಠಡಿಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ವಿಎಒ ಪರೀಕ್ಷೆಗಿಂತ ಕೇವಲ 20 ದಿನಗಳ ಮುನ್ನ ನಡೆದಿದ್ದ KSRP ಕಾನ್‌ಸ್ಟೇಬಲ್ ಪರೀಕ್ಷೆಯಲ್ಲಿ ಈತ ಕೇವಲ 25 ಅಂಕ ಗಳಿಸಿದ್ದನು. ಆದರೆ, ಅದಾದ ಕೆಲವೇ ದಿನಗಳಲ್ಲಿ ನಡೆದ ಗ್ರಾಮ ಆಡಳಿತ ಅಧಿಕಾರಿ ಪರೀಕ್ಷೆಯಲ್ಲಿ ಬರೋಬ್ಬರಿ 151.25 ಅಂಕ ಗಳಿಸಿ ಇಡೀ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದನು.

ಮಹಿಳಾ ಸಬಲೀಕರಣಕ್ಕೆ ಹೊಸ ವೇದಿಕೆ 'ಅಕ್ಕ ಕೆಫೆ'ಗೆ ತಹಶೀಲ್ದಾರ್ ಜಮಖಂಡಿ ಉದ್ಘಾಟನೆ

• **ಉದಯವಾಹಿನಿ,ಚಿಂಚೋಳಿ:**

ಅಕ್ಕ ಕೆಫೆ ಕೇವಲ ಒಂದು ಕೆಫೆ ಅಲ್ಲ ಇದು ಗ್ರಾಮೀಣ ಮಹಿಳೆಯರ ಸ್ವಾವಲಂಬಿ ಬದುಕಿನ ಸಂಕೇತವಾಗಿದೆ ಎಂದು ತಹಸೀಲ್ದಾರ್ ಸುಬ್ಬಣ್ಣ ಜಮಖಂಡಿ ಹೇಳಿದರು. ಪಟ್ಟಣದ ಚಂದಾಪೂರದ ತಾಲ್ಲೂಕಾ ಪಂಚಾಯತ್ ಕಛೇರಿಯ ಮುಂಭಾಗದ ಆವರಣದಲ್ಲಿ ರಾಷ್ಟ್ರೀಯ ಜೀವನೋಪಾಯ ಅಭಿಯಾನ ಕರ್ನಾಟಕ ಅಡಿಯಲ್ಲಿ ಮಹಿಳಾ ಸ್ವ-ಸಹಾಯ ಸಂಘಗಳ ಸಬಲೀಕರಣಕ್ಕಾಗಿ ಸ್ಥಾಪಿಸಲಾದ ಅಕ್ಕ ಕೆಫೆ ಉದ್ಘಾಟಿಸಿ ಮಾತನಾಡಿ ಅವರು,ಮಹಿಳೆಯರು ತಯ್ಯಾರಿಸುವ ಸಿರಿಧಾನ್ಯ ಸಾವಯುವ ಆಹಾರ ಪದಾರ್ಥಗಳಿಗೆ ಮಾರುಕಟ್ಟೆ ಕಲ್ಪಿಸುವ ಉದ್ದೇಶದಿಂದ ಈ ಕೆಫೆ ಪ್ರಾರಂಭಿಸಲಾಗಿದೆ ಅಧಿಕಾರಿಗಳು ಸಾರ್ವಜನಿಕರು ಆಗಮಿಸಿ ಉದ್ಯೋಗ ದ್ವಿಗುಣಗೊಳಿಸಲು ಪ್ರೋತ್ಸಾಹಿಸಬೇಕು ಎಂದರು.

ತಾಪಂ.ಇಓ ಸಂತೋಷ ಚವ್ಹಾಣ ಮಾತನಾಡಿ ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ನ.01ರಂದು ಪ್ರಾರಂಭಿಸಲಾಗುತ್ತಿದೆ,ಸಂಪೂರ್ಣವಾಗಿ ಮಹಿಳಾ ಸ್ವಸಹಾಯ ಸಂಘದ ಸದಸ್ಯರಿಂದಲ್ಲೇ ನಿರ್ವಹಣೆ ಮಾಡಲಾಗುತ್ತದೆ,ಜೋಳದ ರೊಟ್ಟಿ,ಸಿರಿಧಾನ್ಯ,ತಿಂಡಿಗಳು,ಉಪಹಾರ,ಮನೆಯ ಊಟದ ಶುಚಿರುಚಿಯಾದ ಆಹಾರ ಕಡಿಮೆ ದರದಲ್ಲಿ ಸಿಗಲಿದೆ,ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ ಮತ್ತು ಉದ್ಯೋಗ ಸಿಗಲಿದೆ ಈ ಯೋಜನೆಯ ಯಶಸ್ಸಿಗೆ ಎಲ್ಲರ ಸಹಕಾರ ಅಗತ್ಯವಿದೆ.

ಮುಖ್ಯಮಂತ್ರಿಗಳು 2025-26ನೇ ಬಜೆಟ್ನಲ್ಲಿ ಯೋಜನೆ ಘೋಷಿಸ


ಉದಯವಾಹಿನಿ ಚಿತ್ರ

25ಕೋಟಿ ರೂ.ಅನುದಾನ ಮಂಜೂರು ಮಾಡಲಾಗಿತ್ತು,ಅದರಂತೆ ರಾಜ್ಯಾದ್ಯಂತ 2500 ಅಕ್ಕಕೆಫೆ ಕಿಯೋಸ್ಕ್ ಗಳನ್ನು ಪ್ರಾರಂಭಿಸುವ ಗುರಿ,ಮೊದಲ ಹಂತದಲ್ಲಿ 50 ಆಧುನಿಕ ಕೆಫೆಗಳನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸ್ಥಾಪನೆ, ಅರ್ಹ ಮಹಿಳೆಯರಿಗೆ ಮೂಲಸೌಕರ್ಯಕ್ಕಾಗಿ 15ಲಕ್ಷ ಲಕ್ಷದವರೆಗೆ ಸಹಾಯಧನ ನೀಡಿ ಪ್ರಾರಂಭಿಸಲಾಗಿದೆ ಎಂದರು.

ಲ್ಯಾಂಡ್ ಆರ್ಮಿ ಎಇಇ ರಾಜಶೇಖರ,ಜೆಇ ನಾಗನಾಥ,ಸ್ವಸಹಾಯ ಸಂಘದ ವ್ಯವಸ್ಥಾಪಕ ಮಲ್ಲಿಕಾರ್ಜುನ ಹಿರೇಮಠ,ಬಿಆರ್ಸಿ ಬಸವರಾಜ ಪೋಲಕಪಳ್ಳಿ, ವನಿತಾ, ಆಶಾ ಶ್ರೀನಿವಾಸ ಗುತ್ತೇದಾರ, ಪ್ರಾಚಾರ್ಯರು ಮಲ್ಲಿಕಾರ್ಜುನ ಪಾಲಾಮೋರ್,ಸುರೇಶ ಕೊರವಿ,ಭೀಮಶಂಕರ,ಶೋಭವತಿ, ಮಹಾರುಣಿಬಾಯಿ,ಗುರಲಿಂಗ ಪಡಶೆಟ್ಟಿ,ಗೋಪಾಲ ಎಂಪಿ,ವೀರಭದ್ರ ಮಲಕೂಡ ಸೇರಿದಂತೆ ಅನೇಕರಿದ್ದರು.

ಕುಟುಂಬ ಸಮೇತರಾಗಿ ಕಲ್ಕತ್ತಾದೇವಿಗೆ ವಿಶೇಷ ಪೂಜೆ

• **ಉದಯವಾಹಿನಿ, ಜೇವರ್ಗಿ:**

ಜೇವರ್ಗಿಯ ಸುಪ್ರಸಿದ್ಧ ಆರಾಧ್ಯ ದೇವತೆಯಾದ ಶ್ರೀ ಕಲ್ಕತ್ತಾದೇವಿ (ಶ್ರೀ ಮಹಾಲಕ್ಷ್ಮೀ ದೇವಿ) ಜಾತ್ರಾ ಮಹೋತ್ಸವದ ಅಂಗವಾಗಿ, ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಡಾ. ಅಜಯ್ ಧರ್ಮಸಿಂಗ್ ಅವರು ಕುಟುಂಬ ಸಮೇತರಾಗಿ ದೇವಿಯ ದರ್ಶನ ಪಡೆದು ಭಕ್ತಿಭಾವದಿಂದ ವಿಶೇಷ ಪೂಜೆ ಸಲ್ಲಿಸಿದರು.

ದೇವಿಯ ಕೃಪಾಶೀರ್ವಾದ ಪಡೆದು, ನಾಡಿನ ಸಮಸ್ತ ಜನರ ಸುಖ, ಶಾಂತಿ, ಸಮೃದ್ಧಿ ಹಾಗೂ ಉತ್ತಮ ಆರೋಗ್ಯಕ್ಕಾಗಿ ಪ್ರಾರ್ಥಿಸಿದರು. ಬಳಿಕ ದೇವಿಯ ಪ್ರಥಮ ಪ್ರಮುಖ ರಥೋತ್ಸವದಲ್ಲಿ ಪಾಲ್ಗೊಂಡು, ರಥ ಎಳೆಯುವ ಮೂಲಕ ರಥೋತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡಿದರು. ಈ ವಿಶೇಷ ಸಂದರ್ಭದಲ್ಲಿ ಧರ್ಮಸಿಂಗ್ ಫೌಂಡೇಶನ್ ವತಿಯಿಂದ ಭಕ್ತಾದಿಗಳಿಗೆ ಪ್ರಸಾದ ಸೇವೆಯನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಅಲ್ಲದೆ, ಹಾಲುಮತ ಸಮಾಜದ ಮುಖಂಡರ ಕಡೆಯಿಂದ ಭಕ್ತರಿಗೆ ಬಾನ ವಿತರಣೆ ಕಾರ್ಯಕ್ರಮವನ್ನು ಸಹ ನೆರವೇರಿಸಲಾಯಿತು. ''ರೈತರು, ಕಾರ್ಮಿಕರು ಸೇರಿದಂತೆ ಸಮಾಜದ ಪ್ರತಿಯೊಂದು ವರ್ಗದ ಜನರ ಬದುಕು ಹಸನಾಗಲಿ. ಎಲ್ಲರ ಜೀವನದಲ್ಲಿ ಸಂತೋಷ, ನೆಮ್ಮದಿ, ಸೌಹಾರ್ದತೆ ಮತ್ತು ಸಮೃದ್ಧಿ ನೆಲೆಸಲಿ ಎಂದು ಶ್ರೀ ದೇವಿಯಲ್ಲಿ ಭಕ್ತಿಪೂರ್ವಕವಾಗಿ ಪ್ರಾರ್ಥಿಸಿದ್ದೇನೆ,'' ಎಂದು ಡಾ. ಅಜಯ್ ಧರ್ಮಸಿಂಗ್ ಹೇಳಿದರು. ಜೇವರ್ಗಿ ಭಾಗದ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯಲ್ಲಿ ಶ್ರೀ ಕಲ್ಕತ್ತಾದೇವಿ ಜಾತ್ರಾ ಮಹೋತ್ಸವಕ್ಕೆ ವಿಶಿಷ್ಟ ಸ್ಥಾನವಿದೆ. ಜನರನ್ನು ಒಂದೇ ಭಾವನೆಯಲ್ಲಿ ಒಗ್ಗೂಡಿಸುವ ಇಂತಹ ಜಾತ್ರೆಗಳು ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಸಾಮಾಜಿಕ ಸೌಹಾರ್ದತೆಯ ಪ್ರತೀಕವಾಗಿವೆ ಎಂದು ಅವರು ತಿಳಿಸಿದರು.

ಕಸ್ತೂರಿ ಕನ್ನಡ ಕಲಿಯುತ್ತಿರುವ ಹೊರರಾಜ್ಯಗಳ ವಲಸೆ ಕಾರ್ಮಿಕರ ಮಕ್ಕಳು

ಅನ್ಯ ಭಾಷೆಯ ನೆಲದಿಂದ ಬಂದು, ಕನ್ನಡದ ಮಣ್ಣಿನ ಸೊಗಡು ಕನ್ನಡ ನುಡಿಯುತ್ತಿರುವ ಪುಟಾಣಿಗಳ ಕಲಿಕೆ, ಕನ್ನಡ ರಾಜ್ಯೋತ್ಸವದ ಸಂಭ್ರಮಕ್ಕೆ ಮೆರುಗು ತಂದಿದೆ.

• **ಉದಯವಾಹಿನಿ, ಮಂಗಳೂರು:**

ರಾಜ್ಯಾದ್ಯಂತ ನವೆಂಬರ್ 1ರ ಕನ್ನಡ ರಾಜ್ಯೋತ್ಸವದ ಸಂಭ್ರಮ ಗರಿಗೆದರಿರುವ ಹೊತ್ತಿನಲ್ಲಿ, ಕರಾವಳಿ ನಗರಿ ಮಂಗಳೂರಿನ ಕಡಲತೀರದ ಬೆಂಗ್ರೆಯ ಸರ್ಕಾರಿ ಶಾಲೆಯೊಂದರಲ್ಲಿ ಕನ್ನಡದ ಸೊಬಗು ಅಕ್ಷರಶಃ ಕಂಗೊಳಿಸುತ್ತಿದೆ. ಉತ್ತರ ಭಾರತ ಹಾಗೂ ಅನ್ಯ ರಾಜ್ಯಗಳಿಂದ ಹೊಟ್ಟೆಪಾಡಿಗಾಗಿ ಬಂದಿರುವ ವಲಸೆ

1 : ಹೊರರಾಜ್ಯಗಳ ವಲಸೆ ಕಾರ್ಮಿಕರ ಮಕ್ಕಳು
2 : ಅಕ್ಷರಾಭ್ಯಾಸದಿಂದ ಕನ್ನಡದ ಮುಖ್ಯವಾಹಿನಿಗೆ
3 : ನಿರಂತರ ಪ್ರಯತ್ನ ಇಂದು ಕನ್ನಡ ಓದುತ್ತಾರೆ

ಕಾರ್ಮಿಕರ ಮಕ್ಕಳು, ಮಾತೃಭಾಷೆ ಹಿಂದಿ, ಭೋಜ್‌ಪುರಿ, ತೆಲುಗನ್ನು ಬದಿಗಿಟ್ಟು ಕನ್ನಡವನ್ನು ಸ್ಪಷ್ಟವಾಗಿ ಮಾತನಾಡುತ್ತಾ, ಹಾಡು, ನಾಟಕಗಳಲ್ಲಿ ಮಿಂಚುತ್ತಿರುವುದು ನಾಡಹಬ್ಬದ ಹೊತ್ತಿನಲ್ಲಿ ಕನ್ನಡಿಗರು ಹೆಮ್ಮೆಪಡುವಂತೆ ಮಾಡಿದೆ.

ಮಂಗಳೂರು ಉತ್ತರ ವಲಯ ವ್ಯಾಪ್ತಿಯ 'ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆ, ಸ್ಯಾಂಡ್‌ಪಿಟ್ ಬೆಂಗ್ರೆ' ಕಡಲಂಚಿನ ಒಂದು ಪುಟ್ಟ ಸರ್ಕಾರಿ ಶಾಲೆ. ಇಲ್ಲಿ 1ರಿಂದ 7ನೇ ತರಗತಿವರೆಗೆ ಒಟ್ಟು 80 ವಿದ್ಯಾರ್ಥಿಗಳು


ಉದಯವಾಹಿನಿ ಚಿತ್ರ

ವ್ಯಾಸಂಗ ಮಾಡುತ್ತಿದ್ದಾರೆ. ಇದರಲ್ಲಿ ಬಿಹಾರ, ಉತ್ತರ ಪ್ರದೇಶ, ಜಾರ್ಖಂಡ್, ಪಶ್ಚಿಮ ಬಂಗಾಳ, ಗುಜರಾತ್ ಹಾಗೂ ಆಂಧ್ರಪ್ರದೇಶ ಸೇರಿದಂತೆ ಹೊರರಾಜ್ಯಗಳಿಂದ ಬಂದಿರುವ ವಲಸೆ ಕಾರ್ಮಿಕರ ಬರೋಬ್ಬರಿ 30ಕ್ಕೂ ಅಧಿಕ ಮಕ್ಕಳು ಕಲಿಯುತ್ತಿರುವುದು ವಿಶೇಷ. ತಮ್ಮ ತಂದೆ - ತಾಯಿ ಕಟ್ಟಡ ಕಾರ್ಮಿಕರಾಗಿ, ಮೀನುಗಾರಿಕೆ ಕಾರ್ಮಿಕರಾಗಿ ದುಡಿಯಲು ಮಂಗಳೂರಿಗೆ ಬಂದಾಗ ಅವರೊಂದಿಗೆ ಬಂದ ಈ ಕಂದಮ್ಮಗಳಿಗೆ ಕನ್ನಡದ ಗಂಧಗಾಳಿಯೇ ಗೊತ್ತಿರಲಿಲ್ಲ. ಆದರೆ, ಶಾಲೆಯ ಶಿಕ್ಷಕರ ಅಪಾರ ಪ್ರೀತಿ, ವಿಶೇಷ ಬೋಧನಾ ವಿಧಾನ ಹಾಗೂ ನಿರಂತರ

> ಈ ಶಾಲೆಗೆ ಬಂದ ಮೇಲೆ ಟೀಚರ್ ಮತ್ತು ಫ್ರೆಂಡ್ಸ್ ನನಗೆ ಕನ್ನಡ ಕಲಿಸಿದರು. ನನಗೆ ಈಗ ಕನ್ನಡದಲ್ಲಿ ಪಾಠ ಓದಲು, ಬರೆಯಲು ಬರುತ್ತದೆ. ಪದ್ಯ, ಕಥೆ ಹೇಳುತ್ತೇನೆ, ಚಿತ್ರ ಬಿಡಿಸುತ್ತೇನೆ. ಶಾಲೆಯಲ್ಲಿ ಫ್ರೆಂಡ್ಸ್ ಜೊತೆ ಕನ್ನಡದಲ್ಲೇ ಮಾತಾಡುತ್ತೇನೆ ಎಂದು ಹೇಳಿದರು. -ಆಯುಷ್

ಕಾಳಜಿಯಿಂದಾಗಿ ಇಂದು ಈ ಮಕ್ಕಳು ಅಚ್ಚಗನ್ನಡದಲ್ಲೇ ಪಠ್ಯ ಓದುತ್ತಾರೆ, ಪದ್ಯ ಹಾಡುತ್ತಾರೆ, ರಸವತ್ತಾಗಿ ನಾಟಕವಾಡುತ್ತಾರೆ. ಮನೆಗಳಲ್ಲಿ ಹಿಂದಿ, ಉರ್ದು ಅಥವಾ ತೆಲುಗು ಮಾತನಾಡುವ ಈ ಮಕ್ಕಳಿಗೆ ಆರಂಭದಲ್ಲಿ ಕನ್ನಡ ಕಲಿಸುವುದು ಶಿಕ್ಷಕರಿಗೆ ಸವಾಲಾಗಿತ್ತು. ಆದರೆ, ಶಾಲೆಯ ಶಿಕ್ಷಕ ವೃಂದವು ಇವರನ್ನು ಪ್ರತ್ಯೇಕವಾಗಿ ಕಾಣದೇ ಅಕ್ಷರಮಾಲೆಯ ಚಟುವಟಿಕೆಗಳು, ಚಿತ್ರಕಲೆ, ಹಾಡು ಹಾಗೂ ನಾಟಕಗಳ ಮೂಲಕ ಕನ್ನಡವನ್ನು ಅತ್ಯಂತ ಸಲೀಸಾಗಿ ರಕ್ತಗತವಾಗಿಸಿದೆ. ಸ್ಥಳೀಯ ತುಳು, ಕನ್ನಡದ ಸಹಪಾಠಿಗಳೊಂದಿಗೆ ಬೆರೆತು ಆಟವಾಡುತ್ತಾ ಇವರು ಆಡುಭಾಷೆಯ ಸೊಗಡನ್ನೂ ಕರಗತ ಮಾಡಿಕೊಂಡಿದ್ದಾರೆ. ದಕ್ಷಿಣ ಕನ್ನಡ ಜಿ.ಪಂ. ಹಿರಿಯ ಪ್ರಾಥಮಿಕ ಶಾಲೆ, ಸ್ಯಾಂಡ್‌ಪಿಟ್ ಬೆಂಗ್ರೆಯ ಮುಖ್ಯ ಶಿಕ್ಷಕಿ ಉಮಾಲಕ್ಷ್ಮಿ ಕೆ.ಮಾತನಾಡಿ, ನಮ್ಮ

> ಅಪ್ಪ ಇಲ್ಲಿ ಕೆಲಸ ಮಾಡುತ್ತಾರೆ. ನಾನು ಈ ಶಾಲೆಯಲ್ಲಿ ಕಲಿಯುತ್ತಿದ್ದೇನೆ. ಶಾಲೆಯ ಮಕ್ಕಳು, ಫ್ರೆಂಡ್ಸ್ ಜೊತೆ ಚೆನ್ನಾಗಿ ಕನ್ನಡ ಮಾತಾಡುತ್ತೇನೆ, ಸಂಜೆ ಆಟ ಆಡುತ್ತೇನೆ. ಕನ್ನಡ ಕಲಿಯುವುದರಿಂದ ನನಗೆ ತುಂಬಾ ಪ್ರಯೋಜನವಾಗಿದೆ ಎನ್ನುತ್ತಾರೆ. -ವಿದ್ಯಾರ್ಥಿನಿ ಪದ್ಮ.

ಶಾಲೆಗೆ ಬಿಹಾರ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಗುಜರಾತ್ ಮುಂತಾದ ದೇಶದ ವಿವಿಧ ಕಡೆಗಳಿಂದ ವಲಸೆ ಕಾರ್ಮಿಕರ ಮಕ್ಕಳು ದಾಖಲಾಗಿದ್ದಾರೆ. 1ನೇ ತರಗತಿಯಿಂದ ದಾಖಲಾದವರು ಬೇಗ ಕಲಿಯುತ್ತಾರೆ, 4 ಅಥವಾ 5ನೇ ತರಗತಿಗೆ ಬಂದ ಮಕ್ಕಳಿಗೆ ಆರಂಭದಲ್ಲಿ ಕಷ್ಟವಾದರೂ ಶಿಕ್ಷಕರ ನಿರಂತರ ಪ್ರಯತ್ನದಿಂದ ಇಂದು ಸ್ಪಷ್ಟವಾಗಿ ಕನ್ನಡ ಓದುತ್ತಾರೆ, ಬರೆಯುತ್ತಾರೆ. ಪಠ್ಯ ಮಾತ್ರವಲ್ಲದೇ ನಾಟಕ, ಹಾಡು, ಸಂಭಾಷಣೆ ಎಲ್ಲದರಲ್ಲೂ ನಮ್ಮ ಸ್ಥಳೀಯ ಮಕ್ಕಳಿಗಿಂತಲೂ ಅದ್ಭುತವಾಗಿ ತೊಡಗಿಸಿಕೊಳ್ಳುತ್ತಾರೆ. ನೀವು ಶಾಲೆಯೊಳಗೆ ಬಂದರೆ ಯಾರು ಹೊರರಾಜ್ಯದವರು, ಯಾರು ನಮ್ಮೂರಿನವರು ಎಂದು ಗುರುತಿಸುವುದೇ ಅಸಾಧ್ಯ. ಅವರ ಅಕ್ಷರ ಬರವಣಿಗೆಯೂ ಮುತ್ತಿನಂತಿದೆ. ಇದು ನಮಗೆ ಅತ್ಯಂತ ಸಂತೋಷ ಮತ್ತು ಹೆಮ್ಮೆಯ ಸಂಗತಿ ಎನ್ನುತ್ತಾರೆ.